ಸಂಪುಟ 2, ಸಂಚಿಕೆ 19

# ನ್ಯೂ ಇಂಡಿಯಾ ಸಮಾಚಾರ

ಏಪ್ರಿಲ್ 1-15, 2022
ಉಚಿತ ವಿತರಣೆಗಾಗಿ



# ಭಾರತ ನಿಮಗಾಗಿ... ಯಾವಾಗಲೂ

ರಷ್ಯಾ ಉಕ್ರೇನ್ ಯುದ್ಧದ ಸಂಕಷ್ಟದ ಅವಧಿಯಲ್ಲಿ "ಆಪರೇಷನ್ ಗಂಗಾ" ಜೀವ ಉಳಿಸುವ ಕಾರ್ಯಾಚರಣೆಯಾಯಿತು. ತ್ರಿವರ್ಣ ಧ್ವಜದ ಶಕ್ತಿಗೆ ದೇಶ ಮತ್ತು ಜಗತ್ತು ಸಾಕ್ಷಿಯಾಯಿತು, ಭಾರತೀಯರು ಜಗತ್ತಿನ ಎಲ್ಲಿಯಾದರೂ ಯಾವುದೇ ವಿಪತ್ತಿನಲ್ಲೂ ಸುರಕ್ಷಿತವಾಗಿರುತ್ತಾರೆ ಎಂಬ ಸಂದೇಶವನ್ನು ಅದು ಸಾರಿತು.

# ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ತಿರುವು

ತನ್ನ ಇತಿಹಾಸವನ್ನು ಸಂರಕ್ಷಿಸುವುದು ಪ್ರತಿಯೊಂದು ರಾಷ್ಟ್ರದ ಜವಾಬ್ದಾರಿಯಾಗಿದೆ. ಇತಿಹಾಸದ ಘಟನೆಗಳು ನಮಗೆ ಕಲಿಸುತ್ತವೆ ಮತ್ತು ಮುಂದುವರಿಯಲು ಮಾರ್ಗದರ್ಶನ ಮಾಡುತ್ತವೆ. ಈ ದೃಷ್ಟಿಯಿಂದ ಅಮೃತ ಮಹೋತ್ಸವ ವರ್ಷದಲ್ಲಿಯೇ ರಾಷ್ಟ್ರಕ್ಕೆ ಸಮರ್ಪಿತವಾದ ಜಲಿಯನ್ ವಾಲಾಬಾಗ್ ರಾಷ್ಟ್ರೀಯ ಸ್ಮಾರಕದ ನವೀಕರಿಸಿದ ಸಂಕೀರ್ಣವನ್ನು ಉದ್ಘಾಟಿಸಿರುವುದು ಪ್ರಶಂಸೆಗೆ ಅರ್ಹವಾಗಿದೆ. ಭಾರತವು ಏಪ್ರಿಲ್ 13, 2022 ರಂದು ಜಲಿಯನ್ ವಾಲಾ ಬಾಗ್ ಹತ್ಯಾಕಾಂಡದ 103 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ.



## ನವೀಕರಿಸಿದ ಜಲಿಯನ್ ವಾಲಾ ಬಾಗ್ ರಾಷ್ಟ್ರೀಯ ಸ್ಮಾರಕ ಸಂಕೀರ್ಣದ ವೈಶಿಷ್ಟ್ಯಗಳು:

- ಪ್ರವೇಶ ದ್ವಾರದಲ್ಲಿ ಶಹೀದ್ ಉಧಮ್ ಸಿಂಗ್ ಪ್ರತಿಮೆ.
- ಹೆರಿಟೇಜ್ ಓಣಿಯ ಗೋಡೆಗಳನ್ನು ಭಿತ್ತಿಚಿತ್ರಗಳು ಮತ್ತು ಶಿಲ್ಪಗಳಿಂದ ಅಲಂಕರಿಸಲಾಗಿದೆ
- ಜಲ್ ಕುಂಡ್ ಹುತಾತ್ಮರಿಗೆ ಆವರಣದಲ್ಲಿ ಶ್ರದ್ಧಾಂಜಲಿ.
- ಹುತಾತ್ಮರ ಕೊಡುಗೆ ಮತ್ತು ನಿರ್ದಯ ಹತ್ಯಾಕಾಂಡದ ಬಗ್ಗೆ ನಾಲ್ಕು ಗ್ಯಾಲರಿಗಳಲ್ಲಿ ಪ್ರಸ್ತುತಪಡಿಸಲಾಗಿದೆ.
- ಉದ್ಯಾನದ ಗೋಡೆಗಳ ಮೇಲೆ ಗುಂಡಿನ ಗುರುತುಗಳನ್ನು ಸಂರಕ್ಷಿಸಲಾಗಿದೆ.
- ಮೋಕ್ಷ ಸ್ಥಳ, ಅಮರ್ ಜ್ಯೋತಿ ಮತ್ತು ಧ್ವಜ್ ಮಸ್ತುಲ್ ಅನ್ನು ಒಳಗೊಂಡಂತೆ ಅನೇಕ ಹೊಸ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ಘಟನೆಗಳನ್ನು ವಿವರಿಸುವ ದೈನಂದಿನ ಧ್ವನಿ ಮತ್ತು ಬೆಳಕಿನ ಪ್ರದರ್ಶನವನ್ನು ಪ್ರಾರಂಭಿಸಲಾಗಿದೆ.

“ಏಪ್ರಿಲ್ 13, 1919 ರ ಆ 10 ನಿಮಿಷಗಳು ನಮ್ಮ ಸ್ವಾತಂತ್ರ್ಯ ಹೋರಾಟದ ಅಮರ ಕಥೆಯಾಯಿತು, ಅದರಿಂದಾಗಿ ನಾವು ಇಂದು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸಲು ಸಾಧ್ಯವಾಯಿತು. ಇಂತಹ ಸಂದರ್ಭದಲ್ಲಿ, ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ಆಧುನೀಕರಿಸಿದ ಜಲಿಯನ್ ವಾಲಾಬಾಗ್ ಸ್ಮಾರಕದ ಲೋಕಾರ್ಪಣೆ ನಮಗೆಲ್ಲರಿಗೂ ದೊಡ್ಡ ಸ್ಫೂರ್ತಿಯಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

# ನ್ಯೂ ಇಂಡಿಯಾ ಸಮಾಚಾರ

ಸಂಪುಟ 2, ಸಂಚಿಕೆ 19 ಏಪ್ರಿಲ್ 1-15, 2022

ಸಂಪಾದಕರು
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪಿಐಬಿ,
ನವದೆಹಲಿ

ಹಿರಿಯ ಸಲಹಾ ಸಂಪಾದಕರು
**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕರು
**ವಿಭೋರ್ ಶರ್ಮಾ**

ಸಹಾಯಕ ಸಲಹಾ ಸಂಪಾದಕರು
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ಅನಿಲ್ ಪಟೇಲ್** (ಗುಜರಾತಿ),
**ನದೀಮ್ ಅಹ್ಮದ್** (ಉರ್ದು),
**ಸೋನಿತ್ ಕುಮಾರ್ ಗೋಸ್ವಾಮಿ** (ಅಸ್ಸಾಮಿ),
**ವಿನಯಾ ಪಿ.ಎಸ್.** (ಮಲಯಾಳಂ)
**ಪಾಲ್ಮಿ ರಕ್ಷಿತ್** (ಬಂಗಾಳಿ)
**ಹರಿಹರ ಪಂಡಾ** (ಒಡಿಯಾ)

ಹಿರಿಯ ವಿನ್ಯಾಸಕರು
**ಶ್ಯಾಮ್ ಶಂಕರ್ ತಿವಾರಿ**
**ರವೀಂದ್ರ ಕುಮಾರ್ ಶರ್ಮಾ**

ವಿನ್ಯಾಸಕರು
**ದಿವ್ಯಾ ತಲ್ವಾರ್, ಅಭಯ್ ಗುಪ್ತಾ**




**13 ಭಾಷೆಗಳಲ್ಲಿ ಲಭ್ಯವಿರುವ ನ್ಯೂ ಇಂಡಿಯಾ ಸಮಾಚಾರ್ ಓದಲು ಕ್ಲಿಕ್ ಮಾಡಿ**
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ್ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in/archive.aspx

## ಒಳಪುಟಗಳಲ್ಲಿ

## ಹೆಚ್ಚುತ್ತಿರುವ ಭಾರತದ ವರ್ಚಸ್ಸಿನ ಪ್ರತಿಬಿಂಬ




**ಮುಖಪುಟ ಲೇಖನ**
ಯುದ್ಧದ ಬಿಕ್ಕಟ್ಟಿನ ನಡುವೆ ಉಕ್ರೇನ್‌ನಿಂದ ತನ್ನ ಪ್ರತಿಯೊಬ್ಬ ನಾಗರಿಕನನ್ನೂ ತವರು ದೇಶಕ್ಕೆ ಕರೆತರುವ ಮೂಲಕ ಭಾರತವು ಹೊಸ ಮಾದರಿಯನ್ನು ಸೃಷ್ಟಿಸಿದೆ. |14-28

**ಪ್ರಮುಖ ಯೋಜನೆ**
**ಪರಿಸರ ಸಂರಕ್ಷಣೆಗೆ ಸಹಕಾರಿ**



ಭಾರತ ಸರ್ಕಾರವು ಪರಿಸರವನ್ನು ಸ್ವಚ್ಛವಾಗಿಡಲು ಶುದ್ಧ ಇಂಧನದಿಂದ ಚಲಿಸುವ ವಾಹನಗಳ ಖರೀದಿಯನ್ನು ಉತ್ತೇಜಿಸುತ್ತಿದೆ. 34-35

**ಭಾರತದ ಸ್ವಾತಂತ್ರ್ಯದ ತೀರ್ಥಸ್ಥಳ**
**ದಾಂಡಿ**



ಗುಜರಾತಿನ ನವಸಾರಿ ಜಿಲ್ಲೆಯಿಂದ 16 ಕಿಲೋಮೀಟರ್ ದೂರದಲ್ಲಿರುವ ದಾಂಡಿ, ಭಾರತದ ಅತ್ಯಂತ ಪ್ರಸಿದ್ಧ ಹಳ್ಳಿ ಮಾತ್ರವಲ್ಲ, ಇದು ಎಂದೆಂದಿಗೂ ಮರೆಯಲಾಗದ 92 ವರ್ಷಗಳಷ್ಟು ಹಳೆಯದಾದ ಜಾಗತಿಕ ಮಹತ್ವವನ್ನು ಹೊಂದಿದೆ.. 40-43


ಸುದ್ದಿ ತುಣುಕುಗಳು |4-5

ಮೊದಲ ಸ್ವಾತಂತ್ರ್ಯ ಹೋರಾಟದ ನಾಡು | 6

ವ್ಯಕ್ತಿತ್ವ: ಪರಮವೀರ್ ಮೇಜರ್ ಧನ್ ಸಿಂಗ್ ಥಾಪಾ | 7

ಮಹಿಳಾ ಶಕ್ತಿಗೆ ನಮನ | 8-10

ಸಂಪುಟ ನಿರ್ಧಾರಗಳು | 11

ಹಿತಕರ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ 'ಕವಚ' ಪಡೆದ ರೈಲ್ವೇ | 12-13

ಬಜೆಟ್ ವೆಬಿನಾರ್: ರಾಷ್ಟ್ರದ ಪ್ರಗತಿಗೆ ಹೊಸ ವೇದಿಕೆ | 29-31

ಕ್ರೀಡೆ-ರಕ್ಷಣಾ ಕ್ಷೇತ್ರದಲ್ಲಿ ಭಾರತವನ್ನು ತಡೆಯಲಾಗುವುದಿಲ್ಲ | 32-33

ಇ-ನ್ಯಾಮ್: ಒಂದು ರಾಷ್ಟ್ರ ಒಂದು ಮಾರುಕಟ್ಟೆ ಪರಿಕಲ್ಪನೆಗೆ ಉತ್ತೇಜನ | 36-37

ಕೋವಿಡ್ ವಿರುದ್ಧ ಸಮರ: 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಲಸಿಕೆ ಲಭ್ಯ | 38-39

ಜನೌಷಧಿ ಕೇಂದ್ರ : ಜನಸಾಮಾನ್ಯರಿಗೆ ಉಪಯುಕ್ತ | 44



**ಮುದ್ರಣ ಮತ್ತು ಪ್ರಕಟಣೆ: ಸತ್ಯೇಂದ್ರ ಪ್ರಕಾಶ್,** ಪ್ರಧಾನ ಮಹಾನಿರ್ದೇಶಕರು, ಬ್ಯೂರೋ ಆಫ್ ಔಟ್ ರೀಚ್ ಮತ್ತು ಸಂಪರ್ಕದ ಪರವಾಗಿ.
**ಮುದ್ರಣಾಲಯ** : ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್, ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ, ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003. **ಸಂಪರ್ಕ ವಿಳಾಸ :** ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಕಮ್ಯುನಿಕೇಷನ್ 2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003. **ಇಮೇಲ್ :** response-nis@pib.gov.in, **RNI No. :** DELKAN/2020/78828

# ಸಂಪಾದಕೀಯ

ಶುಭಾಶಯಗಳು!

**जननी जन्मभूमिश्च स्वर्गादपि गरीयसी**

**ತಾಯಿ ಮತ್ತು ಹುಟ್ಟಿದ ಸ್ಥಳ ಸ್ವರ್ಗಕ್ಕಿಂತ ಮಿಗಿಲಾದುದು.**

ಜಗತ್ತಿನಲ್ಲಿ ಎಲ್ಲೇ ಇದ್ದರೂ ಭಾರತೀಯರು ದೇಶಕ್ಕೆ ಅಮೂಲ್ಯ ಆಸ್ತಿ. ಇದರ ಪರಿಣಾಮವಾಗಿ, ಜಗತ್ತಿನಲ್ಲಿ ಎಲ್ಲಿಯಾದರೂ ನೈಸರ್ಗಿಕ ವಿಕೋಪ ಸಂಭವಿಸಿದಾಗ, ಆಂತರಿಕ ಅಥವಾ ಬಾಹ್ಯ ಸಂಘರ್ಷಗಳಿಂದ ಅಸ್ಥಿರತೆ ಉಂಟಾದಾಗ, ಪ್ರತಿಯೊಬ್ಬ ಭಾರತೀಯನೂ ಮುಖ್ಯ ಮತ್ತು ಅವರನ್ನು ಸುರಕ್ಷಿತವಾಗಿ ತವರಿಗೆ ಕರೆತರಲಾಗುತ್ತದೆ ಎಂಬ ಸ್ಪಷ್ಟ ಸಂದೇಶವನ್ನು ನವ ಭಾರತವು ತನ್ನ ನಾಗರಿಕರಿಗೆ ನೀಡಿದೆ. ರಷ್ಯಾ-ಉಕ್ರೇನ್ ಯುದ್ಧದ ಪರಿಣಾಮವಾಗಿ ಉಕ್ರೇನ್‌ನಲ್ಲಿದ್ದ ಭಾರತೀಯ ನಾಗರಿಕರು ಅಪಾಯದಲ್ಲಿದ್ದಾಗ, ಪ್ರಧಾನಿ ನರೇಂದ್ರ ಮೋದಿ ಅವರು "ಆಪರೇಷನ್ ಗಂಗಾ" ಪ್ರಾರಂಭಿಸಿದರು, 20,000 ಕ್ಕೂ ಹೆಚ್ಚು ಜನರನ್ನು ರಕ್ಷಿಸಿದರು.

ಅಲ್ಲಿಂದ ಹಿಂದಿರುಗಿದ ಭಾರತೀಯರ ಕಥೆಗಳ ಮೂಲಕ ದೇಶವು ಸತ್ಯವನ್ನು ಅರಿತುಕೊಂಡಿತು. ಭಾರತೀಯ ನಾಗರಿಕರು ಮತ್ತು ವಿಶ್ವದ ಇತರ ದೇಶಗಳ ನಾಗರಿಕರು ಸಹ ತ್ರಿವರ್ಣ ಧ್ವಜದ ಶಕ್ತಿಯನ್ನು ನೋಡಿದರು ಮತ್ತು ಅನುಭವಿಸಿದರು. ಇದು ಭಾರತದ ಬೆಳೆಯುತ್ತಿರುವ ಜಾಗತಿಕ ಶಕ್ತಿಯ ಪರಿಣಾಮವಾಗಿದೆ, ಉಕ್ರೇನ್ ಬಿಕ್ಕಟ್ಟಿನ ಸಮಯದಲ್ಲಿ, ಭಾರತವು "ಆಪರೇಷನ್ ಗಂಗಾ" ಮೂಲಕ ಯುದ್ಧ ವಲಯದಿಂದ ಸಾವಿರಾರು ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಅವರ ಮನೆಗಳಿಗೆ ತಲುಪಿಸಿತು.

ತನ್ನ ಪರಂಪರಾಗತ ಮೌಲ್ಯಗಳಿಗೆ ಬದ್ಧವಾಗಿರುವ ಮೂಲಕ, ಭಾರತವು ಅಂತರರಾಷ್ಟ್ರೀಯ ಹೊಣೆಗಾರಿಕೆಯನ್ನೂ ಪಾಲಿಸುತ್ತಿದೆ. ಈ ಬದ್ಧತೆಯ ಪರಿಣಾಮವಾಗಿ, ತನ್ನ ಸ್ವಂತ ನಾಗರಿಕರ ಜೊತೆಗೆ ಇತರ ದೇಶಗಳ ಜನರನ್ನೂ ರಕ್ಷಿಸಿತು. ಇತ್ತೀಚಿನ ವರ್ಷಗಳಲ್ಲಿ, ಅಫ್ಘನ್ ಬಿಕ್ಕಟ್ಟು ಅಥವಾ ಕೋವಿಡ್ ಲಾಕ್‌ಡೌನ್‌ನಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದ ತನ್ನ ಜನರನ್ನು ಮರಳಿ ಕರೆತರುವ ವಿಷಯದಲ್ಲಿ ಭಾರತವು ತನ್ನ ಜನರ ಪರವಾಗಿ ನಿಂತಿದೆ.

ದಕ್ಷಿಣ ಸುಡಾನ್ ಮತ್ತು ಯೆಮೆನ್ ಬಿಕ್ಕಟ್ಟಿನ ಸಮಯದಲ್ಲಾಗಲಿ ಅಥವಾ ನೇಪಾಳ, ಇಂಡೋನೇಷ್ಯಾ ಮತ್ತು ಮೊಜಾಂಬಿಕ್‌ನಲ್ಲಿ ನೈಸರ್ಗಿಕ ವಿಕೋಪದ ಸಮಯದಲ್ಲಿ ಭಾರತೀಯರನ್ನು ಸ್ಥಳಾಂತರಿಸುವುದಾಗಿರಲಿ, ಅದು ಆ ದೇಶಗಳಿಗೆ ಮತ್ತು ಅವರ ಜನರಿಗೆ ಕಾಳಜಿಯ ವಿಷಯವಾಗಿದ್ದರೂ ಭಾರತವು ಯಾವಾಗಲೂ ಬೆಂಬಲವಾಗಿ ನಿಂತಿದೆ. ಇದರಿಂದಾಗಿಯೇ ನವಭಾರತದ ನಾಯಕತ್ವದಲ್ಲಿ ಭಾರತೀಯರು ಮತ್ತು ಯುವಜನರ ನಂಬಿಕೆ ಬೆಳೆದಿದೆ. ಒಬ್ಬ ಭಾರತೀಯನು ಭಾರತದ ಪ್ರಜೆಯಾಗಿರುವುದರಿಂದಲೇ ಅವನು ಜಗತ್ತಿನಲ್ಲಿ ಎಲ್ಲಿಗೆ ಹೋದರೂ ಸುರಕ್ಷಿತವಾಗಿರುತ್ತಾನೆ ಎಂದು ಭರವಸೆ ಈಗ ಮೂಡಿದೆ. ನವ ಭಾರತವು ತನ್ನ ಪ್ರಜೆಗಳನ್ನು ರಕ್ಷಿಸಲು ಹೇಗೆ ಸಿದ್ಧವಾಗಿದೆ ಎಂಬುದು ಈ ಸಂಚಿಕೆಯ ಮುಖಪುಟ ಲೇಖನವಾಗಿದೆ.

ಈ ಸಂಚಿಕೆಯಲ್ಲಿ, ಪರಮವೀರ್ ಮೇಜರ್ ಧನ್ ಸಿಂಗ್ ಥಾಪಾ ವ್ಯಕ್ತಿತ್ವ ವಿಭಾಗದಲ್ಲಿ ಕಾಣಿಸಿಕೊಂಡಿದ್ದರೆ, ಇತರ ಲೇಖನಗಳಲ್ಲಿ ಮರುವಿನ್ಯಾಸಗೊಳಿಸಲಾದ ಜಲಿಯನ್ ವಾಲಾಬಾಗ್, ಮಹಿಳಾ ಶಕ್ತಿಗೆ ನಮನ, ರೈತರಿಗೆ ವರದಾನವಾಗುತ್ತಿರುವ ಇ-ನ್ಯಾಮ್ ಯೋಜನೆ, ಪರಿಸರ ಸಂರಕ್ಷಣೆಯನ್ನು ಬಲಪಡಿಸುವ "ಫೇಮ್ ಇಂಡಿಯಾ" ಯೋಜನೆ, ಮತ್ತು ಉತ್ಕಲ್ ದಿವಸ್ ಕುರಿತ ವಿಶೇಷ ಲೇಖನವಿದೆ. ಜೊತೆಗೆ ಏಪ್ರಿಲ್ 13 ರಂದು ಉಪ್ಪಿನ ಸತ್ಯಾಗ್ರಹಕ್ಕೆ 92 ವರ್ಷಗಳು ಪೂರ್ಣಗೊಳ್ಳುವ ನೆನಪಿಗಾಗಿ ಅಮೃತ ಮಹೋತ್ಸವದ ಸಂಚಿಕೆಯಲ್ಲಿ ಸತ್ಯಾಗ್ರಹಿಗಳ ಬಗೆಗೆ ಲೇಖನವನ್ನು ನೀಡಲಾಗಿದೆ.

ಭಾರತದ ಕೋವಿಡ್ ವಿರುದ್ಧದ ಸಮರದ ಅಪ್ ಡೇಟ್, ಸುರಕ್ಷತೆಗಾಗಿ ಕವಚ ಪಡೆದ ರೈಲ್ವೇ, 'ಜನೌಷಧಿಯಿಂದ ಅಗ್ಗದ ಔಷಧಿಗಳ ಪೂರೈಕೆ ಮತ್ತು ಸಾಮಾನ್ಯ ಬಜೆಟ್‌ಗೆ ಹೊಸ ನಿರ್ದೇಶನ ವಿಶೇಷ ಆಕರ್ಷಣೆಗಳಾಗಿವೆ.

ದಯಮಾಡಿ ನಿಮ್ಮ ಸಲಹೆಗಳನ್ನು ನಮ್ಮ ಇ-ಮೇಲ್ response-nis@pib.gov.in ಗೆ ಕಳುಹಿಸಿ.

**(ಜೈದೀಪ್ ಭಟ್ನಾಗರ್)**

# ಅಂಚೆ ಪೆಟ್ಟಿಗೆ




ನನ್ನ ಸ್ನೇಹಿತ ಒಮ್ಮೆ ನನಗೆ ನ್ಯೂ ಇಂಡಿಯಾ ಸಮಾಚಾರ್ ಪತ್ರಿಕೆಯ ಪ್ರತಿಯನ್ನು ತೋರಿಸಿದನು. ಪತ್ರಿಕೆಯು ಭಾರತ ಸರ್ಕಾರದ ವಿವಿಧ ಯೋಜನೆಗಳು ಮತ್ತು ಉಪಕ್ರಮಗಳ ಪ್ರತಿಯೊಂದು ಅಂಶವನ್ನು ಒಳಗೊಂಡಿದೆ. ಇದು ನಮ್ಮ ಶಾಲೆಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಉಪಯುಕ್ತವಾದ ಅತ್ಯಂತ ಮಾಹಿತಿಯುಕ್ತ ಪತ್ರಿಕೆಯಾಗಿದೆ. ಗ್ರಂಥಾಲಯದಲ್ಲಿ ಇರಿಸಲು ಮುದ್ರಣ ಪ್ರತಿಗಾಗಿ ಚಂದಾದಾರಿಕೆಯನ್ನು ಪಡೆಯುವ ವಿಧಾನವನ್ನು ನಮಗೆ ತಿಳಿಸಬೇಕೆಂದು ವಿನಂತಿಸುತ್ತೇವೆ.

**ಶ್ರೀನಿಶಾ ಕೆ ಟಿ**
sreenishabineesh@gmail.com

ನಿಮ್ಮ ಕಠಿಣ ಪರಿಶ್ರಮಕ್ಕೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ತುಂಬಾ ಸಂತೋಷವಾಗಿದೆ. ಎಲ್ಲ ಭಾರತೀಯರಿಗೂ ಭಾರತಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಯೋಜನೆಗಳನ್ನು ತಿಳಿದುಕೊಳ್ಳಲು, ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳಿಗೆ ಈ ಪತ್ರಿಕೆ ತುಂಬಾ ಉಪಯುಕ್ತ.

ganeshreigns1999@gmail.com

ನಾನು ಈಗಷ್ಟೇ ನ್ಯೂ ಇಂಡಿಯಾ ಸಮಾಚಾರ್ ಮಾರ್ಚ್ 01-15ರ ಸಂಚಿಕೆಯನ್ನು ಓದಿದೆ. ಉತ್ತಮವಾದ ಮತ್ತು ತಿಳಿವಳಿಕೆ ನೀಡುವ ಲೇಖನಗಳ ಸಂಪತ್ತು ಇದೆ. ಉತ್ತಮ ಕೆಲಸವನ್ನು ಮುಂದುವರಿಸುತ್ತಿರುವುದಕ್ಕಾಗಿ ಧನ್ಯವಾದಗಳು.

ಎಮ್ಯಾನುಯೆಲ್ ಜಾನ್ ಪತ್ರಾಸ್
ejpatras@gmail.com

ನಿಮ್ಮ ನ್ಯೂ ಇಂಡಿಯಾ ಸಮಾಚಾರ್ ಪತ್ರಿಕೆಯು ತುಂಬಾ ಉಪಯುಕ್ತ ಮತ್ತು ಮಾಹಿತಿಯುಕ್ತವಾಗಿದೆ. ನಾನು ಅದನ್ನು ನಿಯಮಿತವಾಗಿ ಓದುತ್ತೇನೆ ಮತ್ತು ಅದರ ಲೇಖನಗಳು ಮತ್ತು ವೈಶಿಷ್ಟ್ಯಗಳನ್ನು ನನ್ನ ಪತ್ರಿಕೆ "IQBAL E KASHMIR" ನಲ್ಲಿ ಪ್ರಕಟಿಸುತ್ತೇನೆ. ಪತ್ರಿಕೆಯು ಭಾರತ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಎಲ್ಲಾ ಮಾಹಿತಿಯನ್ನು ಹೊಂದಿದೆ, ಇದು ನಮ್ಮ ಸುತ್ತಲೂ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳನ್ನು ತಿಳಿಯಲು ಸಹಾಯ ಮಾಡುತ್ತದೆ. ನೀವು ಮತ್ತು ನಿಮ್ಮ ತಂಡವು ಪ್ರತಿ ಹಂತದಲ್ಲೂ ತಮ್ಮ ಅತ್ಯುತ್ತಮ ಪ್ರಯತ್ನ ಮಾಡುತ್ತಿರುವುದು ಕಾಣುತ್ತಿದೆ. ಮುಂದೊಂದು ದಿನ ಪತ್ರಿಕೆ ದೇಶದ ಅತ್ಯುತ್ತಮ ನಿಯತಕಾಲಿಕೆಗಳಲ್ಲಿ ಒಂದಾಗುವುದು ಖಂಡಿತ.

ಮೊಹಮ್ಮದ್ ಇಕ್ಬಾಲ್
Iqbalekashmir@gmail.com

**ಸಂಪರ್ಕ ವಿಳಾಸ: ಕೊಠಡಿ ಸಂಖ್ಯೆ-278, ಬ್ಯೂರೋ ಆಫ್ ಔಟ್ರೀಚ್ ಮತ್ತು ಕಮ್ಯುನಿಕೇಷನ್,**
**2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003**
**ಇ-ಮೇಲ್:** response-nis@pib.gov.in



## ಮಹತ್ವದ ನಿರ್ಧಾರ

# ಖಾಸಗಿ ವೈದ್ಯಕೀಯ ಕಾಲೇಜುಗಳ ಅರ್ಧದಷ್ಟು ಸೀಟುಗಳು ಈಗ ಸರ್ಕಾರಿ ಕಾಲೇಜುಗಳಷ್ಟೇ ಶುಲ್ಕವನ್ನು ಹೊಂದಿರುತ್ತವೆ

ವೈದ್ಯಕೀಯ ಶಿಕ್ಷಣ ಪಡೆಯಲು ಉತ್ಸುಕರಾಗಿರುವ ಲಕ್ಷಾಂತರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಇನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ 50ರಷ್ಟು ಸೀಟುಗಳಿಗೆ ಸರ್ಕಾರಿ ಕಾಲೇಜುಗಳಷ್ಟೇ ಶುಲ್ಕ ವಿಧಿಸಲಾಗುತ್ತದೆ. ಮಾರ್ಚ್ 7 ರಂದು ಜನೌಷಧಿ ದಿವಸ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಮಾರ್ಗಸೂಚಿ ಅನ್ವಯವಾಗಲಿದೆ. ಖಾಸಗಿ ವಿಶ್ವವಿದ್ಯಾಲಯಗಳಲ್ಲದೆ, ಈ ನಿರ್ಧಾರವು ಡೀಮ್ಡ್ ವಿಶ್ವವಿದ್ಯಾಲಯಗಳಿಗೂ ಅನ್ವಯಿಸುತ್ತದೆ. ಮೆರಿಟ್ ಆಧಾರದ ಮೇಲೆ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಈ ಪ್ರಯೋಜನಕ್ಕಾಗಿ ಮೊದಲು ಪರಿಗಣಿಸಲಾಗುತ್ತದೆ. ಕಳೆದ 7 ವರ್ಷಗಳಲ್ಲಿ, ಭಾರತ ಸರ್ಕಾರವು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ಕ್ಷೇತ್ರವನ್ನು ಬಲಪಡಿಸಲು ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ ಎಂಬುದು ಗಮನಿಸಬೇಕಾದ ಸಂಗತಿ. ಅಧಿಕ ಶುಲ್ಕದಿಂದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಇದು ದೊಡ್ಡ ಸಮಾಧಾನವನ್ನು ನೀಡುತ್ತದೆ. ಅಲ್ಲದೆ, ಇದು ವಿದೇಶಿ ವೈದ್ಯಕೀಯ ಕಾಲೇಜುಗಳಿಗೆ ಹೋಗುವ ಬದಲು ಭಾರತದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

## ಉತ್ತಮ ಕಲಾಕೃತಿಗಾಗಿ ಡೆಹ್ರಾಡೂನ್ ಶಾಲಾ ಬಾಲಕನನ್ನು ಶ್ಲಾಘಿಸಿದ ಪ್ರಧಾನಮಂತ್ರಿ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಾಲಕಾಲಕ್ಕೆ ದೇಶದ ಯುವ ಪೀಳಿಗೆ, ವಿಶೇಷವಾಗಿ ವಿದ್ಯಾರ್ಥಿಗಳ ಜೊತೆಗೆ ಸಂವಾದಗಳನ್ನು ನಡೆಸುವ ಮೂಲಕ ಅವರ ನೈತಿಕತೆಯನ್ನು ಹೆಚ್ಚಿಸುತ್ತಾರೆ. ಅದು 'ಮನ್ ಕಿ ಬಾತ್', 'ಪರೀಕ್ಷಾ ಪೇ ಚರ್ಚಾ' ಅಥವಾ ವೈಯಕ್ತಿಕ ಸಂವಾದಗಳ ಮೂಲಕವಾಗಿರಬಹುದು. ಇತ್ತೀಚಿನ ನಿದರ್ಶನದಲ್ಲಿ ಡೆಹ್ರಾಡೂನ್‌ನ 11 ನೇ ತರಗತಿಯ ವಿದ್ಯಾರ್ಥಿ ಅನುರಾಗ್ ರಮೋಲಾ ಅವರ ಪತ್ರಕ್ಕೆ ಉತ್ತರಿಸುವಾಗ, ಪ್ರಧಾನಿಯವರು ಆತನ ಕಲಾಕೃತಿಯನ್ನು ಶ್ಲಾಘಿಸಿದರು. ಅನುರಾಗ್ ರಮೋಲಾ ಅವರಿಗೆ ಕಲೆ ಮತ್ತು ಸಂಸ್ಕೃತಿಗಾಗಿ 2021 ರ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಮಕ್ಕಳ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಕಳೆದ ವರ್ಷ ಡಿಸೆಂಬರ್ ನಲ್ಲಿ ಅನುರಾಗ್ ಪೇಂಟಿಂಗ್ ಮಾಡಿದ್ದರು. ಭಾರತ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದ ಅಮೃತ ಮಹೋತ್ಸವ ಪೇಂಟಿಂಗ್ ವಿಷಯವಾಗಿತ್ತು. ಚಿತ್ರಕಲೆಯ ಜೊತೆಗೆ, ಅನುರಾಗ್ ಅವರು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪ್ರಧಾನಿ ಮೋದಿಗೆ ಪತ್ರವನ್ನೂ ಬರೆದಿದ್ದಾರೆ. ಅನುರಾಗ್ ಆಲೋಚನೆಗಳಿಂದ ಪ್ರಭಾವಿತರಾದ ಪ್ರಧಾನಿ ಪತ್ರದಲ್ಲಿ ಹೀಗೆ ಬರೆದಿದ್ದಾರೆ, "ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಚಿತ್ರಕಲೆಗಾಗಿ ಆಯ್ಕೆ ಮಾಡಲಾದ ಪತ್ರ ಮತ್ತು ಥೀಮ್‌ನಲ್ಲಿರುವ ನಿಮ್ಮ ಮಾತಿನಲ್ಲಿ ನಿಮ್ಮ ಸೈದ್ಧಾಂತಿಕ ಪ್ರಬುದ್ಧತೆ ಪ್ರತಿಫಲಿಸುತ್ತದೆ. ನೀವು ಹದಿಹರೆಯದಿಂದಲೂ ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ತಿಳಿವಳಿಕೆಯನ್ನು ಬೆಳೆಸಿಕೊಂಡಿರುವುದಕ್ಕೆ ಮತ್ತು ಜವಾಬ್ದಾರಿಯುತ ನಾಗರಿಕರಾಗಿ ದೇಶದ ಅಭಿವೃದ್ಧಿಯಲ್ಲಿ ನಿಮ್ಮ ಪಾತ್ರದ ಬಗ್ಗೆ ನಿಮಗೆ ತಿಳಿದಿರುವುದಕ್ಕೆ ನನಗೆ ಸಂತೋಷವಾಗಿದೆ.". ಅನುರಾಗ್‌ಗೆ ಸ್ಫೂರ್ತಿ ನೀಡಲು ನರೇಂದ್ರ ಮೋದಿ ಆಪ್ ಮತ್ತು ವೆಬ್‌ಸೈಟ್ narendramodi.in ನಲ್ಲಿ ಈ ಪೇಂಟಿಂಗ್ ಅನ್ನು ಅಪ್‌ಲೋಡ್ ಮಾಡಲಾಗಿದೆ.



ಮುಂಗೇರ್ ಜನರ ವರ್ಷಗಳಷ್ಟು ಹಿಂದಿನ ಬೇಡಿಕೆ ಈಡೇರಿಕೆ



## ಶ್ರೀಕೃಷ್ಣ ಸೇತು ಸಂಚಾರಕ್ಕೆ ಮುಕ್ತ; ಮುಂಗೇರ್- ಖಗರಿಯಾ ನಡುವಿನ ಅಂತರ 100 ಕಿಮೀ ಕಡಿತ

ಬಿಹಾರದ ಮುಂಗೇರ್ ಶ್ರೀಮಂತ ಇತಿಹಾಸ, ಶಿಕ್ಷಣ, ಸಂಸ್ಕೃತಿ ಮತ್ತು ವ್ಯಾಪಾರಕ್ಕೆ ಹೆಸರುವಾಸಿಯಾಗಿದೆ. ಇದು ಬಿಹಾರದ ಪ್ರಮುಖ ಪ್ರವಾಸಿ ಮತ್ತು ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ. ಮೊದಲು ಜನರು ಉತ್ತರ ಬಿಹಾರಕ್ಕೆ ಹೋಗಲು 70 ಕಿಮೀ ದೂರದ ಮೊಕಾಮಾದಲ್ಲಿನ ರಾಜೇಂದ್ರ ಸೇತು ಮತ್ತು 75 ಕಿಮೀ ದೂರದ ಭಾಗಲ್ಪುರದ ವಿಕ್ರಮಶಿಲಾ ಸೇತುವೆಯನ್ನು ಬಳಸಬೇಕಾಗಿತ್ತು. 696 ಕೋಟಿ ವೆಚ್ಚದಲ್ಲಿ 14.5 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ 333B ಅಡಿಯಲ್ಲಿ ಗಂಗಾ ನದಿಯ ಮೇಲೆ ರೈಲ್-ಕಮ್-ರೋಡ್ ಸೇತುವೆ ಯೋಜನೆಯನ್ನು ಪೂರ್ಣಗೊಳಿಸುವುದರೊಂದಿಗೆ ಈ ಸಮಸ್ಯೆಯನ್ನು ಪರಿಹರಿಸಲಾಗಿದೆ. ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಸೇತುವೆಯನ್ನು ಇತ್ತೀಚೆಗೆ ಉದ್ಘಾಟಿಸಿದರು. ಸೇತುವೆಯ ಮೇಲೆ ಸಂಚಾರ ಆರಂಭವಾದ ನಂತರ, ಮುಂಗೇರ್‌ನಿಂದ ಖಗರಿಯಾ ನಡುವಿನ ಅಂತರವು 102 ಕಿಮೀ ಮತ್ತು ಮುಂಗೇರ್-ಬೆಗೂಸರಾಯ ನಡುವಿನ ಅಂತರವು 20 ಕಿಮೀ ಕಡಿಮೆಯಾಗಿದೆ. ಈ ಸೇತುವೆಯ ನಿರ್ಮಾಣದಿಂದ, ಮುಂಗೇರ್‌ನಿಂದ ಖಗರಿಯಾ, ಸಹರ್ಸಾಗೆ ಸುಮಾರು 3 ಗಂಟೆಗಳು ಮತ್ತು ಸಮಸ್ತಿಪುರದ ಬೆಗೂಸರಾಯಗೆ ಸುಮಾರು 45 ನಿಮಿಷಗಳ ಉಳಿತಾಯವಾಗಲಿದೆ. ಸಿದ್ಧ ಶಕ್ತಿಪೀಠದ ಚಂಡಿ ಸ್ಥಾನ, ಋಷಿ ಕುಂಡ, ಮತ್ತು ಸೀತಾ ಕುಂಡಕ್ಕೆ ಭೇಟಿ ನೀಡಲು ಬರುವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ. ಅಲ್ಲದೆ, ಇದು ಐತಿಹಾಸಿಕ ಮುಂಗೇರ್ ಕೋಟೆ ಮತ್ತು ಮುಂಗೇರ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವವರ ಸಂಖ್ಯೆಯನ್ನು ಹೆಚ್ಚಿಸುತ್ತದೆ.



## ಭಾರತವು 2021 ರಲ್ಲಿ 10,000 ಮೆ.ವ್ಯಾ.ಸೌರಶಕ್ತಿ ಸಾಮರ್ಥ್ಯದ ದಾಖಲೆಯನ್ನು ಸ್ಥಾಪಿಸಿದೆ

ಗ್ಲಾಸ್ಗೋದಲ್ಲಿ ನಡೆದ ಸಿಒಪಿ-26 ಸಭೆಯಲ್ಲಿ, 2070 ರ ವೇಳೆಗೆ ನೆಟ್ ಝೀರೋ (ನಿವ್ವಳ-ಶೂನ್ಯ) ಮಟ್ಟವನ್ನು ತಲುಪುವ ಭಾರತದ ಗುರಿಯನ್ನು ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದಾಗ ಜಗತ್ತು ಅದನ್ನು ಪ್ರಶಂಸಿಸಿತು. ಆಗ ಪ್ರಧಾನಿ ಮೋದಿಯವರು ಗುರಿ ನಿಗದಿ ಮಾಡಿದ್ದು ಮಾತ್ರವಲ್ಲದೆ ಮಾರ್ಗಸೂಚಿಯನ್ನೂ ಸಿದ್ಧಪಡಿಸಿದ್ದರು. ಇಂಧನ ವಲಯದ ಸಂಶೋಧನೆ ಮತ್ತು ಸಲಹಾ ಸಂಸ್ಥೆಯಾದ ಮರ್ಕಾಮ್ ಇಂಡಿಯಾ ರಿಸರ್ಚ್‌ನ ಇತ್ತೀಚಿನ ವರದಿಯೂ ಇದಕ್ಕೆ ಸಾಕ್ಷಿಯಾಗಿದೆ. ಈ ವರದಿಯ ಪ್ರಕಾರ, ಭಾರತವು 2021 ರಲ್ಲಿ ದಾಖಲೆಯ 10 ಸಾವಿರ ಮೆ.ವ್ಯಾ. ಸೌರಶಕ್ತಿ ಸಾಮರ್ಥ್ಯದ ಘಟಕವನ್ನು ಸ್ಥಾಪಿಸಿದೆ. ಇದು ವಾರ್ಷಿಕ ಆಧಾರದ ಮೇಲೆ 212 ಪ್ರತಿಶತದಷ್ಟು ಹೆಚ್ಚಾಗಿದೆ. ಡಿಸೆಂಬರ್ 2021 ರ ಅಂತ್ಯದ ವೇಳೆಗೆ ಭಾರತದಲ್ಲಿ ಸಂಚಿತ ಸೌರಶಕ್ತಿ ಸಾಮರ್ಥ್ಯವು ಸುಮಾರು 49,000 ಮೆ.ವ್ಯಾ. ಆಗಿತ್ತು ಎಂದು ವರದಿ ಹೇಳಿದೆ. ಸೌರ ಶಕ್ತಿಯು 2021 ರಲ್ಲಿ ಹೊಸ ವಿದ್ಯುತ್ ಸಾಮರ್ಥ್ಯದ 62 ಪ್ರತಿಶತದಷ್ಟು ಕೊಡುಗೆ ನೀಡಿತು, ಇದು ಇದುವರೆಗಿನ ಅತಿದೊಡ್ಡ ಪಾಲು. ಕಳೆದ ವರ್ಷದಲ್ಲಿ ಸ್ಥಾಪಿಸಲಾದ ಸೌರ ಸಾಮರ್ಥ್ಯದಲ್ಲಿ ಶೇ. 83 ರಷ್ಟು ದೊಡ್ಡ ಸೌರ ಯೋಜನೆಗಳು. ಇದು ವಾರ್ಷಿಕ ಆಧಾರದ ಮೇಲೆ ಶೇ.230 ರಷ್ಟು ಹೆಚ್ಚಾಗಿದೆ. ವರದಿಯ ಅಂಕಿಅಂಶಗಳು ಇತ್ತೀಚಿನ ಬಜೆಟ್ ವೆಬಿನಾರ್‌ನಲ್ಲಿ ಹಂಚಿಕೊಳ್ಳಲಾದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. "2030 ರ ವೇಳೆಗೆ, ನಾವು ನಮ್ಮ ಸ್ಥಾಪಿತ ಶಕ್ತಿಯ ಸಾಮರ್ಥ್ಯದ ಶೇ.50 ರಷ್ಟನ್ನು ಪಳೆಯುಳಿಕೆಯೇತರ ಮೂಲಗಳಿಂದ ಸಾಧಿಸಬೇಕಾಗಿದೆ. ಭಾರತವು ತನಗಾಗಿ ಯಾವುದೇ ಗುರಿಗಳನ್ನು ಹೊಂದಿದ್ದರೂ, ತಾವು ಅದನ್ನು ಸವಾಲಾಗಿ ನೋಡುವುದಿಲ್ಲ" ಎಂದು ಪ್ರಧಾನ ಮಂತ್ರಿಯವರು ಹೇಳಿದ್ದಾರೆ.

## ಶೇ.46 ಕ್ಕಿಂತ ಹೆಚ್ಚು ಆಯುಷ್ಮಾನ್ ಭಾರತ್ ಫಲಾನುಭವಿಗಳು ಮಹಿಳೆಯರು



ದೇಶದ 50 ಕೋಟಿಗೂ ಹೆಚ್ಚು ಜನರಿಗೆ ವರ್ಷಕ್ಕೆ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸಾ ಸೌಲಭ್ಯ ಒದಗಿಸುವ ಆಯುಷ್ಮಾನ್ ಭಾರತ್ ಯೋಜನೆಯು ಬಡವರು ಹಾಗೂ ಮಹಿಳೆಯರಿಗೆ ವರದಾನವಾಗಿದೆ. ಹೊಸ ಅಧ್ಯಯನದ ಪ್ರಕಾರ, ಅಕ್ಟೋಬರ್ 2019 ರಿಂದ ಸೆಪ್ಟೆಂಬರ್ 2021 ರವರೆಗೆ ಈ ಯೋಜನೆಯ ಫಲಾನುಭವಿಗಳಲ್ಲಿ ಶೇ.46.7 ರಷ್ಟು ಮಹಿಳೆಯರು ಇದ್ದಾರೆ. ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ಬಿಹಾರ, ಛತ್ತೀಸ್‌ಗಢ, ಗೋವಾ, ಪುದುಚೇರಿ, ಲಕ್ಷದ್ವೀಪ, ಕೇರಳ ಮತ್ತು ಮೇಘಾಲಯದಲ್ಲಿ ಪುರುಷ ಕಾರ್ಡುದಾರರಿಗಿಂತ ಮಹಿಳೆಯರೇ ಹೆಚ್ಚು. ಪ್ರಧಾನಿ ನರೇಂದ್ರ ಮೋದಿ ಅವರು 2018 ರಲ್ಲಿ ಇದನ್ನು ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಯೋಜನೆಯಾಗಿ ಪ್ರಾರಂಭಿಸಿದರು ಎಂಬುದು ಇಲ್ಲಿ ಉಲ್ಲೇಖನೀಯ. ಈಗ, ಈ ಯೋಜನೆಯು ನಿರಂತರವಾಗಿ ವಿಸ್ತರಿಸುತ್ತಿದೆ. ಸುಮಾರು 27,300 ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಈ ಯೋಜನೆಗೆ ಜೋಡಿಸಲ್ಪಟ್ಟಿವೆ. ಈ ಯೋಜನೆಯಡಿಯಲ್ಲಿ, ಕೇವಲ ಮಹಿಳೆಯರಿಗಾಗಿಯೇ 141 ವೈದ್ಯಕೀಯ ಪ್ರಕ್ರಿಯೆಗಳನ್ನು ಸೇರಿಸಲಾಗಿದೆ. ■

# ಸ್ವಾತಂತ್ರ್ಯ ಹೋರಾಟಕ್ಕೆ ಮುನ್ನುಡಿ

ರಮಣೀಯವಾದ ಕಡಲತೀರಗಳು, ಸುಂದರವಾದ ದೇವಾಲಯಗಳು ಮತ್ತು ಇತರ ಅನೇಕ ಆಕರ್ಷಕ ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾದ ಒಡಿಶಾವು ರೋಮಾಂಚಕ ಇತಿಹಾಸ ಮತ್ತು ಬೆರಗುಗೊಳಿಸುವ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇದು ಪ್ರಾಚೀನ ಕಾಲದಿಂದಲೂ ಭಾರತೀಯ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಪ್ರಸ್ತುತದಲ್ಲೂ, ರಾಷ್ಟ್ರ ನಿರ್ಮಾಣದ ಪ್ರತಿಯೊಂದು ಕ್ಷೇತ್ರದಲ್ಲೂ ಇದು ಪ್ರಮುಖ ಪಾತ್ರ ವಹಿಸುತ್ತಿದೆ. ಇದು ಜಗನ್ನಾಥನ ಭೂಮಿಯಾಗಿದ್ದು, ಅಶೋಕ ಚಕ್ರವರ್ತಿಯನ್ನು ಬೌದ್ಧ ಧರ್ಮದೆಡೆಗೆ ತಿರುಗಿಸಿದ ನೆಲವಾಗಿದೆ. ಕೋನಾರ್ಕ್‌ನ ಸೂರ್ಯ ದೇವಾಲಯದಿಂದ ಜಗನ್ನಾಥ ಮಂದಿರ ಮತ್ತು ಚಿಲ್ಕಾ ಸರೋವರದವರೆಗಿನ ಪಾರಂಪರಿಕ ತಾಣಗಳ ಪಟ್ಟಿಯು ಅಸಂಖ್ಯಾತ ಮತ್ತು ಅಪರಿಮಿತ. ಈ ಸ್ಥಳದಿಂದ ಹುಟ್ಟಿಕೊಂಡ ಅತ್ಯಂತ ಜನಪ್ರಿಯ ಸಿಹಿ ತಿನಿಸುಗಳಲ್ಲಿ ರಸಗುಲ್ಲಾ ಒಂದಾಗಿದೆ. ಒಡಿಶಾದ ಪರಂಪರೆಯು ಅತ್ಯಂತ ಶ್ರೀಮಂತ ಮತ್ತು ರೋಮಾಂಚಕ. ಹಾಗೆಯೇ ಈ ಸ್ಥಳವು 1817 ರ ಪೈಕಾ ದಂಗೆಯೊಂದಿಗೆ ಸಂಬಂಧ ಹೊಂದಿದೆ. ಇದನ್ನು ಭಾರತೀಯ ಸ್ವಾತಂತ್ರ್ಯ ಇತಿಹಾಸದಲ್ಲಿ ಮೊದಲ ಸಶಸ್ತ್ರ ಹೋರಾಟ ಎಂದೂ ಕರೆಯುತ್ತಾರೆ.



ಒಡಿಶಾ ತನ್ನ 86 ನೇ ಸಂಸ್ಥಾಪನಾ ದಿನವನ್ನು ಏಪ್ರಿಲ್ 1 ರಂದು ಉತ್ಕಲ್ ದಿವಸ್ ಎಂದು ಆಚರಿಸುತ್ತಿದೆ. ಬಿಹಾರ, ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಸಂಯುಕ್ತ ಬಂಗಾಳದ ಕೆಲವು ಭಾಗಗಳಿಂದ ಬೇರ್ಪಟ್ಟ ನಂತರ 1936 ರಲ್ಲಿ ಭಾಷಾವಾರು ಆಧಾರದ ಮೇಲೆ 'ಒರಿಸ್ಸಾ' ಪ್ರತ್ಯೇಕ ಪ್ರಾಂತ್ಯವಾಗಿ ಸ್ಥಾಪನೆಯಾದ ದಿನವಿದು. ಅಂದಿನಿಂದ ಈ ದಿನವನ್ನು 'ಉತ್ಕಲ ದಿವಸ್' ಅಥವಾ 'ಉತ್ಕಲ ದಿವಶಾ' ಎಂದು ಆಚರಿಸಲಾಗುತ್ತದೆ. 2011 ರಲ್ಲಿ, ಅದರ ಹೆಸರನ್ನು 'ಒಡಿಶಾ' ಎಂದು ಬದಲಾಯಿಸಲಾಯಿತು. ಸಾಮ್ರಾಟ ಅಶೋಕನಿಗೆ ಅಹಿಂಸೆಯ ಪಾಠ ಕಲಿಸಿದ ಈ ಉತ್ಕಲ ಪ್ರದೇಶವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. 1817 ರಲ್ಲಿ, 1857 ರ ಸ್ವಾತಂತ್ರ್ಯ ಹೋರಾಟಕ್ಕೆ 40 ವರ್ಷಗಳ ಮೊದಲು, ಒಡಿಶಾದ ಪವಿತ್ರ ಭೂಮಿಯಲ್ಲಿ ಸಶಸ್ತ್ರ ದಂಗೆಯು ಪ್ರಾರಂಭವಾಯಿತು, ಪೈಕಾ ಬಂಡಾಯ ಎಂದು ಕರೆಯಲ್ಪಡುವ ಇದು ಪೂರ್ವ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನು ಅಲುಗಾಡಿಸಿತು.

ಪೈಕಾ ಮಾತ್ರವಲ್ಲದೆ ಒಡಿಶಾದ ಭೂಮಿ ಗಂಜಾಮ್ ಚಳುವಳಿ, ಲಾರ್ಜಾ ಕೋಲ್ ಚಳುವಳಿ ಮತ್ತು ಸಂಬಲ್ಪುರ ಯುದ್ಧ ಸೇರಿದಂತೆ ಹಲವಾರು ವಸಾಹತುಶಾಹಿ ವಿರೋಧಿ ಹೋರಾಟಗಳನ್ನು ಮುನ್ನಡೆಸಿತು. ಸ್ವಾತಂತ್ರ್ಯ ಚಳವಳಿಯ ಅಂತಿಮ ಹಂತದಲ್ಲಿಯೂ ಒಡಿಶಾ ಮತ್ತು ಅದರ ಜನರು ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಪಂಡಿತ್ ಗೋಪಬಂಧು ದಾಸ್, ಆಚಾರ್ಯ ಹರಿಹರ್, ಹರೇಕೃಷ್ಣ ಮಹತಾಬ್ ಮತ್ತು ಲಕ್ಷ್ಮಣ್ ನಾಯಕ್ ಸೇರಿದಂತೆ ಒಡಿಶಾದ ಅನೇಕ ಸ್ವಾತಂತ್ರ್ಯ ಚಳವಳಿಯ ದಿಗ್ಗಜರು ಅಸಹಕಾರ ಚಳವಳಿಯಿಂದ ಉಪ್ಪಿನ ಸತ್ಯಾಗ್ರಹ, ನಾಗರಿಕ ಅಸಹಕಾರದವರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಾದ ರಮಾದೇವಿ, ಮಾಲತಿದೇವಿ, ಕೋಕಿಲಾದೇವಿ, ರಾಣಿ ಭಾಗ್ಯವತಿ ಅವರು ತಮ್ಮ ಪುರುಷ ಸಹಚರರೊಂದಿಗೆ ಹೆಗಲಿಗೆ ಹೆಗಲಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. "ಒಡಿಶಾ ನಮ್ಮ ಸಾಂಸ್ಕೃತಿಕ ವೈವಿಧ್ಯದ ಸಂಪೂರ್ಣ ಚಿತ್ರಣವಾಗಿದೆ. ಇಲ್ಲಿನ ಕಲೆ, ಆಧ್ಯಾತ್ಮಿಕತೆ ಮತ್ತು ಬುಡಕಟ್ಟು ಸಂಸ್ಕೃತಿಯು ಇಡೀ ದೇಶದ ಪರಂಪರೆಯಾಗಿದೆ. ಇಡೀ ದೇಶ ಅದರ ಬಗ್ಗೆ ತಿಳಿದಿರಬೇಕು ಮತ್ತು ಅದರೊಂದಿಗೆ ಸಂಪರ್ಕ ಹೊಂದಿರಬೇಕು" ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನೀವು ಒಡಿಶಾದ ಗತಕಾಲವನ್ನು ಕೆದಕಿದರೆ, ಒಡಿಶಾ ಮತ್ತು ಇಡೀ ಭಾರತದ ಐತಿಹಾಸಿಕ ಶಕ್ತಿಯನ್ನು ಕಾಣಬಹುದು. ಇತಿಹಾಸದ ಈ ಸಾಮರ್ಥ್ಯವು ವರ್ತಮಾನ ಮತ್ತು ಭವಿಷ್ಯದ ಸಾಧ್ಯತೆಗಳೊಂದಿಗೆ ಸಂಬಂಧ ಹೊಂದಿದೆ, ಭವಿಷ್ಯಕ್ಕೆ ನಮಗೆ ಮಾರ್ಗದರ್ಶನ ನೀಡುತ್ತದೆ. ಇಂದು ಒಡಿಶಾ ಈ ಭವಿಷ್ಯದ ಸಾಧ್ಯತೆಗಳ ಬಾಗಿಲು ತೆರೆಯಲು ಪೂರ್ವ ಭಾರತದ ಹೆಬ್ಬಾಗಿಲಾಗಿದೆ. ಕಳೆದ 7 ವರ್ಷಗಳನ್ನು ಗಮನಿಸಿದರೆ ಕೇಂದ್ರ ಸರ್ಕಾರ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಮುಖ ಗಮನ ನೀಡಿದೆ. ಇಂದು ಒಡಿಶಾದಲ್ಲಿ ಸಾವಿರಾರು ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ, ಕರಾವಳಿ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ. ಸಾಗರಮಾಲಾ ಯೋಜನೆಗೂ ಸಾವಿರಾರು ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕೈಗಾರಿಕೆಗಳು ಮತ್ತು ಕಂಪನಿಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಲಾಗುತ್ತಿದೆ. ತೈಲ ಸಂಸ್ಕರಣಾಗಾರಗಳಾಗಲಿ ಅಥವಾ ಎಥೆನಾಲ್ ಜೈವಿಕ ಸಂಸ್ಕರಣಾಗಾರಗಳಾಗಲಿ ಇಂದು ಒಡಿಶಾದಲ್ಲಿ ಹೊಸ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ. ಅಂತೆಯೇ, ಉಕ್ಕು ಉದ್ಯಮದ ವಿಶಾಲ ಸಾಮರ್ಥ್ಯವನ್ನು ಸಹ ರೂಪಿಸಲಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಐಐಟಿ ಭುವನೇಶ್ವರ್, ಐಐಎಸ್ಇಆರ್ ಬಹರಾಂಪುರ ಮತ್ತು ಐಐಎಸ್‌ನಂತಹ ಸಂಸ್ಥೆಗಳನ್ನು ಇಲ್ಲಿ ಪ್ರಾರಂಭಿಸಲಾಗಿದೆ. ಒಡಿಶಾದ ಇತಿಹಾಸ, ಸಂಸ್ಕೃತಿ, ವಾಸ್ತು ವೈಭವವನ್ನು ದೇಶ ವಿದೇಶಗಳಿಗೆ ಕೊಂಡೊಯ್ಯಬೇಕಿದೆ. ■

# ಮೇಜರ್ ಧನ್ ಸಿಂಗ್ ಥಾಪಾ

# ಗುಂಡುಗಳು ಮುಗಿದು ಹೋದ ನಂತರ ಕುಕ್ರಿಯೊಂದಿಗೆ ಹೋರಾಡಿದ ಸಾಹಸಿ



ಭಾರತೀಯ ಸೇನೆಯು ತನ್ನ ನಿರ್ಭೀತ ಮತ್ತು ನಿಸ್ವಾರ್ಥ ರಾಷ್ಟ್ರ ಸೇವೆಗೆ ಹೆಸರುವಾಸಿಯಾಗಿದೆ. ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದರೂ ಶತ್ರುಗಳನ್ನು ಧ್ವಂಸ ಮಾಡುವ ಸಂಕಲ್ಪದ ವಿಶ್ವದ ಅಗ್ರಗಣ್ಯ ಸೈನ್ಯಗಳಲ್ಲಿ ಒಂದಾಗಿದೆ ಎಂಬ ಖ್ಯಾತಿಯನ್ನು ಹೊಂದಿದೆ. ಮೇಜರ್ ಧನ್ ಸಿಂಗ್ ಥಾಪಾ ಅವರು ಭಾರತೀಯ ಸಶಸ್ತ್ರ ಪಡೆಗಳ ಈ ಸಂಪ್ರದಾಯವನ್ನು ತಮ್ಮ ಧೈರ್ಯ ಮತ್ತು ಪರಾಕ್ರಮದಿಂದ ಮುಂದುವರಿಸಿದ ಅಂತಹ ಸೇನಾಧಿಕಾರಿಗಳಲ್ಲಿ ಒಬ್ಬರು. 1962 ರ ಇಂಡೋ-ಚೀನಾ ಯುದ್ಧದ ಸಮಯದಲ್ಲಿ, ಅವರು ಆದರ್ಶಪ್ರಾಯ ಶೌರ್ಯವನ್ನು ಪ್ರದರ್ಶಿಸಿದರು. ಅವರ ಶೌರ್ಯವನ್ನು ಗುರುತಿಸಿ, ಗಡಿಯಲ್ಲಿನ ಪೋಸ್ಟ್‌ಗೆ ಅವರ ಹೆಸರನ್ನು ಇಡಲಾಯಿತು.

**ಜನನ : 10 ಏಪ್ರಿಲ್ 1928 | ಮರಣ: 5 ಸೆಪ್ಟೆಂಬರ್ 2005**

10 ಏಪ್ರಿಲ್ 1928 ರಂದು ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಜನಿಸಿದ ಮೇಜರ್ ಧನ್ ಸಿಂಗ್ ಥಾಪಾ ಅವರು, ಸೇನೆಯ ಎಂಟನೇ ಗೂರ್ಖಾ ರೈಫಲ್ಸ್ ಬೆಟಾಲಿಯನ್‌ಗೆ ನಿಯೋಜಿಸಲ್ಪಟ್ಟರು. ಆಗಸ್ಟ್ 1949 ರಲ್ಲಿ, ಅವರು ಎಂಟನೇ ಗೂರ್ಖಾ ರೈಫಲ್ಸ್‌ಗೆ ಸೇರಿದರು. ನವೆಂಬರ್ 1961 ರಲ್ಲಿ ಚೀನಾದ ಹೆಚ್ಚುತ್ತಿದ್ದ ಆಕ್ರಮಣಕ್ಕೆ ಪ್ರತಿಕ್ರಿಯೆಯಾಗಿ, ಭಾರತವು ಫಾರ್ವರ್ಡ್ ನೀತಿಯ ಸಿದ್ಧಾಂತವನ್ನು ಅಳವಡಿಸಿಕೊಂಡಿತು ಎಂದು ಹೇಳಲಾಗುತ್ತದೆ. ಇದರ ನಂತರ ಚೀನಾ ಗಡಿಯಲ್ಲಿ ಸೇನೆಯನ್ನು ದೊಡ್ಡ ಪ್ರಮಾಣದಲ್ಲಿ ನಿಯೋಜಿಸಲಾಗಿತ್ತು. ಸೈನ್ಯಕ್ಕೆ ನೀಡಿದ ಸೂಚನೆಗಳ ಅಡಿಯಲ್ಲಿ, ಟಿಬೆಟ್‌ನಿಂದ ಲಡಾಖ್‌ಗೆ ಬರುವ ಪ್ರತಿಯೊಂದು ರಸ್ತೆಯನ್ನು ಅದು ಸುರಕ್ಷಿತವಾಗಿರಿಸಬೇಕಾಗಿತ್ತು. ಅದೇ ರೀತಿ, ಸೈನ್ಯದ ಅದೇ ನೀತಿಯು ಪಾಂಗಾಂಗ್ ಸರೋವರದ ಉತ್ತರದ ದಂಡೆಯ ಖುರ್ನಾಕ್ ಕೋಟೆಯಿಂದ ದಕ್ಷಿಣದ ಚುಶುಲ್ ವರೆಗೆ ಮುಂದುವರಿಯಿತು. ಹಲವಾರು ಸಣ್ಣ ಪೋಸ್ಟ್‌ಗಳನ್ನು ನಿರ್ಮಿಸಲಾಯಿತು. 1962 ರ ಯುದ್ಧದ ಮೊದಲು, ಭಾರತವು ಸಿರಿಜಾಪ್, ಸಿರಿಜಾಪ್ 1 ಮತ್ತು ಸಿರಿಜಾಪ್ 2 ಎಂದು ಮೂರು ಪ್ರಮುಖ ಪೋಸ್ಟ್‌ಗಳನ್ನು ರಚಿಸಿತ್ತು. 8 ನೇ ಗೂರ್ಖಾ ರೈಫಲ್ಸ್ ಇಲ್ಲಿ ನೆಲೆಗೊಂಡಿತ್ತು. ಸಿರಿಜಾಪ್ 1 ನೇತೃತ್ವವನ್ನು ಮೇಜರ್ ಧನ್ ಸಿಂಗ್ ಥಾಪಾ ವಹಿಸಿದ್ದರು. ಪಾಯಿಂಟ್ 303 ರೈಫಲ್‌ಗಳು ಮತ್ತು ಲಘು ಮೆಷಿನ್ ಗನ್‌ಗಳೊಂದಿಗೆ ಪೋಸ್ಟ್‌ನಲ್ಲಿ ಅವರೊಂದಿಗೆ ಸುಮಾರು 28 ಸೈನಿಕರಿದ್ದರು. ಅಕ್ಟೋಬರ್ 20, 1962 ರಂದು, ಚೀನಾದ ಸೈನ್ಯವು ದಾಳಿ ಮಾಡಿತು. ಮೇಜರ್ ಧನ್ ಸಿಂಗ್ ಥಾಪಾ ಮತ್ತು ಅವರ ಬೆಟಾಲಿಯನ್ ಚೀನಾದ ದಾಳಿಯನ್ನು ಎರಡು ಬಾರಿ ಹಿಮ್ಮೆಟ್ಟಿಸಿತು.

ಮೂರನೇ ಬಾರಿಗೆ, ಶತ್ರುಗಳು ಅಪಾರ ಸಂಖ್ಯೆಯಲ್ಲಿ, ಭಾರೀ ಶಸ್ತ್ರಾಸ್ತ್ರಗಳೊಂದಿಗೆ ದಾಳಿ ಮಾಡಿದರು. ಸುಮಾರು ಎರಡೂವರೆ ಗಂಟೆಗಳ ಕಾಲ ಸಿರಿಜಾಪ್ ಮೇಲೆ ಮಾರ್ಟರ್ ಮತ್ತು ಫಿರಂಗಿ ಗುಂಡಿನ ದಾಳಿ ಮುಂದುವರಿಯಿತು. ಬೆಟಾಲಿಯನ್‌ನೊಂದಿಗೆ ಪೋಸ್ಟ್‌ನ ಸಂಪರ್ಕವನ್ನು ಸಂಪೂರ್ಣವಾಗಿ ಕಡಿತಗೊಳಿಸಲಾಯಿತು. ಗೂರ್ಖಾ ರೈಫಲ್ಸ್‌ನ ವೀರ ಸೈನಿಕರು ಶತ್ರುಗಳ ವಿರುದ್ಧ ಹೋರಾಡುತ್ತಲೇ ಇದ್ದರು. ಮೇಜರ್ ಥಾಪಾ ಅವರ ಕೆಲವು ಸಹ ಸೈನಿಕರು ಹುತಾತ್ಮರಾದರು. ಗುಂಡುಗಳು ಖಾಲಿಯಾದಾಗ, ಥಾಪಾ ತಮ್ಮ ಖುಕ್ರಿಯೊಂದಿಗೆ ಚೀನಾ ಸೈನ್ಯದ ವಿರುದ್ಧ ಹೋರಾಡುವುದನ್ನು ಮುಂದುವರಿಸಿದರು, ಜೊತೆಗೆ ಉಳಿದ ಸೈನಿಕರ ಮನೋಬಲವನ್ನು ಉತ್ತೇಜಿಸಿದರು. ಅವರು ಅನೇಕ ಚೀನೀ ಸೈನಿಕರನ್ನು ಯುದ್ಧದಲ್ಲಿ ಕೊಂದರು. ಆದರೆ ಅಂತಿಮವಾಗಿ, ಚೀನಾ ಸೈನ್ಯವು ಅವರನ್ನು ಸೋಲಿಸಿತು ಮತ್ತು ಅವರನ್ನು ಯುದ್ಧ ಕೈದಿಯನ್ನಾಗಿ ಬಂಧಿಸಿತು. ಅವರು ಹುತಾತ್ಮರಾಗಿದ್ದಾರೆ ಎಂದು ಸರ್ಕಾರ ಮತ್ತು ಸೇನೆ ನಂಬಿತ್ತು. ಸರ್ಕಾರ ಅವರಿಗೆ ಮರಣೋತ್ತರವಾಗಿ ಪರಮವೀರ ಚಕ್ರವನ್ನು ಘೋಷಿಸಿತು. ಯುದ್ಧ ಕೈದಿಯಾಗಿ, ಅವರು ಭಯಾನಕ ಚಿತ್ರಹಿಂಸೆ ಅನುಭವಿಸಿದರು. ಆದರೆ ಸುರಂಗದ ಕೊನೆಯಲ್ಲಿ, ಭರವಸೆಯ ಬೆಳಕು ಇರುತ್ತದೆ. ಸೆರೆಯಲ್ಲಿದ್ದಾಗ, ಅವರು ತಮ್ಮ ಆಲೋಚನೆಗಳನ್ನು ಹಂಚಿಕೊಂಡು ಚೀನೀ ಹುಡುಗನೊಂದಿಗೆ ಸ್ನೇಹ ಬೆಳೆಸಿದರು. ಮೇಜರ್ ಥಾಪಾ ಯುದ್ಧಕ್ಕೆ ಹೋಗಲು ತಯಾರಿ ನಡೆಸುತ್ತಿದ್ದಾಗ ಅವರ ಪತ್ನಿ ಮಗುವಿನ ನಿರೀಕ್ಷೆಯಲ್ಲಿದ್ದರು. ಒಂದು ದಿನ ಅವರು ಹುಡುಗನ ಸಹಾಯದಿಂದ ತನ್ನ ಕುಟುಂಬಕ್ಕೆ ಒಂದು ಪತ್ರವನ್ನು ಪೋಸ್ಟ್ ಮಾಡಿದರು. ಕುಟುಂಬಕ್ಕೆ ಪತ್ರ ಬಂದ ಕೂಡಲೇ ಸೇನೆಗೆ ಮಾಹಿತಿ ನೀಡಲಾಯಿತು. ಅವರ ಬಿಡುಗಡೆಗೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಗಳು ಆರಂಭವಾದವು. ಚೀನೀ ಸೆರೆಯಿಂದ ಬಿಡುಗಡೆಯಾದ ನಂತರ ಅವರು 10 ಮೇ 1963 ರಂದು ಭಾರತಕ್ಕೆ ಮರಳಿದರು. ಮೇ 12 ರಂದು ಅವರು ಡೆಹ್ರಾಡೂನ್‌ನಲ್ಲಿರುವ ತಮ್ಮ ಮನೆಗೆ ಬಂದರು. ಅವರ ಪರಮವೀರ ಚಕ್ರ ಆದೇಶಕ್ಕೆ ಅಗತ್ಯ ತಿದ್ದುಪಡಿಗಳನ್ನು ಮಾಡಲಾಯಿತು. ಅವರು ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿ ನಿವೃತ್ತರಾದರು. ಥಾಪಾ ಅವರು 5 ಸೆಪ್ಟೆಂಬರ್ 2005 ರಂದು ನಿಧನರಾದರು. ■

ಚೀನಾದ ದಾಳಿಯನ್ನು ಎರಡು ಬಾರಿ ಹಿಮ್ಮೆಟ್ಟಿಸಿದ ನಂತರ, ಅವರು ಮತ್ತೆ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಭಾರೀ ಶಸ್ತ್ರಾಸ್ತ್ರಗಳೊಂದಿಗೆ ಪೋಸ್ಟ್ ಮೇಲೆ ದಾಳಿ ಮಾಡಿದರು. ಗುಂಡುಗಳು ಖಾಲಿಯಾದಾಗ, ಥಾಪಾ ತಮ್ಮ ಖುಕ್ರಿಯೊಂದಿಗೆ ಶತ್ರುಗಳ ವಿರುದ್ಧ ಹೋರಾಡುವುದನ್ನು ಮುಂದುವರಿಸಿದರು.



# ಮಹಿಳಾ ಶಕ್ತಿಗೆ ನಮನ

ಭಾರತವು ಬೌದ್ಧಿಕ ಪರಂಪರೆಯಲ್ಲಿ ವಿಶ್ವದ ಮುಂದಾಳುವಾಗಿದೆ. ದೇಶದ ಅಡಿಪಾಯ ಅದರ ತತ್ವಶಾಸ್ತ್ರವಾಗಿದೆ. ಸ್ತ್ರೀ ಶಕ್ತಿಯ ಮೇಲೆ ಕೇಂದ್ರೀಕೃತವಾಗಿರುವ ಭಾರತದ ಆಧ್ಯಾತ್ಮಿಕ ಪ್ರಜ್ಞೆಯು ಈ ತತ್ತ್ವ ಶಾಸ್ತ್ರದ ಅಡಿಪಾಯವಾಗಿದೆ. ಇದಕ್ಕಾಗಿಯೇ ನವ ಭಾರತದಲ್ಲಿ ಮೊದಲ ಬಾರಿಗೆ ಮಹಿಳಾ ಶಕ್ತಿಗೆ ಅರ್ಹವಾದ ಗೌರವವನ್ನು ನೀಡಲಾಗಿದೆ. ಅನೇಕ ಮಹಿಳೆಯರು ಸಮಾಜಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿದ್ದಾರೆ, ಮಹಿಳಾ ಶಕ್ತಿಯ ಪ್ರತಿಬಿಂಬವಾಗಿ ಮತ್ತು ಸಬಲೀಕರಣದ ಸಂಕೇತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಾರ್ಚ್ 8 ಅನ್ನು ಅಂತರರಾಷ್ಟ್ರೀಯ ಮಹಿಳಾ ದಿನ ಎಂದೂ ಕರೆಯುತ್ತಾರೆ, ಇದು ಮಹಿಳೆಯರ ಶಕ್ತಿಯನ್ನು ಗುರುತಿಸಲು ಮೀಸಲಿಟ್ಟ ದಿನವಾಗಿದೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಅಂತಹ 29 ಮಹಿಳೆಯರಿಗೆ ನಾರಿ ಶಕ್ತಿ ಸಮ್ಮಾನ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಪ್ರತಿ ವರ್ಷ ಮಾರ್ಚ್ 8 ರಂದು ವಿಶ್ವ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಈ ವಿಶೇಷ ದಿನವನ್ನು ಆಚರಿಸುವ ಉದ್ದೇಶವು ಮಹಿಳೆಯರ ಸಾಧನೆಗಳು, ಉತ್ಕಟತೆಗಳು, ಐತಿಹಾಸಿಕ ಪ್ರಯಾಣಗಳು ಮತ್ತು ಜೀವನವನ್ನು ಸ್ಮರಿಸುವುದು. ಈ ಸಂದರ್ಭದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ರಾಷ್ಟ್ರಪತಿ ಭವನದಲ್ಲಿ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಇತರ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ಮಹಿಳೆಯರಿಗೆ ನಾರಿ ಶಕ್ತಿ ಪುರಸ್ಕಾರವನ್ನು ಪ್ರದಾನ ಮಾಡಿದರು. ಮಹಿಳಾ ಸಬಲೀಕರಣಕ್ಕೆ ಅತ್ಯುತ್ತಮ ಕೊಡುಗೆ ನೀಡಿದ 29 ಮಹಿಳೆಯರಿಗೆ ರಾಷ್ಟ್ರಪತಿಯವರು ಪ್ರಶಸ್ತಿ ಪ್ರದಾನ ಮಾಡಿದರು. ಈ ಹಿಂದೆ ಮಾರ್ಚ್ 7 ರಂದು, ಈ ವಿಜೇತರೊಂದಿಗೆ ಸಂವಾದ ನಡೆಸುವಾಗ, ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರ ಸಾಮರ್ಥ್ಯವನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಲು ಸರ್ಕಾರ ಬದ್ಧವಾಗಿದೆ ಮತ್ತು ಅಂತಹ ಸಾಮರ್ಥ್ಯವನ್ನು ಗುರುತಿಸಲು ನೀತಿಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಹೇಳಿದರು.

**ಕೆಲವರು ಹಾವುಗಳನ್ನು ರಕ್ಷಿಸುವ ಪರಿಣತಿ ಹೊಂದಿದ್ದಾರೆ;**
**ಕೆಲವರು ಇತರರನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟಿದ್ದಾರೆ**

2020 ಮತ್ತು 2021 ನೇ ಸಾಲಿನ 28 ಪ್ರಶಸ್ತಿಗಳನ್ನು (2020 ಮತ್ತು 2021 ಕ್ಕೆ ತಲಾ 14) ನೀಡಲಾಯಿತು. ನಾರಿ ಶಕ್ತಿ ಪುರಸ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಕಲ್ಯಾಣಕ್ಕೆ ನೀಡಿದ ಕೊಡುಗೆಗಾಗಿ ಭಾರತದ ಮಹಿಳೆಯರು ಮತ್ತು ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಯಾಗಿದೆ. ಸಮಾಜದಲ್ಲಿ ಆದರ್ಶಪ್ರಾಯರಾದ ಕೆಲವು ವಿಜೇತರ ಕಥೆಗಳು ಇಲ್ಲಿವೆ....



### ಟಿಫಾನಿ ಬ್ರಾರ್ ಅಂಧತ್ವವು ಅವರ ಸಾಧನೆಗೆ ತಡೆಗೋಡೆಯಲ್ಲ

ಬಾಲ್ಯದಿಂದಲೂ ಅಂಧರಾಗಿದ್ದ ಟಿಫಾನಿ ಬ್ರಾರ್ ಹುಟ್ಟಿದ್ದು ಚೆನ್ನೈನಲ್ಲಿ. ಆಕೆ ತಮ್ಮ ದೈಹಿಕ ನ್ಯೂನತೆಯನ್ನು ತನ್ನ ಯಶಸ್ಸಿನ ದಾರಿಗೆ ಅಡ್ಡಿಯಾಗಲು ಬಿಡಲಿಲ್ಲ. ಬಾಲ್ಯದಲ್ಲಿ ಐದು ಭಾರತೀಯ ಭಾಷೆಗಳನ್ನು ಕರಗತ ಮಾಡಿಕೊಂಡಿರುವ ಟಿಫಾನಿ ಅದರ ಬಗ್ಗೆ ಜನರಿಗೆ ಅರಿವು ಮೂಡಿಸಲು ನಿರ್ಧರಿಸಿದರು. ದೃಷ್ಟಿಹೀನ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವ ಸಲುವಾಗಿ, ಅವರು ಕೇರಳದಲ್ಲಿ ಜ್ಯೋತಿರ್ಗಮಯ ಫೌಂಡೇಶನ್ ಮತ್ತು ಸಂಚಾರಿ ಅಂಧ ಶಾಲೆಯನ್ನು ಸ್ಥಾಪಿಸಿದರು. ಅವರು 200 ಕ್ಕೂ ಹೆಚ್ಚು ಅಂಧರಿಗೆ ಬ್ರೈಲ್, ಕಂಪ್ಯೂಟರ್ ಮತ್ತು ಇತರ ಕೌಶಲ್ಯಗಳನ್ನು ಕಲಿಸಿದ್ದಾರೆ.







## ನಾಸಿರಾ ಅಖ್ತರ್

### ಪಾಲಿಥಿನ್ ಅನ್ನು ಬೂದಿಯಾಗಿ ಪರಿವರ್ತಿಸುವ ಮೂಲಿಕೆಯನ್ನು ಅಭಿವೃದ್ಧಿಪಡಿಸಿದವರು

ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್‌ನ ನಾಸಿರಾ ಅಖ್ತರ್ ವಿಜ್ಞಾನಿಯೂ ಅಲ್ಲ ಅಥವಾ ವಿಜ್ಞಾನ ಪದವೀಧರರೂ ಅಲ್ಲ. ಮಹಿಳಾ ಸಾಕ್ಷರತೆಯ ದೃಷ್ಟಿಯಿಂದ ಕುಲ್ಗಾಮ್ ಅನ್ನು ಹಿಂದುಳಿದ ಜಿಲ್ಲೆ ಎಂದು ಪರಿಗಣಿಸಲಾಗಿದೆ. ಅವರು ಈ ಜಿಲ್ಲೆಯ ಕನಿಪೋರಾ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಎರಡು ಹೆಣ್ಣು ಮಕ್ಕಳ ತಾಯಿಯಾದ ನಾಸಿರಾ ಕೆಲವು ವರ್ಷಗಳಿಂದ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದು, 21–22 ವರ್ಷಗಳ ಹಿಂದೆ ಪ್ಲಾಸ್ಟಿಕ್ ವಿಧ್ವಂಸಗೊಳಿಸುವ ಯಂತ್ರದ ಬಗ್ಗೆ ಯೋಚಿಸಲಾರಂಭಿಸಿದರು. ಅವರು 14 ವರ್ಷಗಳ ಹಿಂದೆ ಯಶಸ್ಸನ್ನು ಸಾಧಿಸಿದರು. ವಿವಿಧ ವಸ್ತುಗಳನ್ನು ಪ್ಲಾಸ್ಟಿಕ್ ಮೇಲೆ ಹಾಕಿ ಸುಡುತ್ತಿದ್ದರು. ಒಂದು ದಿನ ಪ್ಲಾಸ್ಟಿಕ್ ಸುಟ್ಟು ಬೂದಿಯಾಗಿರುವುದನ್ನು ಅವರು ಕಂಡುಕೊಂಡರು. ಅವರು ಈ ಸೂತ್ರವನ್ನು ಬಳಸಿಕೊಂಡು ಈಗ ಪಾಲಿಥಿನ್ ಅನ್ನು ಬೂದಿಯಾಗಿ ಪರಿವರ್ತಿಸುತ್ತಾರೆ. ಇದು ಪಾಲಿಥಿನ್ ಅನ್ನು ಜೈವಿಕ ವಿಘಟನೀಯವಾಗಿಸುತ್ತದೆ.

## ಸಯಾಲಿ ನಂದಕಿಶೋರ್ ಅಗವಾನೆ

### ಡೌನ್ ಸಿಂಡ್ರೋಮ್ ಕೂಡ ಅವಳ ನೃತ್ಯವನ್ನು ನಿಲ್ಲಿಸಲಾಗಲಿಲ್ಲ

ಡೌನ್ ಸಿಂಡ್ರೋಮ್ ಎನ್ನುವುದು ಮಗುವು ಮಾನಸಿಕ ಮತ್ತು ದೈಹಿಕ ಅಸಾಮರ್ಥ್ಯಗಳನ್ನು ಹೊಂದಿರುವ ಸ್ಥಿತಿಯಾಗಿದೆ. ಇದು ಮಗುವಿನ ದೈಹಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ, ಜೊತೆಗೆ ಮುಖದ ಲಕ್ಷಣಗಳು ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿ ವ್ಯತ್ಯಾಸಗಳನ್ನು ಉಂಟುಮಾಡುತ್ತದೆ. ಆದರೆ, ಸಯಾಲಿ ನಂದಕಿಶೋರ್ ಅವರ ಹೆಜ್ಜೆಗಳನ್ನು ರೋಗ ಬಾಧಿಸಲಿಲ್ಲ. ಸಯಾಲಿ ಕಥಕ್ ನೃತ್ಯಗಾರ್ತಿಯಾಗಿದ್ದು, ಅವರು ಭಾರತ ಮತ್ತು ವಿದೇಶಗಳಲ್ಲಿ ಮೆಚ್ಚುಗೆ ಪಡೆದಿದ್ದಾರೆ. ಡೌನ್ ಸಿಂಡ್ರೋಮ್‌ನೊಂದಿಗೆ ಜನಿಸಿದ ಸಯಾಲಿ ಒಂಬತ್ತನೇ ವಯಸ್ಸಿನಲ್ಲಿ ಕಥಕ್ ಕಲಿಯಲು ಪ್ರಾರಂಭಿಸಿದರು. ಅಂದಿನಿಂದ ಅವರು 100 ಕ್ಕೂ ಹೆಚ್ಚು ನೃತ್ಯ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಜಾಗತಿಕ ಒಲಿಂಪಿಯಾಡ್ ನೃತ್ಯ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಗೆದ್ದರು. ಅವರು ಡೌನ್ ಸಿಂಡ್ರೋಮ್ ಹೊಂದಿರುವ ಸುಮಾರು 50 ಮಕ್ಕಳಿಗೆ ನೃತ್ಯವನ್ನು ಕಲಿಸುತ್ತಿದ್ದಾರೆ.

## ನಿವೃತಿ ರೈ

### ವಿದ್ಯುತ್ ತಂತಿಗಳ ಮೂಲಕ ಜನರಿಗೆ ಇಂಟರ್ನೆಟ್ ಅನ್ನು ಒದಗಿಸುವ ಉಪಕ್ರಮ

ನಿವೃತಿ ರೈ ಅವರು ಇಂಟೆಲ್ ಇಂಡಿಯಾದ ದೇಶದ ಮುಖ್ಯಸ್ಥರಾಗಿದ್ದಾರೆ. ಇಂಟೆಲ್ ವಿಶ್ವದ ಅತಿದೊಡ್ಡ ಕಂಪ್ಯೂಟರ್ ಚಿಪ್ ಕಂಪನಿಗಳಲ್ಲಿ ಒಂದಾಗಿದೆ. ಪ್ರಪಂಚದಾದ್ಯಂತ ಹೆಚ್ಚಿನ ಕಂಪ್ಯೂಟರ್‌ಗಳಲ್ಲಿ ಇಂಟೆಲ್ ಚಿಪ್‌ಗಳನ್ನು ಬಳಸಲಾಗುತ್ತದೆ. ನಿವೃತಿಯು ಸೆಮಿಕಂಡಕ್ಟರ್ ಚಿಪ್ ಅನ್ನು ರಚಿಸಿದ್ದು ಅದು ಕಡಿಮೆ ವಿದ್ಯುತ್ ಬಳಸುತ್ತದೆ. ರೈ ಅವರು ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಸಂಪರ್ಕ ಒದಗಿಸಲು ಕೆಲಸ ಮಾಡಿದ್ದಾರೆ, ಇದರಲ್ಲಿ ವಿದ್ಯುತ್ ಇರುವಲ್ಲೆಲ್ಲಾ ವಿದ್ಯುತ್ ತಂತಿಗಳ ಮೂಲಕ ಹಳ್ಳಿಗಳಿಗೆ ಅಗ್ಗದ ಡೇಟಾವನ್ನು ತಲುಪಿಸಬಹುದು. ಇಂಟೆಲ್ ಇದನ್ನು ವಾಸ್ತವಗೊಳಿಸಲು ಪೈಲಟ್ ಯೋಜನೆಯನ್ನು ಅಭಿವೃದ್ಧಿಪಡಿಸುತ್ತಿದೆ.



## ಸಂಧ್ಯಾ ಧರ್

### ಅಂಗವಿಕಲರಿಗೆ ಸೇವೆ ಸಲ್ಲಿಸುವುದು ಅವರ ಜೀವನದ ಧ್ಯೇಯವಾಯಿತು

ಜಮ್ಮು ಮತ್ತು ಕಾಶ್ಮೀರದ ವಿಶೇಷಚೇತನ ಸಂಧ್ಯಾ ಅವರು ಬೆಂಬಲವಿಲ್ಲದೆ ನಡೆಯಲು ಸಾಧ್ಯವಿಲ್ಲ. ಅವರ ಬಲಗೈ ಮಾತ್ರ ಕೆಲಸ ಮಾಡುತ್ತದೆ. ಇಷ್ಟೆಲ್ಲಾ ಇದ್ದರೂ ಎಂ.ಕಾಂ ವರೆಗೆ ಓದಿ ಸದ್ಯ ಸರ್ಕಾರಿ ನೌಕರಿ ಮಾಡುತ್ತಿದ್ದಾರೆ. ತಮ್ಮ ಕೆಲಸದಿಂದ ಬಂದ ಹಣದಿಂದ ಸಂಸ್ಥೆಯನ್ನು ನಡೆಸುತ್ತಾರೆ. ಸಂಸ್ಥೆಯು ಪ್ರಸ್ತುತ 75 ಮಕ್ಕಳಿಗೆ ಹನ್ನೊಂದನೇ ತರಗತಿಯವರೆಗೆ ಶಿಕ್ಷಣ ನೀಡುತ್ತಿದೆ. ಸಂಧ್ಯಾ ಅವರು ಓದುತ್ತಿರುವಾಗಲೇ ಸುಮಾರು 20 ವರ್ಷಗಳ ಕಾಲ ತಮ್ಮ ಸ್ವಂತ ಮನೆಯಲ್ಲಿ ನಿರ್ಗತಿಕ, ಬಡ ಮಕ್ಕಳಿಗೆ ಕಲಿಸುವುದನ್ನು ಮುಂದುವರಿಸಿದರು. ಸಂಧ್ಯಾ ಅವರು ಕೊಳಗೇರಿ ಮಕ್ಕಳಿಗೆ ಕಲಿಸುವುದು ಮಾತ್ರವಲ್ಲದೆ ಯಾವುದೇ ವಿಶೇಷಚೇತನ ಮಗುವಿಗೆ ಸಹಾಯ ಮಾಡಲು ಸಿದ್ಧರಿದ್ದಾರೆ.



## ರಾಧಿಕಾ ಮೆನನ್

### ಭಾರತದ ವ್ಯಾಪಾರಿ ನೌಕೆಯ ಮೊದಲ ಕ್ಯಾಪ್ಟನ್

ರಾಧಿಕಾ ಕೇರಳದ ಕೊಡುಂಗಲ್ಲೂರು ಮೂಲದವರು. ಇದು ನಡೆದದ್ದು ಅಕ್ಟೋಬರ್ 27, 2012 ರಂದು. ಕ್ಯಾಪ್ಟನ್ ರಾಧಿಕಾ ಮೆನನ್ ಅವರು 21827 ಟನ್ ತೈಲ ಟ್ಯಾಂಕರ್ ಸುವರ್ಣ ಸ್ವರಾಜ್ ಹಡಗಿನಲ್ಲಿದ್ದರು, ಅದು ತಮಿಳುನಾಡಿನ ನಾಗಪಟ್ಟಣಂ ಕರಾವಳಿಯಲ್ಲಿ ಸಾಗುತ್ತಿತ್ತು. ಜೋರಾಗಿ ಮಳೆ ಸುರಿಯುತ್ತಿತ್ತು, 60 ನಾಟಿಕಲ್ ಮೈಲಿ ವೇಗದಲ್ಲಿ ಗಾಳಿ ಬೀಸುತ್ತಿತ್ತು. ದೊಡ್ಡ ಹಡಗು ಸಮುದ್ರದಲ್ಲಿ ಆಟಿಕೆಯಂತೆ ಅಲ್ಲಾಡತೊಡಗಿತು. ಹಡಗಿನ ಆಂಕರ್ ಎರಡು ಬಾರಿ ಮುರಿದುಹೋಯಿತು. ಸತತ ಎರಡು ದಿನ ಇದೇ ಪರಿಸ್ಥಿತಿ ಮುಂದುವರಿಯಿತು. ನೀಲಂ ಚಂಡಮಾರುತವು ಅಕ್ಟೋಬರ್ 29 ರಂದು ಶ್ರೀಲಂಕಾಕ್ಕೆ ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹಡಗು ಸಿಕ್ಕಿಬೀಳುವುದು ಖಚಿತವಾಯಿತು. ಹಡಗನ್ನು ಕ್ಯಾಪ್ಟನ್ ಮೆನನ್ ಅವರು ಕೃಷ್ಣಪಟ್ಟಣದ ಕಡೆಗೆ ತಿರುಗಿಸಿದರು, ಅವರು ಅದನ್ನು ಸುರಕ್ಷಿತವಾಗಿಸಿದರು. ಅಂತೆಯೇ, ಅವರು 15-50 ವಯಸ್ಸಿನ ಏಳು ಮೀನುಗಾರರ ಜೀವವನ್ನೂ ಉಳಿಸಿದರು.

## 'ನಾರಿ ತೂ ನಾರಾಯಣಿ' ಮಂತ್ರವನ್ನು ಪುನರುಚ್ಚರಿಸಿದ ಪ್ರಧಾನಿ

ಮಹಿಳೆಯು ನೀತಿ, ನಿಷ್ಠೆ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಮತ್ತು ನಾಯಕತ್ವವನ್ನು ಪ್ರತಿಬಿಂಬಿಸುತ್ತಾಳೆ. ಭಾರತದಲ್ಲಿ ಮಹಿಳಾ ಪ್ರಜ್ಞೆಯು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿಯೂ ದೇಶದಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚುವಂತೆ ಮಾಡಿತು ಮತ್ತು ಸಾಮಾಜಿಕ ಉನ್ನತಿ, ಆಧ್ಯಾತ್ಮಿಕ, ಕೈಗಾರಿಕೆ ಮತ್ತು ತಾಂತ್ರಿಕ ಪ್ರಗತಿ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಕೊಡುಗೆ ನೀಡಿದೆ. ಹಾಗಾಗಿಯೇ ಕೇಂದ್ರ ಸರ್ಕಾರದ ಬಹುತೇಕ ನೀತಿಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ. ಜನ್ ಧನ್‌ನಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಸ್ಟ್ಯಾಂಡಪ್ ಇಂಡಿಯಾ, ಮುದ್ರಾ ಯೋಜನೆ, ಸ್ಟಾರ್ಟ್‌ಅಪ್ ಇಂಡಿಯಾ, ಉಜ್ವಲ ಯೋಜನೆ, ಸುಕನ್ಯಾ ಸಮೃದ್ಧಿ, ಮಹಿಳಾ ಸ್ವಸಹಾಯ ಗುಂಪು ಮತ್ತು ಸ್ವಚ್ಛ ಭಾರತ ಅಭಿಯಾನದಂತಹ ಯೋಜನೆಗಳವರೆಗೆ ಇವು ಮಹಿಳಾ ಸಬಲೀಕರಣದತ್ತ ಮಹತ್ವದ ಹೆಜ್ಜೆಗಳಾಗಿ ಹೊರಹೊಮ್ಮಿವೆ. ಮಹಿಳಾ ದಿನದಂದು ಕಚ್‌ನಲ್ಲಿ ನಡೆದ ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು, "ನಮ್ಮ ವೇದಗಳು ಮಹಿಳೆಯರು ಶಕ್ತರಾಗಿರಬೇಕು, ಸಬಲರಾಗಬೇಕು ಮತ್ತು ರಾಷ್ಟ್ರಕ್ಕೆ ನಿರ್ದೇಶನ ನೀಡುವ ಸಾಮರ್ಥ್ಯವನ್ನು ಹೊಂದಿರಬೇಕು ಎಂದು ಕರೆ ನೀಡಿವೆ" ಎಂದು ಹೇಳಿದರು. ಕೆಲವೊಮ್ಮೆ ನಾವು ಒಂದು ಮಾತು ಹೇಳುತ್ತೇವೆ: ನಾರಿ ತೂ ನಾರಾಯಣಿ! ಆದರೆ ನಾವು ಇನ್ನೂ ಒಂದು ವಿಷಯವನ್ನು ಕೇಳಿರಬೇಕು: ಅದರಲ್ಲಿ ಹೀಗೆ ಹೇಳಲಾಗಿದೆ: ಒಬ್ಬ ಪುರುಷ ಕರ್ಣಿಯನ್ನು ನಿರ್ವಹಿಸಿದರೆ ಅವನು ನಾರಾಯಣನಾಗುತ್ತಾನೆ! ಅಂದರೆ ಪುರುಷ ನಾರಾಯಣನಾಗಲು ಏನಾದರೂ ಮಾಡಬೇಕು. ಆದರೆ ನಾರಿ ತೂ ನಾರಾಯಣಿ ಎಂದು ಮಹಿಳೆಯ ಬಗ್ಗೆ ಹೇಳಲಾಗಿದೆ. ಇದು ಎಷ್ಟು ವ್ಯತ್ಯಾಸವನ್ನುಂಟು ಮಾಡುತ್ತದೆ ವಿದೆ ಎಂಬುದು ಅಚ್ಚರಿಯ ಸಂಗತಿ! ■

ಸಂಪುಟ ನಿರ್ಧಾರಗಳು

# ಸಾಂಪ್ರದಾಯಿಕ ಔಷಧ ಪದ್ಧತಿಯ ಜಾಗತಿಕ ಕೇಂದ್ರ ಸ್ಥಾಪನೆಗೆ ಅನುಮೋದನೆ

ಸಾಂಪ್ರದಾಯಿಕ ಔಷಧ ಪದ್ಧತಿಯು ಆರೋಗ್ಯ-ಆರೈಕೆ ವಿತರಣಾ ವ್ಯವಸ್ಥೆಯ ಪ್ರಮುಖ ಆಧಾರಸ್ತಂಭವಾಗಿದೆ, ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವಲ್ಲಿ ಹಾಗು ನಿರ್ವಹಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅದಕ್ಕಾಗಿಯೇ, ಕೇಂದ್ರ ಸಂಪುಟವು ವಿಶ್ವ ಆರೋಗ್ಯ ಸಂಸ್ಥೆ ಜಾಗತಿಕ ಸಾಂಪ್ರದಾಯಿಕ ಔಷಧ ಪದ್ಧತಿಯ ಕೇಂದ್ರ (ಡಬ್ಲ್ಯು ಎಚ್‌ಒ ಜಿಸಿಟಿಎಂ) ಸ್ಥಾಪನೆಗೆ ಅನುಮೋದನೆ ನೀಡಿದೆ. ಹಾಗೆಯೇ, ಖಾಸಗಿ ವಲಯದ ಹೂಡಿಕೆಗಾಗಿ ಮತ್ತು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸಲು ಬಳಕೆಯಾಗದ ಮತ್ತು ಭಾಗಶಃ ಬಳಸಿದ ಸರ್ಕಾರಿ ಸ್ವತ್ತುಗಳನ್ನು ನಗದೀಕರಣ ಮೂಲಕ ಆದಾಯವನ್ನು ಗಳಿಸಲು ರಾಷ್ಟ್ರೀಯ ಜಮೀನು ನಗದೀಕರಣ ನಿಗಮ (ಎನ್ ಎಲ್ ಎಂ ಸಿ) ವನ್ನು ಸ್ಥಾಪಿಸಲು ಅನುಮೋದನೆ ನೀಡಲಾಯಿತು.



- **ನಿರ್ಧಾರ: ರಾಷ್ಟ್ರೀಯ ಜಮೀನು ನಗದೀಕರಣ ನಿಗಮ (ಎನ್ ಎಲ್ ಎಂ ಸಿ) ವನ್ನು 5000 ಕೋಟಿ ರೂ. ಆರಂಭಿಕ ಅಧಿಕೃತ ಷೇರು ಬಂಡವಾಳ ಮತ್ತು 150 ಕೋಟಿ ರೂ. ಪಾವತಿಸಿದ ಷೇರು ಬಂಡವಾಳದೊಂದಿಗೆ, ಭಾರತ ಸರ್ಕಾರದ ಸಂಪೂರ್ಣ ಸ್ವಾಮ್ಯದ ಕಂಪನಿಯಾಗಿ ಸ್ಥಾಪಿಸಲು ಅನುಮೋದಿಸಲಾಗಿದೆ. ಎನ್ ಎಲ್ ಎಂ ಸಿ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು (ಸಿ ಪಿ ಎಸ್ ಇ ಗಳು) ಮತ್ತು ಇತರ ಸರ್ಕಾರಿ ಸಂಸ್ಥೆಗಳ ಹೆಚ್ಚುವರಿ ಭೂಮಿ ಮತ್ತು ಕಟ್ಟಡ ಆಸ್ತಿಗಳನ್ನು ನಗದೀಕರಣಗೊಳಿಸುತ್ತದೆ.**

- **ಪರಿಣಾಮ:** ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು ಪ್ರಸ್ತುತ ಹೆಚ್ಚಿನ ಪ್ರಮಾಣದ ಬಳಕೆಯಾಗದ ಅಥವಾ ಭಾಗಶಃ ಬಳಸಲಾದ ಭೂಮಿ ಮತ್ತು ಸ್ವತ್ತುಗಳನ್ನು ಹೊಂದಿವೆ. ಈ ಹೆಚ್ಚುವರಿ ಭೂಮಿ ಮತ್ತು ಆಸ್ತಿಗಳಿಂದ ಹಣಗಳಿಕೆಯು ಕಾರ್ಯತಂತ್ರದ ಬಂಡವಾಳ ಹಿಂದೆಗೆತ ಪ್ರಕ್ರಿಯೆಯಲ್ಲಿರುವ ಅಥವಾ ಮುಚ್ಚುವಿಕೆಯ ಅಂಚಿನಲ್ಲಿರುವ ಸಿ ಪಿ ಎಸ್ ಇ ಗಳ ಬೆಲೆ ನಿಗದಿಗೆ ನಿರ್ಣಾಯಕವಾಗಿದೆ. ರಾಷ್ಟ್ರೀಯ ಭೂಮಿ ನಗದೀಕರಣ ನಿಗಮ ಈ ಸ್ವತ್ತುಗಳನ್ನು ನಗದೀಕರಣಗೊಳಿಸುತ್ತದೆ ಮತ್ತು ಪ್ರಕ್ರಿಯೆಯ ಉದ್ದಕ್ಕೂ ಬೆಂಬಲವನ್ನು ನೀಡುತ್ತದೆ. ಉತ್ಪಾದನೆಗಾಗಿ ಈ ಭಾಗಶಃ ಬಳಸಿದ ಸ್ವತ್ತುಗಳ ಬಳಕೆಯು ಖಾಸಗಿ ವಲಯದ ಹೂಡಿಕೆಯನ್ನು ಪ್ರೋತ್ಸಾಹಿಸುತ್ತದೆ, ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುತ್ತದೆ ಮತ್ತು ಆರ್ಥಿಕ ಹಾಗು ಸಾಮಾಜಿಕ ಮೂಲಸೌಕರ್ಯಗಳಿಗೆ ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸುತ್ತದೆ. ಹಣಗಳಿಕೆಯು ಕಾರ್ಯತಂತ್ರದ ಬಂಡವಾಳ ಹಿಂದೆಗೆತ ಪ್ರಕ್ರಿಯೆಯಲ್ಲಿ, ಎನ್ ಎಲ್ ಎಂ ಸಿ ಹೆಚ್ಚುವರಿ ಭೂಮಿ ಮತ್ತು ಕಟ್ಟಡ ಆಸ್ತಿಗಳನ್ನು ನಿಷ್ಕ್ರಿಯ ಸಿ ಪಿ ಎಸ್ ಇ ಗಳು ಮತ್ತು ಸರ್ಕಾರಿ ಸ್ವಾಮ್ಯದ ಸಿ ಪಿ ಎಸ್ ಇ ಗಳಿಂದ ಸ್ವಾಧೀನಪಡಿಸಿಕೊಳ್ಳುತ್ತದೆ. ಇದನ್ನು ಎನ್ ಎಲ್ ಎಂ ಸಿ ನಿರ್ವಹಿಸುತ್ತದೆ ಮತ್ತು ನಗದೀಕರಣಗೊಳಿಸುತ್ತದೆ. ಇದರಿಂದ ಸಿ ಪಿ ಎಸ್ ಇ ಗಳನ್ನು ಮುಚ್ಚಲು ಮತ್ತು ಕಾರ್ಯತಂತ್ರದ ಬಂಡವಾಳ ಹಿಂದೆಗೆತ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸುಲಭವಾಗುತ್ತದೆ.

- **ನಿರ್ಧಾರ: ಗುಜರಾತ್‌ನ ಜಾಮ್‌ನಗರದಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜಾಗತಿಕ ಸಾಂಪ್ರದಾಯಿಕ ಔಷಧ ಪದ್ಧತಿಯ ಕೇಂದ್ರ (ಡಬ್ಲ್ಯು ಎಚ್‌ಒ ಜಿಸಿಟಿಎಂ) ಸ್ಥಾಪನೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದ್ದು, ಭಾರತ ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯು ಎಚ್‌ಒ) ನಡುವಿನ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.**

- **ಪರಿಣಾಮ:** ಡಬ್ಲ್ಯು ಎಚ್‌ಒ ಜಿಸಿಟಿಎಂ ಅನ್ನು ಆಯುಷ್ ಸಚಿವಾಲಯದ ಅಡಿಯಲ್ಲಿ ಜಾಮ್‌ನಗರದಲ್ಲಿ ಸ್ಥಾಪಿಸಲಾಗುವುದು. ಇದು ಸಾಂಪ್ರದಾಯಿಕ ಔಷಧಕ್ಕಾಗಿ ವಿಶ್ವದ ಮೊದಲ ಮತ್ತು ಏಕೈಕ ಹೊರಗುತ್ತಿಗೆ ಜಾಗತಿಕ ಕೇಂದ್ರವಾಗಿದೆ. ಇದು ವಿಶ್ವಾದ್ಯಂತ ಆಯುಷ್ ವ್ಯವಸ್ಥೆಗಳನ್ನು ಸ್ಥಾಪಿಸಲು, ಸಾಂಪ್ರದಾಯಿಕ ಔಷಧ ಪದ್ಧತಿಗೆ ಸಂಬಂಧಿಸಿದ ಜಾಗತಿಕ ಆರೋಗ್ಯ ಸಮಸ್ಯೆಗಳಲ್ಲಿ ನಾಯಕತ್ವವನ್ನು ಒದಗಿಸಲು ಸಹಾಯಕ ಹಾಗು ಸಾಂಪ್ರದಾಯಿಕ ಔಷಧದ ಗುಣಮಟ್ಟ, ಸುರಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಖಚಿತಪಡಿಸಿಕೊಳ್ಳಲು, ಸಾಂಪ್ರದಾಯಿಕ ಔಷಧದ ಪ್ರವೇಶ ಮತ್ತು ತರ್ಕಬದ್ಧ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಂಬಂಧಿತ ತಾಂತ್ರಿಕ ಕ್ಷೇತ್ರಗಳಲ್ಲಿ ಮಾನದಂಡಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಇದು ವಿಶೇಷ ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ ಕಾರ್ಯಕ್ರಮಗಳ ಅಭಿವೃದ್ಧಿಗೆ ಸಹ ನೆರವು ಒದಗಿಸುತ್ತದೆ. ಈ ಕೇಂದ್ರವನ್ನು ಸ್ಥಾಪಿಸಲು ಅಗತ್ಯವಿರುವ ಚಟುವಟಿಕೆಗಳನ್ನು ಸಂಘಟಿಸಲು, ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ಜಂಟಿ ಕಾರ್ಯಪಡೆ (ಜೆಟಿಎಫ್) ಯನ್ನು ರಚಿಸಲಾಗಿದೆ. ಜೆಟಿಎಫ್ ಭಾರತ ಸರ್ಕಾರ, ಜಿನೀವಾದಲ್ಲಿನ ಭಾರತದ ಖಾಯಂ ಮಿಷನ್ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡಿದೆ. ■



# ಹಿತಕರ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ 'ಕವಚ' ಪಡೆದ ರೈಲ್ವೇ

**ಭಾರತೀಯ ರೈಲ್ವೇಯು ಸುಗಮ ಪ್ರಯಾಣದ ಅನುಭವವನ್ನು ಒದಗಿಸುವುದರ ಜೊತೆಗೆ, ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುತ್ತದೆ. ಅದಕ್ಕಾಗಿಯೇ, ಆಧುನೀಕರಣಕ್ಕೆ ಒತ್ತು ನೀಡುತ್ತಿರುವಾಗ, ಭದ್ರತಾ ವ್ಯವಸ್ಥೆಯನ್ನು ಸಹ ನಿರಂತರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಪ್ರಕ್ರಿಯೆಯ ಭಾಗವಾಗಿ, ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ರೈಲು ಸುರಕ್ಷತೆಯನ್ನು ಸುಧಾರಿಸಲು ವಿನ್ಯಾಸಗೊಳಿಸಲಾದ ಸ್ಥಳೀಯ ಸ್ವಯಂಚಾಲಿತ ರೈಲು ಸಂರಕ್ಷಣಾ ವ್ಯವಸ್ಥೆಯಾದ ಕವಚ್ ವ್ಯವಸ್ಥೆಯ ಪರೀಕ್ಷೆಯನ್ನು ಮೇಲ್ವಿಚಾರಣೆ ಮಾಡಿದರು. ಈ ವ್ಯವಸ್ಥೆಯು ರೈಲು ಪ್ರಯಾಣದ ಆನಂದವನ್ನು ಹೆಚ್ಚಿಸುವುದಲ್ಲದೆ, ಅದನ್ನು ಸುರಕ್ಷಿತವಾಗಿಸುತ್ತದೆ.**

ಒಂದು ಕಾಲದಲ್ಲಿ ರೈಲು ಅಪಘಾತಗಳು ಪ್ರತಿನಿತ್ಯ ವರದಿಯಾಗುತ್ತಿದ್ದವು. ಆದರೆ, ಸರ್ಕಾರದ ಪ್ರಯತ್ನದಿಂದ ಈ ಅಪಘಾತಗಳು ಈಗ ಕಡಿಮೆಯಾಗಿವೆ. ಈಗ "ಕವಚ" ವ್ಯವಸ್ಥೆಯ ಮೂಲಕ ಅಪಘಾತಗಳ ತಡೆಗೆ ಕ್ರಮಕೈಗೊಳ್ಳಲಾಗುತ್ತಿದೆ. ದಕ್ಷಿಣ-ಮಧ್ಯ ರೈಲ್ವೆಯ "ಕವಚ್" ಅನ್ನು ಮಾರ್ಚ್ 4, 2022 ರಂದು ಗುಲ್ಲಗುಡ ಮತ್ತು ಚಿಟ್ಗಿಡ್ಡಾ ರೈಲು ನಿಲ್ದಾಣಗಳ ನಡುವೆ ಪರೀಕ್ಷಿಸಲಾಯಿತು. ಪರೀಕ್ಷೆಯ ವೇಳೆ, ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ಗುಲ್ಲಗುಡದಿಂದ ಚಿಟ್ಗಿಡ್ಡಾಕ್ಕೆ ಪ್ರಯಾಣಿಸುತ್ತಿದ್ದ ಸ್ವಯಂಚಾಲಿತ ರೈಲಿನಲ್ಲಿದ್ದರೆ, ರೈಲ್ವೆ ಮಂಡಳಿ ಅಧ್ಯಕ್ಷ ವಿ. ತ್ರಿಪತ್ ಚಿಟಗಿಡ್ಡಾದಿಂದ ಗುಲ್ಲಗುಡಕ್ಕೆ ತೆರಳುತ್ತಿದ್ದ ಸ್ವಯಂಚಾಲಿತ ರೈಲಿನಲ್ಲಿ ಇದ್ದರು. ಪರೀಕ್ಷೆಯ ಸಮಯದಲ್ಲಿ, ಎರಡೂ ಎಂಜಿನ್‌ಗಳು ಮುಖಾಮುಖಿಯಾಗಿ ಬಂದವು. ಒಂದು ಕ್ಷಣ, ಎರಡು ರೈಲುಗಳು ಒಂದಕ್ಕೊಂದು ಡಿಕ್ಕಿ ಹೊಡೆದಂತೆ ತೋರುತ್ತಿತ್ತು, ಆದಾಗ್ಯೂ, ಕವಚ್ ಎರಡೂ ರೈಲುಗಳನ್ನು 380 ಮೀಟರ್ ಅಂತರದಲ್ಲಿ ನಿಲ್ಲಿಸಿತು. ಲೋಕೋಮೋಟಿವ್ ಅನ್ನು ಕೆಂಪು ದೀಪವನ್ನು ದಾಟಿ ಪರೀಕ್ಷಿಸಲಾಯಿತು; ಆದಾಗ್ಯೂ, ಲೊಕೊಮೊಟಿವ್ ಕೆಂಪು ಸಂಕೇತವನ್ನು ರವಾನಿಸಲಿಲ್ಲ ಏಕೆಂದರೆ 'ಕವಚ್' ಗೆ ಬ್ರೇಕ್‌ಗಳ ಸ್ವಯಂಚಾಲಿತ ನಿಯೋಜನೆಯ ಅಗತ್ಯವಿತ್ತು. ಭಾರತೀಯ ಉದ್ಯಮದ ಸಹಯೋಗದೊಂದಿಗೆ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್ ಡಿ ಎಸ್ ಒ) ಯಿಂದ ಆಂತರಿಕವಾಗಿ ಅಭಿವೃದ್ಧಿಪಡಿಸಲಾದ ಕವಚ್, ಎಟಿಪಿ ಸ್ವಾಮ್ಯದ ವ್ಯವಸ್ಥೆಯಾಗಿದೆ. ಇದು ಹೆಚ್ಚಿನ ಅಪಾಯದ ಕ್ರಾಸಿಂಗ್ ಸಿಗ್ನಲ್‌ಗಳಲ್ಲಿ ರೈಲುಗಳನ್ನು ರಕ್ಷಿಸುತ್ತದೆ ಮತ್ತು ಘರ್ಷಣೆಯನ್ನು ತಪ್ಪಿಸಲು ಸಹಾಯ ಮಾಡುತ್ತದೆ. ವೇಗದ ಮಿತಿಯೊಳಗೆ ರೈಲನ್ನು ನಿಯಂತ್ರಿಸಲು ಚಾಲಕ ವಿಫಲವಾದಲ್ಲಿ, ಅದು ಸ್ವಯಂಚಾಲಿತವಾಗಿ ರೈಲು ಬ್ರೇಕಿಂಗ್ ವ್ಯವಸ್ಥೆಯನ್ನು ಸಕ್ರಿಯಗೊಳಿಸುತ್ತದೆ. ಇದು ಕವಚ್ ವ್ಯವಸ್ಥೆಯನ್ನು ಬಳಸುವ ಎರಡು ಎಂಜಿನ್‌ಗಳ ನಡುವಿನ ಘರ್ಷಣೆಯನ್ನು ತಡೆಯುತ್ತದೆ. ಭಾರತೀಯ ರೈಲ್ವೇ ವಿಶ್ವದ ಅತಿದೊಡ್ಡ ಸಾರಿಗೆ ಜಾಲಗಳಲ್ಲಿ ಒಂದಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಪ್ರಯಾಣಿಕರು ತಮ್ಮ ಪ್ರಯಾಣದಲ್ಲಿ ಸುರಕ್ಷಿತವಾಗಿರಲು ಮತ್ತು ಪ್ರಯಾಣವನ್ನು ಆನಂದಿಸುವಂತೆ ಮಾಡಲು ಕವಚವನ್ನು ರೂಪಿಸಲಾಗಿದೆ.

# "ಕವಚ" ದಿಂದಾಗಿ ರೈಲುಗಳು ಡಿಕ್ಕಿಯಾಗುವುದಿಲ್ಲ

- ರೈಲು ಘರ್ಷಣೆ ಸಂರಕ್ಷಣಾ ವ್ಯವಸ್ಥೆಯಿಂದಾಗಿ, ಎರಡು ರೈಲುಗಳು ವಿರುದ್ಧ ದಿಕ್ಕಿನಿಂದ ಪರಸ್ಪರ ಸಮೀಪಿಸಿದರೆ, ಎಷ್ಟೇ ವೇಗದಲ್ಲಿದ್ದರೂ ಈ ಎರಡು ರೈಲುಗಳು "ಕವಚ್" ನಿಂದಾಗಿ ಡಿಕ್ಕಿಯಾಗುವುದಿಲ್ಲ.
- 2022ರ ಕೇಂದ್ರ ಬಜೆಟ್‌ನಲ್ಲಿ ಕವಚ ತಂತ್ರಜ್ಞಾನದ ಕುರಿತು ಘೋಷಣೆಯನ್ನೂ ಮಾಡಲಾಗಿದೆ.
- ಭವಿಷ್ಯದಲ್ಲಿ ಸರಿಸುಮಾರು 34,000 ಕಿಮೀ ನೆಟ್‌ವರ್ಕ್ ವ್ಯಾಪಿಸಲಿದೆ. ಕವಚ್ ಅತ್ಯಂತ ವೆಚ್ಚ-ಪರಿಣಾಮಕಾರಿ, ಸಂಪೂರ್ಣ ರಕ್ಷಣೆಯ ಮಟ್ಟ 4 (ಎಸ್ ಐ ಎಲ್-4) ಪ್ರಮಾಣೀಕೃತ ತಂತ್ರಜ್ಞಾನಗಳಲ್ಲಿ ಒಂದಾಗಿದೆ. ಅಲ್ಲದೆ, ಇದು ರೈಲ್ವೆಗೆ ಸ್ಥಳೀಯ ತಂತ್ರಜ್ಞಾನದ ರಫ್ತಿಗೆ ಹಾದಿಯನ್ನು ತೆರೆಯುತ್ತದೆ.

## ಕವಚ್‌ನ ಗುಣಲಕ್ಷಣಗಳು

- ಅಪಾಯಕಾರಿ ಸಿಗ್ನಲ್ ಕ್ರಾಸಿಂಗ್‌ಗಳನ್ನು ನಿಗಾದಲ್ಲಿ ಇಡುವುದು
- ಸಿಗ್ನಲ್ ಸ್ಥಿತಿಯನ್ನು ಪ್ರದರ್ಶಿಸುವ ಡ್ರೈವರ್ ಮೆಷಿನ್ ಇಂಟರ್ಫೇಸ್ (ಡಿಎಂಐ) ಮತ್ತು ಲೊಕೊ ಪೈಲಟ್ ಆಪರೇಷನ್ ಕ್ಯುಮುಲೇಟಿವ್ ಇಂಡಿಕೇಶನ್ ಪ್ಯಾನಲ್ (ಎಲ್ ಪಿ ಒ ಸಿ ಐ ಪಿ), ರೈಲು ಚಲನೆಯ ನಿರಂತರ ಅಪ್ ಡೇಟ್ ಒದಗಿಸುತ್ತದೆ.
- ಸ್ವಯಂಚಾಲಿತ ಬ್ರೇಕಿಂಗ್ ಅನ್ನು ಬಳಸಿಕೊಂಡು ಅತಿ ವೇಗವನ್ನು ತಪ್ಪಿಸುವುದು. ಸ್ವಯಂಚಾಲಿತ ಸೀಟಿ ಆರಂಭವಾಗುತ್ತದೆ.
- ನೀವು ಗೇಟ್ ಹತ್ತಿರ ಬಂದಾಗ, ಗೇಟ್ ಸಿಗ್ನಲ್ ಸಮೀಪಿಸುತ್ತಿದ್ದಂತೆ ಸೀಟಿ ಸ್ವಯಂಚಾಲಿತವಾಗಿ ಪ್ರಾರಂಭವಾಗುತ್ತದೆ.
- ಕವಚ ವ್ಯವಸ್ಥೆಯೊಂದಿಗೆ ಸಜ್ಜುಗೊಂಡ ಎರಡು ಎಂಜಿನ್‌ಗಳ ನಡುವೆ ಡಿಕ್ಕಿಯಾಗುವುದನ್ನು ತಪ್ಪಿಸಬಹುದು. ತುರ್ತು ಸಂದರ್ಭದಲ್ಲಿ, ಎಸ್‌ಓಎಸ್ ಸಂದೇಶವನ್ನು ಕಳುಹಿಸಲಾಗುತ್ತದೆ.
- ಜಾಲ ಮೇಲ್ವಿಚಾರಣೆ ವ್ಯವಸ್ಥೆ ಮೂಲಕ ರೈಲು ಚಲನೆಯ ಕೇಂದ್ರೀಕೃತ ನೇರ ಮೇಲ್ವಿಚಾರಣೆ.



## ಪುಣೆ ಮೆಟ್ರೋ ರೈಲು ಯೋಜನೆಯನ್ನು ಉದ್ಘಾಟಿಸಿದ ಪ್ರಧಾನಿ

2014 ರವರೆಗೆ, ದೇಶದ ದೆಹಲಿ-ಎನ್‌ಸಿಆರ್ ಪ್ರದೇಶ ಮಾತ್ರ ಮೆಟ್ರೋದ ಬೃಹತ್ ವಿಸ್ತರಣೆಯನ್ನು ಕಂಡಿತು. ಮೆಟ್ರೋ ಕೆಲವು ನಗರಗಳನ್ನು ತಲುಪಲು ಪ್ರಾರಂಭಿಸಿತ್ತು, ಆದರೆ ಇದು ಈಗ ಕಾರ್ಯನಿರ್ವಹಿಸುತ್ತಿದೆ ಅಥವಾ ದೇಶಾದ್ಯಂತ ಒಂದು ಡಜನ್‌ಗಿಂತಲೂ ಹೆಚ್ಚು ನಗರಗಳಲ್ಲಿ ಪ್ರಾರಂಭವಾಗಲಿದೆ. ಇದರಲ್ಲಿ ಮಹಾರಾಷ್ಟ್ರದ ಪಾಲು ಕೂಡ ಇದೆ. ಮುಂಬೈ, ಪುಣೆ-ಪಿಂಪ್ರಿ, ಚಿಂಚ್ವಾಡ್, ಥಾಣೆ, ಅಥವಾ ನಾಗ್ಪುರದಲ್ಲಿ ಮಹಾರಾಷ್ಟ್ರದ ಮೆಟ್ರೋ ಜಾಲವು ವೇಗವಾಗಿ ವಿಸ್ತರಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 24, 2016 ರಂದು ಶಿಲಾನ್ಯಾಸ ಮಾಡಿದ್ದ ಪುಣೆ ಮೆಟ್ರೋ ರೈಲು ಯೋಜನೆಯನ್ನು ಮಾರ್ಚ್ 6, 2022 ರಂದು ಉದ್ಘಾಟಿಸಿದರು. ಇದು ಪುಣೆಯಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ, ಮಾಲಿನ್ಯವನ್ನು ಕಡಿಮೆ ಮಾಡುತ್ತದೆ ಮತ್ತು ಇಲ್ಲಿನ ನಿವಾಸಿಗಳಿಗೆ ಜೀವನವನ್ನು ಸುಲಭಗೊಳಿಸುತ್ತದೆ. ಈ ಯೋಜನೆಯು ಪುಣೆಯಲ್ಲಿ ವಿಶ್ವ ದರ್ಜೆಯ ನಗರ ಸಾರಿಗೆ ಮೂಲಸೌಕರ್ಯವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇಡೀ ಯೋಜನೆಗೆ ಸುಮಾರು 11,400 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. 32.2 ಕಿಲೋಮೀಟರ್ ಉದ್ದದ ಪುಣೆ ಮೆಟ್ರೋ ರೈಲು ಯೋಜನೆಯ 12 ಕಿಲೋಮೀಟರ್ ವ್ಯಾಪ್ತಿಯನ್ನು ಪ್ರಧಾನಿ ಉದ್ಘಾಟಿಸಿದರು, ಜೊತೆಗೆ ಗರ್ವಾರೆ ಮೆಟ್ರೋ ನಿಲ್ದಾಣದಲ್ಲಿ ಪ್ರದರ್ಶನವನ್ನು ಉದ್ಘಾಟಿಸಿದರು. ಅಲ್ಲಿಂದ ಆನಂದನಗರ ಮೆಟ್ರೊ ನಿಲ್ದಾಣದವರೆಗೆ ಮೆಟ್ರೊ ಸವಾರಿ ನಡೆಸಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ-ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅನ್ನು ಉಲ್ಲೇಖಿಸಿದ ಪ್ರಧಾನಿ ನರೇಂದ್ರ ಮೋದಿ, "ಇಂದಿನ ವೇಗವಾಗಿ ಬೆಳೆಯುತ್ತಿರುವ ಭಾರತದಲ್ಲಿ, ನಾವು ವೇಗ ಮತ್ತು ಪ್ರಮಾಣ ಎರಡನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕಾಗಿಯೇ ನಮ್ಮ ಸರ್ಕಾರವು ಪಿಎಂ-ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅನ್ನು ಸಿದ್ಧಪಡಿಸಿದೆ" ಎಂದರು. ಪುಣೆ ಮೆಟ್ರೋ ಕಾರ್ಯಾಚರಣೆಯಲ್ಲಿ ಸೌರಶಕ್ತಿಯನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಇದು ಪ್ರತಿ ವರ್ಷ ಸುಮಾರು 25 ಸಾವಿರ ಟನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ತಡೆಯುತ್ತದೆ. ■

> ಪುಣೆ ಮೆಟ್ರೋಗೆ ಅಡಿಪಾಯ ಹಾಕಲು ನೀವು ನನ್ನನ್ನು ಆಹ್ವಾನಿಸಿದ್ದಿರಿ ಮತ್ತು ಈಗ ಅದನ್ನು ಉದ್ಘಾಟಿಸುವ ಗೌರವವನ್ನೂ ನನಗೆ ನೀಡಿದ್ದೀರಿ. ಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಬಹುದು ಎಂಬುದನ್ನು ಇದು ತಿಳಿಸುತ್ತದೆ.
>
> ನರೇಂದ್ರ ಮೋದಿ, ಪ್ರಧಾನಮಂತ್ರಿ



## ಉಕ್ರೇನ್ ಬಿಕ್ಕಟ್ಟಿನ ನಡುವೆಯೂ ಪ್ರತಿಯೊಬ್ಬ ಭಾರತೀಯನು ತವರೂರು ತಲುಪಿದ್ದಾನೆ

# ಭಾರತದ ಹೆಚ್ಚುತ್ತಿರುವ ವರ್ಚಸ್ಸಿನ ಪ್ರತಿಬಿಂಬ



ಪ್ರಪಂಚದ ಯಾವುದೇ ಭಾಗದಲ್ಲಿ ವಾಸಿಸುವ ಭಾರತೀಯರ ಸುರಕ್ಷತೆಯು ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಕಳೆದ ಏಳು ವರ್ಷಗಳಲ್ಲಿ, ಪ್ರಪಂಚದ ವಿವಿಧ ಭಾಗಗಳಲ್ಲಿ ಹಲವಾರು ಕರಾಳ ಘಟನೆಗಳು ಭಾರತೀಯ ಪ್ರಜೆಗಳ ಸುರಕ್ಷತೆಗೆ ಬೆದರಿಕೆ ಹಾಕಿದವು. ಆದರೆ ತನ್ನ ಬೆಳೆಯುತ್ತಿರುವ ಅಂತಾರಾಷ್ಟ್ರೀಯ ವರ್ಚಸ್ಸಿನ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವ ಮೂಲಕ ಚುರುಕಾದ ಯೋಜನೆ ಮತ್ತು ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯೊಂದಿಗೆ ಭಾರತವು ತನ್ನ ನಾಗರಿಕರನ್ನು ಅಪಾಯಕಾರಿ ಸ್ಥಳಗಳಿಂದ ಸ್ಥಳಾಂತರಿಸುವಲ್ಲಿ ಯಶಸ್ವಿಯಾಗಿದೆ. ಇತ್ತೀಚೆಗೆ ರಷ್ಯಾ-ಉಕ್ರೇನ್ ಯುದ್ಧ ಪ್ರಾರಂಭವಾದಾಗ ಭಾರತ ಸರ್ಕಾರವು ಕಾರ್ಯಾಚರಣೆಗೆ ಇಳಿಯಿತು ಮತ್ತು ಭಾರತೀಯರನ್ನು ಸುರಕ್ಷಿತವಾಗಿ ಮರಳಿ ಕರೆತರುವ ಗುರಿಯೊಂದಿಗೆ 'ಆಪರೇಷನ್ ಗಂಗಾ'ವನ್ನು ಪ್ರಾರಂಭಿಸಿತು. ಕಳೆದ ಕೆಲವು ವರ್ಷಗಳಲ್ಲಿ, ಭಾರತೀಯ ವಿದೇಶಾಂಗ ನೀತಿಯು ರೂಪಾಂತರಗೊಂಡಿದೆ. ಅದು ಹೆಚ್ಚು ಸಕ್ರಿಯವಾಗಿರುವುದು ಮಾತ್ರವಲ್ಲದೆ ಸ್ವಾವಲಂಬನೆಯ ಸಂಕೇತವಾಗಿದೆ. ಹಿಂದಿನ ಕಾಲದ 'ರಕ್ಷಣಾತ್ಮಕ ಮತ್ತು ಅವಲಂಬಿತ' ಮನಸ್ಥಿತಿಯ ಮೃದುತ್ವದ ಟ್ಯಾಗ್ ಅನ್ನು ಭಾರತವು ಕಳಚಿಕೊಂಡಿದೆ. ಇದು ಕೋವಿಡ್‌ನಿಂದಾಗಿ ಉಂಟಾದ ಲಾಕ್‌ಡೌನ್ ಆಗಿರಲಿ ಅಥವಾ ಅಫ್ಘಾನಿಸ್ತಾನ, ನೇಪಾಳ, ಸುಡಾನ್, ಯೆಮೆನ್, ಇಂಡೋನೇಷ್ಯಾದಂತಹ ದೇಶಗಳ ಪ್ರಕ್ಷುಬ್ಧ ಪರಿಸ್ಥಿತಿ ಇರಲಿ, ಭಾರತ ಸರ್ಕಾರವು ತನ್ನ ನಾಗರಿಕರ ನೆರವಿಗೆ ಧಾವಿಸಿದೆ....

# ವಿದೇಶಿ ನೆಲದಲ್ಲಿ ಸಂರಕ್ಷಕನಾದ ತ್ರಿವರ್ಣ ಧ್ವಜ

## ತಮ್ಮ ಅನುಭವಗಳನ್ನು ಹಂಚಿಕೊಂಡರು ತವರಿಗೆ ಹಿಂದಿರುಗಿದ ಪ್ರೀತಿಪಾತ್ರರು

ತ್ರಿವರ್ಣ ಧ್ವಜಗಳನ್ನು ಹಿಡಿದ ಭಾರತೀಯರನ್ನು ಹೊತ್ತೊಯ್ಯುತ್ತಿದ್ದ ಬಸ್‌ಗಳನ್ನು ತಪಾಸಣೆಗೆ ನಿಲ್ಲಿಸದೇ ಇರುವುದು ಭಾರತದ ಧ್ವಜದ ಶಕ್ತಿ ಪ್ರದರ್ಶಿಸಿತು. ಉಕ್ರೇನ್‌ನಿಂದ ಶಿಮ್ಲಾ ತಲುಪಿದ ಇಬ್ಬರು ವಿದ್ಯಾರ್ಥಿಗಳಾದ ಕಾಶಿಶ್ ಶರ್ಮಾ ಮತ್ತು ಒಶಿಮಾ, "ಭಾರತ ಸರ್ಕಾರದ ಪ್ರಯತ್ನದಿಂದ ಉಕ್ರೇನ್‌ನಲ್ಲಿರುವ ಭಾರತದ ರಾಯಭಾರಿ ಮತ್ತು ಅಲ್ಲಿನ ಸರ್ಕಾರ ನಮ್ಮನ್ನು ಸುರಕ್ಷಿತವಾಗಿ ವಾಪಸ್ ಕಳುಹಿಸಲು ಪ್ರಯತ್ನಿಸಿತು. ವಿದ್ಯಾರ್ಥಿಗಳನ್ನು ವಿಮಾನ ನಿಲ್ದಾಣಕ್ಕೆ ಕರೆದೊಯ್ಯುವ ಬಸ್‌ಗಳು ಭಾರತೀಯ ಧ್ವಜವನ್ನು ಪ್ರದರ್ಶಿಸುತ್ತಿದ್ದ ಕಾರಣ ಅಲ್ಲಿ ಸೇನೆಯು ತಪಾಸಣೆಗೆ ನಿಲ್ಲಿಸಲಿಲ್ಲ." ಎಂದು ಹೇಳಿದರು.

"ನಾವು ಹೆದರಿದ್ದೆವು ಆದರೆ ಭಾರತ ಸರ್ಕಾರದ ಸಹಾಯದಿಂದ ಸುರಕ್ಷಿತವಾಗಿ ಹಿಂತಿರುಗಿದೆವು. ತ್ರಿವರ್ಣ ಧ್ವಜದ ಮೌಲ್ಯವನ್ನು ನಾವು ತಿಳಿದುಕೊಂಡೆವು. ಈ ಪರಿಸ್ಥಿತಿಯಲ್ಲಿ ಭಾರತ ಸರ್ಕಾರ ಮಾತ್ರ ಸಹಾಯ ಮಾಡಿತು. ನಮ್ಮ ದಾಖಲೆಗಳನ್ನು ಅತ್ಯಂತ ವೇಗವಾಗಿ ಪರಿಶೀಲಿಸಲಾಯಿತು. ಆದರೆ ಬೇರೆ ದೇಶಗಳ ವಿದ್ಯಾರ್ಥಿಗಳ ದಾಖಲೆಗಳನ್ನು ಅಷ್ಟು ತ್ವರಿತವಾಗಿ ಪರಿಶೀಲಿಸುತ್ತಿರಲಿಲ್ಲ."

"ಫೆಬ್ರವರಿ 24 ರಂದು ಉಕ್ರೇನ್ ಮೇಲೆ ರಷ್ಯಾದ ದಾಳಿ ನಡೆದಾಗ, ನಾವು ಇನ್ನು ಮುಂದೆ ಭಾರತಕ್ಕೆ ಹಿಂತಿರುಗಲು ಸಾಧ್ಯವಿಲ್ಲ ಎಂದು ಅನಿಸುತ್ತಿತ್ತು. ಸಾವನ್ನು ಬಹಳ ಹತ್ತಿರದಿಂದ ನೋಡಿದೆವು. ಆದರೆ ಭಾರತದ ನಿವಾಸಿಯಾಗಿರುವುದಕ್ಕೆ ಹೆಮ್ಮೆ, ತ್ರಿವರ್ಣ ಧ್ವಜದ ಬಗ್ಗೆ ಹೆಮ್ಮೆಯಾಗುತ್ತಿದೆ. ಬಸ್‌ಗಳಿಗೆ ತ್ರಿವರ್ಣ ಧ್ವಜವನ್ನು ಹಾಕಬೇಕು, ರಷ್ಯಾದ ಯಾವುದೇ ಸೇನೆಯು ನಿಮ್ಮನ್ನು ಮುಟ್ಟುವುದಿಲ್ಲ ಎಂದು ಸೂಚನೆ ನೀಡಲಾಯಿತು".

- ಉಕ್ರೇನ್‌ನಿಂದ ಹಿಂದಿರುಗಿದ ಇಬ್ಬರು ವಿದ್ಯಾರ್ಥಿಗಳ ಅಭಿಪ್ರಾಯ

"ನಾವು ಭಾರತಕ್ಕೆ ಹಿಂತಿರುತ್ತೇವೆ ಎಂಬ ಭರವಸೆಯನ್ನು ಬಿಟ್ಟಿದ್ದೆವು. ಆದರೆ ಭಾರತ ಸರ್ಕಾರದ ನೆರವಿನಿಂದ ನಾವು ಹಿಂತಿರುಗಲು ಸಾಧ್ಯವಾಯಿತು. ನಮಗೆ ಎಲ್ಲಿಯೂ ಸಮಸ್ಯೆ ಎದುರಾಗಲಿಲ್ಲ. ಧನ್ಯವಾದಗಳು ಮೋದಿ ಸರ್. ಮನೆಯಲ್ಲಿ ದೇವರ ನಂತರ ಯಾರದ್ದಾದರೂ ಹೆಸರು ಕೇಳಿಬಂದಿದ್ದರೆ ಅದು ಮೋದಿಯವರ ಹೆಸರಾಗಿತ್ತು. ನಮ್ಮ ಹೆತ್ತವರು ಸಹ ಯಾವುದೇ ಸಹಾಯವನ್ನು ನೀಡುವ ಸ್ಥಿತಿಯಲ್ಲಿಲ್ಲದ ಸಮಯದಲ್ಲಿ ನೀವು ನಮ್ಮನ್ನು ಉಳಿಸಿದ್ದೀರಿ."

ಆಪರೇಷನ್ ಗಂಗಾ ಅಡಿಯಲ್ಲಿ ತವರೂರು ಸೇರಿದ ಆಗ್ರಾದ ವಿದ್ಯಾರ್ಥಿ ಸಾಕ್ಷಿ ಸಿಂಗ್, "ನಾವು ಉಕ್ರೇನ್‌ನಲ್ಲಿ ತ್ರಿವರ್ಣ ಧ್ವಜದ ಮಹತ್ವವನ್ನು ಅರಿತುಕೊಂಡೆವು. ಅದು ಅಲ್ಲಿನ ಭಾರತೀಯರಿಗೆ ಗುರಾಣಿಯಾಗಿ ಮಾರ್ಪಟ್ಟಿತು." ಎಂದು ಹೇಳುತ್ತಾರೆ.

ಹೇಮಂತ್ ಪೌಡ್ವಾಲ್ ಎಂಬ ವಿದ್ಯಾರ್ಥಿ ಹೇಳುತ್ತಾರೆ, "ನಾವು ಗಡಿ ದಾಟಿದಾಗ, ಭಾರತೀಯ ಧ್ವಜವನ್ನು ನೋಡಿದ ನಂತರ ನಾವು ನಿರಾಳರಾದೆವು. ರಾಯಭಾರ ಕಚೇರಿಯ ಸಿಬ್ಬಂದಿ ಧ್ವಜಗಳೊಂದಿಗೆ ನಮಗಾಗಿ ಕಾಯುತ್ತಿದ್ದರು ಅದು ನಮಗೆ ತುಂಬಾ ಭರವಸೆ ನೀಡಿತು."




“ನಮ್ಮನ್ನು ಉಚಿತವಾಗಿ ಮನೆಗೆ ಕರೆತರಲಾಯಿತು. ಆಹಾರ ಮತ್ತು ಇತರ ವೆಚ್ಚಗಳಿಗೆ ನಾವು ಯಾವುದೇ ಹಣವನ್ನು ಭರಿಸಬೇಕಾಗಿರಲಿಲ್ಲ. ನಾವು ಮೈನಸ್ 5 ಡಿಗ್ರಿ ತಾಪಮಾನದಲ್ಲಿ ರೊಮೇನಿಯಾದ ಶಿಬಿರದಲ್ಲಿ ಉಳಿದು ನಂತರ ಮನೆಗೆ ಮರಳಿದೆವು. ಶಿಬಿರದಲ್ಲಿಯೂ ಉತ್ತಮ ವ್ಯವಸ್ಥೆಗಳಿದ್ದವು.”

“ನಾನು ಅಸ್ಮಾ ಶಫೀಕ್, ಪಾಕಿಸ್ತಾನದ ನಿವಾಸಿ. ಉಕ್ರೇನ್‌ನಿಂದ ನನ್ನ ಮನೆಗೆ ಮರಳಲು ಈ ಕಷ್ಟದ ಸಮಯದಲ್ಲಿ ಭಾರತೀಯ ರಾಯಭಾರ ಕಚೇರಿ ನನಗೆ ನೆರವಾಯಿತು. ಉಕ್ರೇನ್‌ನಿಂದ ನನ್ನನ್ನು ಹೊರತರುವಲ್ಲಿ ಬೆಂಬಲ ನೀಡಿದ ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೂ ನಾನು ಧನ್ಯವಾದ ಹೇಳುತ್ತೇನೆ”

# #'ಆಪರೇಷನ್ ಗಂಗಾ'

ನಿಸ್ಸಂದೇಹವಾಗಿ ಇದು ಭಾರತೀಯರಿಗೆ ಹೆಮ್ಮೆಯ ವಿಷಯ. ಉಕ್ರೇನ್ ಬಿಕ್ಕಟ್ಟಿನ ಮಧ್ಯೆ, ಭಾರತವು ತನ್ನ ಜನರನ್ನು ಭಾರತಕ್ಕೆ ಕರೆತರಲು ಯುದ್ಧೋಪಾದಿಯಲ್ಲಿ 'ಆಪರೇಷನ್ ಗಂಗಾ' ನಡೆಸಿತು. ಭಾರತೀಯ ಪ್ರಜೆಗಳ ಯಶಸ್ವಿ ಸ್ಥಳಾಂತರದ ಕಥೆಗಳು ಮತ್ತು ನೆರೆಯ ರಾಷ್ಟ್ರಗಳ ನಾಗರಿಕರು ತಮ್ಮ ಮನೆಗಳನ್ನು ಸುರಕ್ಷಿತವಾಗಿ ತಲುಪಲು ಸಹಾಯ ಮಾಡುವಲ್ಲಿ ಭಾರತದ ಪಾತ್ರವು ಕಷ್ಟದ ಸಮಯದಲ್ಲಿ ತನ್ನ ನಾಗರಿಕರ ನೆರವಿಗೆ ನಿಲ್ಲುವ ಸಾಮರ್ಥ್ಯವನ್ನು ತೋರಿಸುತ್ತದೆ.

ಉಕ್ರೇನ್ ಬಿಕ್ಕಟ್ಟು ಪ್ರಾರಂಭವಾದಾಗ, ಭಾರತವು ತನ್ನ ಪ್ರಜೆಗಳಿಗೆ ಅವರ ಹುಟ್ಟುಸ್ಥಳ ಮತ್ತು ಮಾತೃಭೂಮಿಗೆ ಸೇರಿರುವ ಸಂದೇಶದೊಂದಿಗೆ ತಲುಪಿತು...ಹತಾಶರಾಗಬೇಡಿ, ಭರವಸೆ ಕಳೆದುಕೊಳ್ಳಬೇಡಿ, ಭಾರತ ಯಾವಾಗಲೂ ನಿಮ್ಮೊಂದಿಗೆ ಇರುತ್ತದೆ ಎಂದಿತು. ಅನೇಕ ಸಂದರ್ಭಗಳಲ್ಲಿ ರಷ್ಯಾದ ಸೈನಿಕರು ತ್ರಿವರ್ಣ ಧ್ವಜವನ್ನು ನೋಡಿದ ನಂತರ ಭಾರತೀಯ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ ಎಂಬ ಅಂಶದಿಂದ ಭಾರತದ ತ್ರಿವರ್ಣ ಧ್ವಜದ ಮೌಲ್ಯವನ್ನು ಸುಲಭವಾಗಿ ಅಳೆಯಬಹುದು. ಭಾರತ ಸರ್ಕಾರವು ತಾನು ನೀಡಿದ ಭರವಸೆಯನ್ನು ಈಡೇರಿಸುವ ಮೂಲಕ ಸಮಯದ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಿತು. ಬಿಕ್ಕಟ್ಟಿನ ಪ್ರಾಯೋಗಿಕ ವಿಧಾನ ಮತ್ತು ಪರಿಣಾಮಕಾರಿ ನಿರ್ವಹಣೆಯು ಭಾರತದ ಸಾಮರ್ಥ್ಯವನ್ನು ಒತ್ತಿಹೇಳುತ್ತದೆ. ಉಕ್ರೇನ್‌ನಿಂದ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಿದ ಭಾರತೀಯ ವಿದ್ಯಾರ್ಥಿಗಳು 'ಆಪರೇಷನ್ ಗಂಗಾ' ಮೂಲಕ ಸುಗಮ ಸ್ಥಳಾಂತರಕ್ಕೆ ಅನುಕೂಲ ಮಾಡಿಕೊಟ್ಟ ರಾಷ್ಟ್ರಕ್ಕೆ ಧನ್ಯವಾದ ಅರ್ಪಿಸಿದರು. ಈ ಕಾರ್ಯಾಚರಣೆಯ ಅಡಿಯಲ್ಲಿ ಮುಂಬೈ ಮತ್ತು ವಿವಿಧ ವಿಮಾನ ನಿಲ್ದಾಣಗಳ ಮೂಲಕ ತವರಿಗೆ ಹಿಂದಿರುಗಿದ ವಿದ್ಯಾರ್ಥಿಗಳ ಅಭಿಪ್ರಾಯಗಳು ನವಭಾರತದ ಭರವಸೆಯನ್ನು ಬಲಪಡಿಸುತ್ತವೆ.

ರಾಷ್ಟ್ರ ಮತ್ತು ಅದರ ನಾಯಕತ್ವಕ್ಕೆ ಪ್ರತಿಯೊಂದು ಜೀವವೂ ಅಮೂಲ್ಯ. 2017 ರಲ್ಲಿ ಆಗಿನ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರ ಟ್ವೀಟ್‌ನಿಂದ ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. 8 ಜೂನ್ 2017 ರಂದು, ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆಯಾಗಿ, ಅವರು ತಮ್ಮ ಟ್ವಿಟರ್ ಹ್ಯಾಂಡಲ್‌ನಲ್ಲಿ "ನೀವು ಮಂಗಳ ಗ್ರಹದಲ್ಲಿ ಸಿಕ್ಕಿಹಾಕಿಕೊಂಡಿದ್ದರೆ, ಅಲ್ಲಿಯೂ ಭಾರತೀಯ ರಾಯಭಾರ ಕಚೇರಿ ನಿಮಗೆ ಸಹಾಯ ಮಾಡುತ್ತದೆ" ಎಂದು ಉತ್ತರಿಸಿದ್ದರು. ಉಕ್ರೇನ್ ಬಿಕ್ಕಟ್ಟಿನ ನಡುವೆ ನಡೆಸಿದ 'ಆಪರೇಷನ್ ಗಂಗಾ', ನವಭಾರತದ ನಾಯಕತ್ವವು ಪ್ರತಿಯೊಂದು ಸಮಸ್ಯೆಯನ್ನು ನಿವಾರಿಸಲು ದೃಢಸಂಕಲ್ಪವನ್ನು ಹೊಂದಿರುವುದು ಮಾತ್ರವಲ್ಲ, ಅದನ್ನು ಮಾಡುವ ವಿಧಾನ ಮತ್ತು ಧೈರ್ಯವನ್ನು ಹೊಂದಿದೆ ಎಂಬುದನ್ನು ಸಾಬೀತುಪಡಿಸಿದೆ. 2021 ರಲ್ಲಿ ಅಫ್ಘಾನಿಸ್ತಾನದಿಂದ ಭಾರತೀಯರನ್ನು ಸ್ಥಳಾಂತರಿಸಲು ನಡೆಸಿದ 'ಆಪರೇಷನ್ ದೇವಿಶಕ್ತಿ', 2020 ರಲ್ಲಿ, ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ವಿದೇಶದಲ್ಲಿರುವ ಭಾರತೀಯ ನಾಗರಿಕರನ್ನು ಮರಳಿ ಕರೆತರುವ ಗುರಿಯನ್ನು ಹೊಂದಿದ್ದ 'ವಂದೇ ಭಾರತ್



ಆಪರೇಷನ್ ಗಂಗಾ ಮೂಲಕ, ನಾವು ಉಕ್ರೇನ್‌ನಿಂದ ಸಾವಿರಾರು ಭಾರತೀಯರನ್ನು ಮರಳಿ ಕರೆತಂದಿದ್ದೇವೆ. ನಮ್ಮ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಅಲ್ಲಿದ್ದಾರೆ, ಅವರನ್ನು ಸಂಪೂರ್ಣ ಭದ್ರತೆಯೊಂದಿಗೆ ಅವರ ಮನೆಗೆ ತಲುಪಿಸಲು ಸರ್ಕಾರ ಹಗಲಿರುಳು ಶ್ರಮಿಸುತ್ತಿದೆ. ಇಂದಿನ ಯುಗವು ಪ್ರತಿಯೊಬ್ಬ ಭಾರತೀಯನಿಗೆ ಭಾರತಕ್ಕೆ ಬಹಳ ದೊಡ್ಡ ಸಂದೇಶವನ್ನು ನೀಡುತ್ತಿದೆ. ಭಾರತವನ್ನು ಮತ್ತಷ್ಟು ಶಕ್ತಿಯುತವಾಗಿಸಲು, ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ಇದು ಸಕಾಲ. ಜಾತಿ-ಪಂಥಗಳನ್ನು ಮೀರಿ, ಸಣ್ಣ-ಪುಟ್ಟ ಸಂಗತಿಗಳನ್ನು ಮೀರಿ ರಾಷ್ಟ್ರದೊಂದಿಗೆ ನಿಲ್ಲುವ ಸಮಯವಿದು.

ನರೇಂದ್ರ ಮೋದಿ, ಪ್ರಧಾನಮಂತ್ರಿ

# ಪ್ರಧಾನಿ ಮೋದಿ, ನಾಲ್ವರು ಕೇಂದ್ರ ಸಚಿವರು ಮತ್ತು 'ಸೂಪರ್ 30' 'ಆಪರೇಷನ್ ಗಂಗಾ' ಯಶೋಗಾಥೆ ಬರೆದರು



ಪ್ರಧಾನಿ ನರೇಂದ್ರ ಮೋದಿಯವರ ದಕ್ಷ ಮತ್ತು ಬಲಿಷ್ಠ ನಾಯಕತ್ವದಿಂದಾಗಿ ಜಾಗತಿಕ ಮಟ್ಟದಲ್ಲಿ ಭಾರತದ ಘನತೆ ಸಾಕಷ್ಟು ಹೆಚ್ಚಾಗಿದೆ. ರಷ್ಯಾ-ಉಕ್ರೇನ್ ಯುದ್ಧದ ಸಮಯದಲ್ಲಿ ಪ್ರದರ್ಶಿಸಿದಂತೆ ಇಂದು ಭಾರತವು ತನ್ನ ದೇಶ ಮತ್ತು ಅದರ ನಾಗರಿಕರ ಸುರಕ್ಷತೆಗಾಗಿ ಹಿಂಜರಿಕೆಯಿಲ್ಲದೆ ಮಾತನಾಡಲು ಸಮರ್ಥವಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೇ ಉಸ್ತುವಾರಿಯನ್ನು ವಹಿಸಿದರು. ಹಂಗೇರಿಯ ರಾಜಧಾನಿ ಬುಡಾಪೆಸ್ಟ್‌ನಲ್ಲಿ ನಾಲ್ವರು ಕೇಂದ್ರ ಸಚಿವರು ಮತ್ತು ಭಾರತೀಯ ಅಧಿಕಾರಿಗಳ ಸೂಪರ್ 30 ತಂಡವು ಅದನ್ನು ಯಶಸ್ವಿಯಾಗಿ ನಿರ್ವಹಿಸಿತು.

## ಯುದ್ಧ ಪೀಡಿತ ಪ್ರದೇಶದಲ್ಲಿ ಪ್ರತಿಯೊಬ್ಬ ಭಾರತೀಯನ ಬಗ್ಗೆ ಕಾಳಜಿ ವಹಿಸಲಾಯಿತು

- ಫೆಬ್ರವರಿ 15 ರಂದು, ಕೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಉಕ್ರೇನ್ ತೊರೆಯುವಂತೆ ಭಾರತೀಯರಿಗೆ ಸಲಹೆಯನ್ನು ನೀಡಿತು. ಇದರ ನಂತರ, ಇನ್ನೂ 3 ಸಲಹೆಗಳನ್ನು ನೀಡುವ ಮೂಲಕ, ಇದು ಉಕ್ರೇನ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಉಳಿಯಲು ಅನಿವಾರ್ಯವಿಲ್ಲದ ವಿದ್ಯಾರ್ಥಿಗಳಿಗೆ ತಾತ್ಕಾಲಿಕವಾಗಿ ದೇಶ ತೊರೆಯಲು ಪರಿಗಣಿಸುವಂತೆ ಸೂಚಿಸಿತು. ರಾಯಭಾರ ಕಚೇರಿಗೆ ತಿಳಿಸದೆ ಎಲ್ಲಿಗೂ ಹೋಗಬೇಡಿ ಎಂದು ಪ್ರತಿಯೊಬ್ಬ ಭಾರತೀಯನಿಗೆ ತಿಳಿಸಲಾಯಿತು. ಇದರ ನಂತರ, ಮಾರ್ಚ್ 1 ರಂದು ಕೀವ್, ಮಾರ್ಚ್ 3 ರಂದು ಖಾರ್ಕಿವ್ ಮತ್ತು ಮಾರ್ಚ್ 4 ರಂದು ಸುಮಿಯಲ್ಲಿ ಸಿಲುಕಿದ ಭಾರತೀಯರಿಗೆ ವಿಶೇಷ ಸಲಹೆಗಳನ್ನು ನೀಡಲಾಯಿತು.
- ಫೆಬ್ರವರಿ 16 ರಂದು, ಭಾರತ ಮತ್ತು ಉಕ್ರೇನ್ ನಡುವಿನ ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ವಿಮಾನಯಾನ ಅಧಿಕಾರಿಗಳು ಮತ್ತು ವಿಮಾನಯಾನ ಕಂಪನಿಗಳನ್ನು ಕೇಳಿತು. ಫೆಬ್ರವರಿ 17 ರಂದು, ವಿಮಾನಯಾನ ಸಚಿವಾಲಯವು ಈ ವಿಮಾನಗಳ ಮೇಲಿನ ಯಾವುದೇ ನಿರ್ಬಂಧಗಳನ್ನು ತೆಗೆದುಹಾಕಿತು. ಕಡ್ಡಾಯ ಆರ್ ಟಿ ಪಿ ಸಿ ಆರ್ ಪರೀಕ್ಷೆಯನ್ನು ಸಹ ನಿಲ್ಲಿಸಲಾಯಿತು.

ಉಕ್ರೇನ್‌ನಲ್ಲಿ ಸಿಲುಕಿದ ಭಾರತೀಯರಿಗಾಗಿ ವಿಶೇಷ ಸಹಾಯವಾಣಿ ಸಂಖ್ಯೆಯೊಂದಿಗೆ @opganga ಟ್ವಿಟರ್ ಖಾತೆಯನ್ನು ಪ್ರಾರಂಭಿಸಲಾಯಿತು.

# # 'ಆಪರೇಷನ್ ಗಂಗಾ'



## ಪ್ರಧಾನಿ ನರೇಂದ್ರ ಮೋದಿ ಅವರೇ ಎಲ್ಲ ಅಡೆತಡೆಗಳನ್ನು ನಿವಾರಿಸಿದರು

ಮಾರ್ಚ್ 4 ಮತ್ತು 6 ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸ್ವತಃ ಪರಿಸ್ಥಿತಿಯನ್ನು ಪರಿಶೀಲಿಸಿದರು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮೂರು ಬಾರಿ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ಅವರೊಂದಿಗೆ ಎರಡು ಬಾರಿ ಮಾತನಾಡಿದ ಪ್ರಧಾನಿ ಮೋದಿಯವರು ಉಕ್ರೇನ್‌ನಿಂದ ಭಾರತೀಯರನ್ನು ಕರೆ ತರಲು ಅವರ ಸಹಕಾರವನ್ನು ಕೋರಿದರು.

ಪ್ರಧಾನಿ ಜತೆಗಿನ ಮಾತುಕತೆಯ ಬಳಿಕ ಎರಡೂ ದೇಶಗಳು ಮಾನವೀಯ ಕಾರಿಡಾರ್ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದವು. ಅಲ್ಲದೆ, ಖಾರ್ಕಿವ್ ಮತ್ತು ಸುಮಿಯಿಂದ ಭಾರತೀಯ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲು ಅನುಕೂಲವಾಗುವಂತೆ ರಷ್ಯಾ ಕದನ ವಿರಾಮವನ್ನು ಘೋಷಿಸಿತು.

ಪ್ರಧಾನಿ ಮೋದಿಯವರೊಂದಿಗೆ ಮಾತುಕತೆ ನಡೆಸಿದ ನಂತರ, ಮಾಸ್ಕೋ, ಕೀವ್ ಅಧಿಕಾರಿಗಳು ಮಾನವೀಯ ಕಾರಿಡಾರ್ ನಿರ್ಮಿಸಲು ಸೂಚನೆಗಳನ್ನು ನೀಡಿದರು. ಯುದ್ಧ ಪೀಡಿತ ಸುಮಿಯಿಂದ ಭಾರತೀಯ ವಿದ್ಯಾರ್ಥಿಗಳನ್ನು 12 ಬಸ್‌ಗಳಲ್ಲಿ ಮಧ್ಯ ಉಕ್ರೇನ್‌ನ ಪೋಲ್ಟವಾಗೆ ಕರೆದೊಯ್ಯಲಾಯಿತು. ಆಪರೇಷನ್ ಗಂಗಾ ಅಡಿಯಲ್ಲಿ, ಭಾರತವು ಚೆರ್ನಿಹಿವ್, ಸುಮಿ, ಖಾರ್ಕಿವ್ ಮತ್ತು ಮರಿಯುಪೋಲ್‌ನಲ್ಲಿ ಸಿಲುಕಿಕೊಂಡಿದ್ದ ತನ್ನ ನಾಗರಿಕರನ್ನು ಸ್ಥಳಾಂತರಿಸಿತು.

ಸ್ವತಃ ಪ್ರಧಾನಿ ಮೋದಿ ಅವರು ಪೋಲೆಂಡ್ ಅಧ್ಯಕ್ಷರು ಹಾಗೂ ಯುರೋಪಿಯನ್ ಒಕ್ಕೂಟದ ಅಧ್ಯಕ್ಷರೊಂದಿಗೆ ಮಾತನಾಡಿದರು. ನೆರೆಯ ದೇಶಗಳು ಯುದ್ಧಪೀಡಿತ ಪ್ರದೇಶಗಳಿಂದ ಬರುವ ಭಾರತೀಯರಿಗೆ ವೀಸಾ ಅಗತ್ಯವನ್ನು ಮನ್ನಾ ಮಾಡಿದವು. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ರಷ್ಯಾ ಮತ್ತು ಉಕ್ರೇನ್ ರಾಯಭಾರಿಗಳೊಂದಿಗೆ ಪೋಲೆಂಡ್, ಹಂಗೇರಿ, ರೊಮೇನಿಯಾ, ಮೊಲ್ಡೊವಾ ಮತ್ತು ಸ್ಲೋವಾಕಿಯಾ ಆಡಳಿತಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿರುವ ತಂಡವು ಪ್ರತಿ ಹಂತದಲ್ಲೂ ಕಾರ್ಯಾಚರಣೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಿತು. ತೆರವು ಕಾರ್ಯಾಚರಣೆಯ ಪ್ರತಿ ವರದಿಯನ್ನು ನೇರವಾಗಿ ಪ್ರಧಾನಿ ಮೋದಿ ಅವರಿಗೆ ಕಳುಹಿಸಲಾಗುತ್ತಿತ್ತು.

ಮಿಷನ್' ವಿವಿಧ ಕಾರ್ಯಾಚರಣೆಗಳ ಮೂಲಕ ತನ್ನ ನಾಗರಿಕರನ್ನು ಅಪಾಯಕಾರಿ ಸ್ಥಳಗಳಿಂದ ಹೊರತರುವ ಸಾಮರ್ಥ್ಯವನ್ನು ಭಾರತವು ಮತ್ತೆ ಮತ್ತೆ ಸಾಬೀತುಪಡಿಸಿದೆ. 'ಲೈಫ್‌ಲೈನ್ ಉಡಾನ್ ಮಿಷನ್', 'ಆಪರೇಷನ್ ಸಮುದ್ರ ಸೇತು', ಅಥವಾ 'ಆಪರೇಷನ್ ಸಂಕಟ್ ಮೋಚನ್' 2016 ರಲ್ಲಿ ದಕ್ಷಿಣ ಸುಡಾನ್‌ನಲ್ಲಿ ಪ್ರಾರಂಭವಾಯಿತು ಮತ್ತು 2015 ರಲ್ಲಿ ಯೆಮೆನ್ ಬಿಕ್ಕಟ್ಟಿನ ಸಂದರ್ಭದಲ್ಲಿ 'ಆಪರೇಷನ್ ರಾಹತ್' ನಡೆಸಲಾಯಿತು. ಹಾಗೆಯೇ, 'ಆಪರೇಷನ್ ಮೈತ್ರಿ' ಯಂತಹ ಕಾರ್ಯಾಚರಣೆಯ ಮೂಲಕ 2015 ರಲ್ಲಿ ನೇಪಾಳ ಭೂಕಂಪದ ಸಮಯದಲ್ಲಿ ಭಾರತೀಯರನ್ನು ಕರೆತಂದಿದ್ದು ಅಥವಾ ಇಂಡೋನೇಷ್ಯಾದಲ್ಲಿ ಭೂಕಂಪ - ಸುನಾಮಿ ಸಮಯದಲ್ಲಿ 'ಆಪರೇಷನ್ ಸಮುದ್ರ ಮೈತ್ರಿ' ಜಾಗತಿಕ ಪ್ರಶಂಸೆ ಗಳಿಸಿತು. ಇದು ಮಾತ್ರವಲ್ಲದೆ, ಮೊಜಾಂಬಿಕ್‌ನಲ್ಲಿ ಚಂಡಮಾರುತದ ಸಮಯದಲ್ಲಿ, ಭಾರತವು 'ಆಪರೇಷನ್ ಸಹಾಯತಾ-19' ಅನ್ನು ಪ್ರಾರಂಭಿಸಿತು ಮತ್ತು ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ, ಭಾರತವು ಮೊಜಾಂಬಿಕ್, ಶ್ರೀಲಂಕಾ,

# ಆಪರೇಷನ್ ಗಂಗಾ: ಎಚ್ಚರಿಕೆಯಿಂದ ಯೋಜಿಸಲಾದ ಸ್ಥಳಾಂತರ ಕಾರ್ಯಾಚರಣೆ

**ಮಾರ್ಚ್ 1 ರಂದು ಕೇಂದ್ರ ಸಚಿವರಾದ ಜ್ಯೋತಿರಾದಿತ್ಯ ಸಿಂಧಿಯಾ, ವಿ.ಕೆ. ಸಿಂಗ್, ಹರ್ದೀಪ್ ಸಿಂಗ್ ಪುರಿ ಮತ್ತು ಕಿರಣ್ ರಿಜಿಜು ಅವರು 'ಆಪರೇಷನ್ ಗಂಗಾ' ಮೇಲ್ವಿಚಾರಣೆಗಾಗಿ ಪೋಲೆಂಡ್, ರೊಮೇನಿಯಾ, ಸ್ಲೋವಾಕಿಯಾ, ಹಂಗೇರಿ ಮತ್ತು ಮೊಲ್ಡೊವಾವನ್ನು ತಲುಪಿದರು.**



- ಭಾರತೀಯ ವಿದೇಶಾಂಗ ಸೇವೆಯ (ಐ ಎಫ್ ಎಸ್) 30 ಯುವ ಅಧಿಕಾರಿಗಳ ಪ್ರಮುಖ ತಂಡವನ್ನು ರಚಿಸುವ ಮೂಲಕ ಹಂಗೇರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಯಿತು. 150 ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ತಾಂತ್ರಿಕ ಸಹಾಯಕರು ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸಲು ಸಂಪೂರ್ಣವಾಗಿ ತೊಡಗಿಸಿಕೊಂಡರು.
- ವಿಮಾನಯಾನ ಸಂಸ್ಥೆಗಳ ಜೊತೆಗೆ ಭಾರತೀಯ ವಾಯುಪಡೆಯ C-17 ಗ್ಲೋಬ್‌ಮಾಸ್ಟರ್ ಸೇರಿದಂತೆ ದೊಡ್ಡ ವಿಮಾನಗಳನ್ನು ಭಾರತೀಯರನ್ನು ಸ್ಥಳಾಂತರಿಸಲು ನಿಯೋಜಿಸಲಾಗಿತ್ತು. ತೊಂದರೆಗೊಳಗಾದ ಪ್ರದೇಶಗಳಿಂದ ಹಿಂದಿರುಗುವ ಪ್ರತಿಯೊಬ್ಬ ಭಾರತೀಯರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಲು ಕೇಂದ್ರ ಸಚಿವರನ್ನು ಕಳುಹಿಸಲಾಯಿತು, ಇದರಿಂದಾಗಿ ಸಂಕಷ್ಟದಲ್ಲಿದ್ದವರ ನೈತಿಕಬಲವನ್ನು ಹೆಚ್ಚಿಸಲಾಯಿತು.
- ಆಪರೇಷನ್ ಗಂಗಾಗೆ ನೆರವಾಗಲು, ನಾಲ್ಕು ತಂಡಗಳನ್ನು ರಚಿಸಲಾಯಿತು ಮತ್ತು ಅವರಿಗೆ ವಿವಿಧ ಕಾರ್ಯಗಳನ್ನು ವಹಿಸಲಾಯಿತು. ವಿವಿಧ ಮಾರ್ಗಗಳಲ್ಲಿ ಗಡಿಭಾಗಕ್ಕೆ ಆಗಮಿಸುವ ಜನರ ಮೇಲೆ ತಂಡ ನಿಗಾ ವಹಿಸಿ ನಗರಕ್ಕೆ ಕಳುಹಿಸಿತು. ಇನ್ನೊಂದು ತಂಡ ನಗರದಲ್ಲಿ ಜನರಿಗೆ ವಸತಿ ವ್ಯವಸ್ಥೆ ಮಾಡುತ್ತಿತ್ತು. ಇದಕ್ಕಾಗಿ 40 ಸ್ಥಳಗಳನ್ನು ಆಯ್ಕೆ ಮಾಡಲಾಗಿತ್ತು. ಮೂರನೇ ತಂಡ ಜನರಿಗೆ ಮೂರು ಹೊತ್ತು ಊಟದ ವ್ಯವಸ್ಥೆ ಮಾಡುತ್ತಿತ್ತು. ನಾಲ್ಕನೇ ತಂಡವನ್ನು ವಿಮಾನ ನಿಲ್ದಾಣದಲ್ಲಿ ನಿಯೋಜಿಸಲಾಗಿತ್ತು, ಇದು ಕಮಾಂಡ್ ಸೆಂಟರ್‌ಗೆ ಎಷ್ಟು ವಿಮಾನಗಳು ಲಭ್ಯವಿವೆ ಮತ್ತು ಎಷ್ಟು ಜನರನ್ನು, ಯಾವಾಗ ವಾಪಸ್ ಕಳುಹಿಸಬಹುದು ಎಂದು ತಿಳಿಸುತ್ತಿತ್ತು.
- ಭಾರತದೊಂದಿಗೆ, ಬಾಂಗ್ಲಾದೇಶ, ನೇಪಾಳ ಮತ್ತು ಟುನೀಶಿಯಾದ ನಾಗರಿಕರನ್ನು ಸಹ ಸ್ಥಳಾಂತರಿಸಲಾಯಿತು. ಬಾಂಗ್ಲಾದೇಶದ 9 ವಿದ್ಯಾರ್ಥಿಗಳನ್ನು ಮತ್ತು ನೆರೆಯ ನೇಪಾಳದ ಮೂವರು ವಿದ್ಯಾರ್ಥಿಗಳನ್ನು ಉಕ್ರೇನ್‌ನಿಂದ ಭಾರತ ರಕ್ಷಿಸಿದೆ. ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರು ಉಕ್ರೇನ್‌ನಿಂದ 9 ಬಾಂಗ್ಲಾದೇಶಿ ಪ್ರಜೆಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದ್ದಕ್ಕಾಗಿ ಪ್ರಧಾನಿ ಮೋದಿಯವರಿಗೆ ಧನ್ಯವಾದ ತಿಳಿಸಿದ್ದಾರೆ.

**'ಆಪರೇಷನ್ ಗಂಗಾ' ಅಡಿಯಲ್ಲಿ, ಸುಮಾರು 23,000 ಜನರನ್ನು ಯುದ್ಧದ ಬಿಕ್ಕಟ್ಟಿನ ನಡುವೆ ಉಕ್ರೇನ್‌ನಿಂದ ಮರಳಿ ಕರೆತರಲಾಗಿದೆ.**

**ಆಪರೇಷನ್ ಗಂಗಾ ಅಡಿಯಲ್ಲಿ 90 ವಿಮಾನಗಳ ಕಾರ್ಯಾಚರಣೆ ನಡೆಸಲಾಯಿತು. ಇದರಲ್ಲಿ 76 ನಾಗರಿಕ ವಿಮಾನಗಳು ಮತ್ತು 14 ಭಾರತೀಯ ವಾಯುಪಡೆಯ ವಿಮಾನಗಳು ಸೇರಿವೆ.**

# ಸಾವಿರ ಮಾತುಗಳನ್ನು ಹೇಳುವ ಚಿತ್ರಗಳು













ಬಾಂಗ್ಲಾದೇಶ, ಚೀನಾ, ಅಮೆರಿಕ, ಮ್ಯಾನ್ಮಾರ್, ಮಡಗಾಸ್ಕರ್, ದಕ್ಷಿಣ ಆಫ್ರಿಕಾ ಸೇರಿದಂತೆ ಅನೇಕ ದೇಶಗಳ ವಿದೇಶಿ ಪ್ರಜೆಗಳನ್ನು ರಕ್ಷಿಸಿತು.

'ಆಪರೇಷನ್‌ಗಂಗಾ' ಒಂದು ಜೀವರಕ್ಷಕ ಕಾರ್ಯಾಚರಣೆಯಾಯಿತು.

ಯುದ್ಧ ವಲಯದಲ್ಲಿ ಸಿಕ್ಕಿಬಿದ್ದವರ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಹಾರಿದಂತಿರುತ್ತದೆ. ಫೆಬ್ರವರಿ 24 ರಂದು ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಪ್ರಾರಂಭವಾದಾಗ, ಅಲ್ಲಿ ಸಿಲುಕಿರುವ 20 ಸಾವಿರ ಭಾರತೀಯ ನಾಗರಿಕರು-ವಿದ್ಯಾರ್ಥಿಗಳ ಮನಸ್ಸಿನಲ್ಲಿರುವ ಆಲೋಚನೆಗಳನ್ನು ಅವರು ವಿವಿಧ ಮಾಧ್ಯಮ ವರದಿಗಳಲ್ಲಿ ಹಂಚಿಕೊಂಡ ಅಭಿಪ್ರಾಯಗಳ ಮೂಲಕ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ರಷ್ಯಾ-ಉಕ್ರೇನ್ ನಡುವೆ ಉದ್ವಿಗ್ನತೆ ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿತ್ತು. ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ತನ್ನ



## ಕೋವಿಡ್ ಸಮಯದಲ್ಲಿ ಪ್ರಾರಂಭವಾದ ಮಿಷನ್ ವಂದೇ ಭಾರತ್ ಇದುವರೆಗಿನ ಅತಿದೊಡ್ಡ ಪರಿಹಾರ ಮಿಷನ್ ಆಗಿದೆ.

ನಾಗರಿಕರಿಗೆ ಮೊದಲ ಸಲಹೆಯನ್ನು ಫೆಬ್ರವರಿ 15 ರಂದು ಯುದ್ಧ ಪ್ರಾರಂಭವಾಗುವ ಮೊದಲು ನೀಡಿತು. ಅದರ ನಂತರ ಅವರು ಸಾಮಾನ್ಯ ಟ್ವೀಟ್‌ಗಳು ಮತ್ತು ಸಲಹೆಗಳ ಮೂಲಕ ಎಚ್ಚರಿಸಿದರು. ಫೆಬ್ರವರಿ 20 ರಂದು ನೀಡಿದ ಸಲಹೆಯಲ್ಲಿ, ಭಾರತೀಯ ನಾಗರಿಕರು ಉಕ್ರೇನ್‌ನ ರಾಜಧಾನಿ ಕೀವ್‌ನ್ನು ತಕ್ಷಣ ತೊರೆಯುವಂತೆ ಸೂಚಿಸಲಾಯಿತು. ಭಾರತ ಸರ್ಕಾರದ ಉಪಕ್ರಮದ ಪರಿಣಾಮವಾಗಿ, ಈ ಅವಧಿಯಲ್ಲಿ ಕೆಲವು ನಾಗರಿಕರು ಮನೆಗೆ ಮರಳಿದರು. ಫೆಬ್ರವರಿ














24 ರಂದು ಯುದ್ಧ ಪ್ರಾರಂಭವಾದಾಗ, ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಭೆಯನ್ನು ನಡೆಸಿದರು ಮತ್ತು ಪ್ರತಿಯೊಬ್ಬ ಭಾರತೀಯ ಪ್ರಜೆಯನ್ನು ಸುರಕ್ಷಿತವಾಗಿ ಮರಳಿ ಕರೆತರುವುದು ತಮ್ಮ ಆದ್ಯತೆ ಎಂದು ಸ್ಪಷ್ಟಪಡಿಸಿದರು. ಏತನ್ಮಧ್ಯೆ, ಭಾರತವು ತನ್ನ ನಾಗರಿಕರಿಗೆ ಸಲಹೆ ಮತ್ತು ಸಹಾಯವಾಣಿ ಸಂಖ್ಯೆಯನ್ನು ನೀಡಿತು ಮತ್ತು ಎಲ್ಲರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಎಂದು ಭರವಸೆ ನೀಡಿತು.

ಪ್ರತಿಯೊಬ್ಬ ಭಾರತೀಯನನ್ನು ಸುರಕ್ಷಿತವಾಗಿ ಮರಳಿ ಕರೆತರುವ ಗುರಿಯೊಂದಿಗೆ 'ಆಪರೇಷನ್ ಗಂಗಾ' ಮಿಷನ್ ಪ್ರಾರಂಭವಾಯಿತು. ಉನ್ನತ ಮಟ್ಟದ ಸಭೆಯಲ್ಲಿ ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಸ್ಥಳಾಂತರದ ಬಗ್ಗೆ ಪ್ರಧಾನಮಂತ್ರಿಯವರು ಒತ್ತು ನೀಡಿದರು. "ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಸುರಕ್ಷತೆ ಮತ್ತು



## ಆಪರೇಷನ್ ಗಂಗಾ ಅಡಿಯಲ್ಲಿ, 18 ದೇಶಗಳ 147 ನಾಗರಿಕರನ್ನು ಸಹ ಉಕ್ರೇನ್‌ನಿಂದ ಕರೆತರಲಾಯಿತು.

ಸ್ಥಳಾಂತರಿಸುವುದು ನಮ್ಮ ಆದ್ಯತೆಯಾಗಿದೆ. ವಿದ್ಯಾರ್ಥಿಗಳ ಸ್ಥಳಾಂತರಿಸುವಿಕೆಯನ್ನು ವೇಗಗೊಳಿಸಲು, ಉಕ್ರೇನ್‌ನ ನೆರೆಯ ದೇಶಗಳೊಂದಿಗೆ ಮತ್ತಷ್ಟು ಸಹಕಾರವನ್ನು ಹೆಚ್ಚಿಸಲಾಗುವುದು." ಎಂದು ಅವರು ಹೇಳಿದರು, ಕಷ್ಟದ ಸಮಯದಲ್ಲಿ ಭಾರತೀಯರನ್ನು ಮರಳಿ ಮನೆಗೆ ಕರೆತರುವುದು ತನ್ನ ಪ್ರಮುಖ ಆದ್ಯತೆಯಾಗಿದೆ ಎಂದು ಅವರು ಮೊದಲಿನಿಂದಲೂ ಸ್ಪಷ್ಟಪಡಿಸಿದ್ದರು. ಯುದ್ಧದ ಮೊದಲ ದಿನದಂದು, ಪ್ರಧಾನಿ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್

# ಕೋವಿಡ್ ಸಾಂಕ್ರಾಮಿಕದ ಮಧ್ಯೆ ಪ್ರೀತಿಪಾತ್ರರನ್ನು ಮರಳಿ ಕರೆತಂದ ದೊಡ್ಡ ಮಿಷನ್






- ಜಾಗತಿಕ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ, ಇಡೀ ಜಗತ್ತು ಸ್ತಬ್ಧಗೊಂಡಾಗ ಮತ್ತು ಭಾರತವು ಕಟ್ಟುನಿಟ್ಟಾದ ಲಾಕ್‌ಡೌನ್ ಅನ್ನು ಘೋಷಿಸಬೇಕಾದಾಗ, ಕೇಂದ್ರ ಸರ್ಕಾರವು ವಿದೇಶದಲ್ಲಿರುವ ಭಾರತೀಯರನ್ನು ಮರಳಿ ಕರೆತರಲು ಮಿಷನ್ ವಂದೇ ಭಾರತ್ ಅನ್ನು ಪ್ರಾರಂಭಿಸಿತು.
- 5 ಮೇ 2020 ರಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಇತರ ದೇಶಗಳಲ್ಲಿ ಸಂಕಷ್ಟದಲ್ಲಿರುವ ಭಾರತೀಯರು ಅಲ್ಲಿನ ರಾಯಭಾರಿ ಕಚೇರಿಯೊಂದಿಗೆ ಸಂಪರ್ಕದಲ್ಲಿರಲು ಕೇಳಿಕೊಂಡರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಸಂಪೂರ್ಣ ಕಾರ್ಯಯೋಜನೆ ಸಿದ್ಧಪಡಿಸಲಾಯಿತು. ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಗೃಹ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಜೊತೆಗೆ ವಿವಿಧ ರಾಜ್ಯ ಸರ್ಕಾರಗಳು ಭಾಗಿಯಾಗಿದ್ದವು. ಈ ಐತಿಹಾಸಿಕ ಮತ್ತು ಅತಿದೊಡ್ಡ ಮಿಷನ್ 7ನೇ ಮೇ 2020 ರಂದು ಪ್ರಾರಂಭವಾಯಿತು.
- ವಂದೇ ಭಾರತ್ ಮಿಷನ್ ಅಡಿಯಲ್ಲಿ ತೆರವು ಕಾರ್ಯಾಚರಣೆಯನ್ನು ವಿಮಾನಗಳ ಮೂಲಕ ಮಾಡಲಾಯಿತು ಮತ್ತು ಆಪರೇಷನ್ ಸಮುದ್ರ ಸೇತು ಅಡಿಯಲ್ಲಿ ಸಮುದ್ರದ ಮೂಲಕ ಸ್ಥಳಾಂತರ ಕಾರ್ಯ ಕೈಗೊಳ್ಳಲಾಯಿತು. ಮೊದಲ ಹಂತದಲ್ಲಿ, ಗಲ್ಫ್ ದೇಶಗಳಿಂದ ಮತ್ತು ನಂತರ 50 ಕ್ಕೂ ಹೆಚ್ಚು ದೇಶಗಳಿಂದ ಭಾರತೀಯರನ್ನು ಕರೆತರಲಾಯಿತು.

**ಭಾರತೀಯ ನೌಕಾಪಡೆಯ ಹಡಗುಗಳಾದ ಜಲಾಶ್ವ, ಐರಾವತ, ಶಾರ್ದೂಲ ಮತ್ತು ಮಗರ್ ಸಮುದ್ರ ಸೇತು ಕಾರ್ಯಾಚರಣೆಯ ಸಮಯದಲ್ಲಿ 23,000 ಕಿ.ಮೀ. ಸಂಚರಿಸಿದವು. ಈ ಮೂಲಕ 3,992 ಭಾರತೀಯ ನಾಗರಿಕರನ್ನು ಯಶಸ್ವಿಯಾಗಿ ಮರಳಿ ಕರೆತರಲಾಯಿತು.**

ವಿದೇಶದಲ್ಲಿರುವ ಭಾರತೀಯರನ್ನು ಮರಳಿ ಕರೆತರುವ ಇತಿಹಾಸದಲ್ಲಿ ಇದು ಅತಿದೊಡ್ಡ ಕಾರ್ಯಾಚರಣೆಯಾಗಿದೆ, ಇದು ಇಂದಿಗೂ ಮುಂದುವರಿದಿದೆ. ಇದೀಗ ಅದರ 16ನೇ ಹಂತ ನಡೆಯುತ್ತಿದೆ. ಇದರ ಅಡಿಯಲ್ಲಿ ಮಾರ್ಚ್ 8, 2022 ರವರೆಗೆ, 2 ಲಕ್ಷ 92 ಸಾವಿರ ವಿಮಾನ ಸಂಚಾರಗಳ ಮೂಲಕ 2 ಕೋಟಿ 95 ಲಕ್ಷ ಭಾರತೀಯರನ್ನು ಇತರ ದೇಶಗಳಿಂದ ಮರಳಿ ಕರೆತರಲಾಗಿದೆ.

ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಭಾರತೀಯರ ಸುರಕ್ಷಿತ ವಾಪಸಾತಿಗೆ ಕಾರಣರಾದರು. ಕೇಂದ್ರ ಸರ್ಕಾರದ ಪ್ರಯತ್ನದ ಫಲವಾಗಿ ಫೆಬ್ರವರಿ 26 ರಂದು ಏರ್ ಇಂಡಿಯಾ ಈ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. 219 ಜನರಿದ್ದ ವಿಮಾನ ಮುಂಬೈ ತಲುಪಿತು.

ಉಕ್ರೇನ್‌ನ ವಾಯುಪ್ರದೇಶವನ್ನು ಮುಚ್ಚಿದ್ದು ಕಾರ್ಯಾಚರಣೆಗೆ ದೊಡ್ಡ ತೊಂದರೆಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ, ಭಾರತವು ಉಕ್ರೇನ್‌ನ ನೆರೆಯ ದೇಶಗಳಾದ ರೊಮೇನಿಯಾ, ಹಂಗೇರಿ, ಪೋಲೆಂಡ್ ಮತ್ತು ಸ್ಲೋವಾಕ್ ರಿಪಬ್ಲಿಕ್ ಮೂಲಕ ತನ್ನ ನಾಗರಿಕರನ್ನು ಮರಳಿ ಕರೆತರಲು ವ್ಯವಸ್ಥೆ ಮಾಡಿತು. ತೆರವು ಪ್ರಕ್ರಿಯೆಯನ್ನು ಸುಲಭಗೊಳಿಸುವ ಉದ್ದೇಶದಿಂದ ನಾಲ್ವರು ಕೇಂದ್ರ ಸಚಿವರಾದ ಹರ್ದೀಪ್ ಸಿಂಗ್ ಪುರಿ, ಜ್ಯೋತಿರಾದಿತ್ಯ ಸಿಂಧಿಯಾ, ಕಿರಣ್ ರಿಜಿಜು ಮತ್ತು ಜನರಲ್ ವಿ.ಕೆ. ಸಿಂಗ್ ಈ ದೇಶಗಳಿಗೆ ತೆರಳಿದರು.



## ಮಾನವೀಯ ನೆರವಿನ ಅಡಿಯಲ್ಲಿ, ಭಾರತವು ಉಕ್ರೇನ್ ಮತ್ತು ಅದರ ನೆರೆಯ ದೇಶಗಳಿಗೆ 90 ಟನ್‌ಗಳಷ್ಟು ಪರಿಹಾರ ಸಾಮಗ್ರಿ ಮತ್ತು ಔಷಧವನ್ನು ಒದಗಿಸಿದೆ

24 ಗಂಟೆಗಳ ಸಹಾಯವಾಣಿಯನ್ನು ಸ್ಥಾಪಿಸಲಾಯಿತು ಮತ್ತು ಹಲವಾರು ಶಿಬಿರಗಳನ್ನು ಸಹ ಸ್ಥಾಪಿಸಲಾಯಿತು. ಅಲ್ಲದೆ, ಭಾರತವು ರಷ್ಯಾ ಮತ್ತು ಉಕ್ರೇನಿಯನ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿತ್ತು, ಇದರಿಂದಾಗಿ ಭಾರತೀಯ ನಾಗರಿಕರನ್ನು ಸ್ಥಳಾಂತರಿಸುವ ಪ್ರಕ್ರಿಯೆಯು ತಡೆರಹಿತವಾಯಿತು. ಯುದ್ಧ ಪೀಡಿತ ಉಕ್ರೇನ್‌ನಲ್ಲಿ ಭಾರತದ ಸಚಿವರು ಮತ್ತು ಅಧಿಕಾರಿಗಳ ಸಕ್ರಿಯ ಮತ್ತು ಪ್ರಾಮಾಣಿಕ ಪ್ರಯತ್ನಗಳು ಅಮೆರಿಕಾ, ಚೀನಾ, ಗ್ರೇಟ್ ಬ್ರಿಟನ್, ಜರ್ಮನಿ ಮತ್ತು ಇತರ ಹಲವು ದೇಶಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿತ್ತು.

ಭಾರತವು ತನ್ನ ಜನರನ್ನು ಸ್ಥಳಾಂತರಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿತು ಮತ್ತು ಸ್ವತಃ ಪ್ರಧಾನಮಂತ್ರಿಯವರು ಅದನ್ನು ಮೇಲ್ವಿಚಾರಣೆ ಮಾಡುತ್ತಾ, ಸ್ಥಳಾಂತರ ಪ್ರಕ್ರಿಯೆಯಲ್ಲಿ ಸಹಾಯ ಮಾಡುವ ಆಯಾ ರಾಷ್ಟ್ರಗಳ ಮುಖ್ಯಸ್ಥರನ್ನು ಸಂಪರ್ಕಿಸಿದರು. ಈ ದೇಶಗಳಿಂದ ಭಾರತವು ಬಲವಾದ ಬೆಂಬಲವನ್ನು ಪಡೆಯಿತು, ಇದು ಕಳೆದ ಕೆಲವು ವರ್ಷಗಳಲ್ಲಿ ಭಾರತದ ಹೆಚ್ಚುತ್ತಿರುವ ರಾಜತಾಂತ್ರಿಕ ಪ್ರಭಾವವನ್ನು ಸೂಚಿಸುತ್ತದೆ. ಪ್ರಧಾನಿ ಮೋದಿ ಅವರು ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ರಕ್ಷಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡರು. ಈ ಮಧ್ಯೆ ಅವರು ಆಧ್ಯಾತ್ಮಿಕ ನಾಯಕರು ಮತ್ತು ಸಮುದಾಯದ ಮುಖಂಡರೊಂದಿಗೆ ಮಾತನಾಡಿದರು. ಅವರು ಉನ್ನತ ಮಟ್ಟದ ಸಭೆಗಳನ್ನು ನಡೆಸುವುದು ಮಾತ್ರವಲ್ಲದೆ ಸರ್ಕಾರಿ ಅಧಿಕಾರಿಗಳು, ಭಾರತೀಯ ಸಮುದಾಯ, ವಿದೇಶಿ ಸಂಸ್ಥೆಗಳು ಮತ್ತು ಆಧ್ಯಾತ್ಮಿಕ ನಾಯಕರೊಂದಿಗೆ ಮಾತನಾಡುವ ಮೂಲಕ ಭಾರತೀಯರನ್ನು ಮರಳಿ ಕರೆತರುವ ಉದ್ದೇಶವನ್ನು ಯಶಸ್ವಿಯಾಗಿ ಸಾಧಿಸಿದರು.

ಪ್ರಧಾನಿ ನರೇಂದ್ರ ಮೋದಿ ಮಾರ್ಚ್ 1 ರಂದು 'ಆಪರೇಷನ್ ಗಂಗಾ' ಭಾಗವಾಗಿ ಉಕ್ರೇನ್‌ನಿಂದ ಭಾರತೀಯರನ್ನು ಸ್ಥಳಾಂತರಿಸುವ ಪ್ರಯತ್ನಗಳನ್ನು ಹೆಚ್ಚಿಸಲು ವಾಯುಪಡೆಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರು. ವಾಯುಪಡೆಯ ಸಾಮರ್ಥ್ಯಗಳನ್ನು ಸದುಪಯೋಗಪಡಿಸಿಕೊಳ್ಳುವುದರಿಂದ ಕಡಿಮೆ ಸಮಯದಲ್ಲಿ ಗರಿಷ್ಠ ಸಂಖ್ಯೆಯ ಜನರನ್ನು ಸ್ಥಳಾಂತರಿಸಬಹುದು. ಮಾನವೀಯ ನೆರವನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವಲ್ಲಿ ಇದು ಪ್ರಮುಖ ಹೆಜ್ಜೆಯಾಯಿತು.

ಭಾರತೀಯ ವಾಯುಪಡೆಯ C-17 ಗ್ಲೋಬ್‌ಮಾಸ್ಟರ್ ಮಾರ್ಚ್ 2 ರಂದು ಬೆಳಗ್ಗೆ ದೆಹಲಿಯಿಂದ ರೊಮೇನಿಯಾಗೆ ಹಾರಿತು. ಆಪರೇಷನ್ ಗಂಗಾ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ, "ಆಪರೇಷನ್ ಗಂಗಾ ಅಡಿಯಲ್ಲಿ ಭಾರತವು ತನ್ನ ನಾಗರಿಕರನ್ನು ಯುದ್ಧ ವಲಯದಿಂದ ಹೇಗೆ ಸುರಕ್ಷಿತವಾಗಿ ಹೊರತರುತ್ತಿದೆ ಎಂಬುದನ್ನು ನೀವು ನೋಡಿದ್ದೀರಿ. ಅನೇಕ ದೊಡ್ಡ ದೇಶಗಳು ಹಾಗೆ ಮಾಡುವಲ್ಲಿ ತೊಂದರೆಗಳನ್ನು ಎದುರಿಸುತ್ತಿವೆ. ಆದರೆ ಭಾರತದ ಹೆಚ್ಚುತ್ತಿರುವ ಪ್ರಭಾವದಿಂದಾಗಿ ನಾವು ಸಾವಿರಾರು ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಮರಳಿ ಕರೆತಂದಿದ್ದೇವೆ." ಎಂದು ಹೇಳಿದರು.

**ಸರ್ಕಾರವು ಪ್ರತಿಯೊಂದು ಹಂತದಲ್ಲೂ ಸಂವೇದನಾಶೀಲವಾಗಿತ್ತು**

ಯುದ್ಧ ಪೀಡಿತ ಪ್ರದೇಶದಿಂದ ಹಿಂದಿರುಗುವ ನಾಗರಿಕರ ಮನಸ್ಸು ಮತ್ತು ಹೃದಯದಲ್ಲಿ ಆತ್ಮವಿಶ್ವಾಸದ ಭಾವವನ್ನು ತುಂಬುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಗಳಿಗೆ ತನ್ನ ಸಚಿವರನ್ನು ಕಳುಹಿಸಿತು. ಛಾಯಾಚಿತ್ರಗಳು ಮತ್ತು ಮಾಧ್ಯಮಗಳಲ್ಲಿನ ಅವರ ಕಾಮೆಂಟ್‌ಗಳಿಂದ ಇದು ವಿದ್ಯಾರ್ಥಿಗಳಿಗೆ ನೈತಿಕ ಬೂಸ್ಟರ್ ಎಂದು ಸಾಬೀತಾಯಿತು. ವಿದ್ಯಾರ್ಥಿಗಳು ವಂದೇ ಮಾತರಂ ಘೋಷಣೆಗಳನ್ನು ಕೂಗಿದಾಗ ಸಂಭ್ರಮ ಮುಗಿಲುಮುಟ್ಟಿತ್ತು.



ಭಾರತ ಸರ್ಕಾರವು ಅವರಿಗೆ ಸಹಾಯ ಹಸ್ತವನ್ನು ಚಾಚಿತು ಮತ್ತು ಭಾರತ ಸರ್ಕಾರವು ಪ್ರತಿ ಬಿಕ್ಕಟ್ಟಿನಲ್ಲೂ ತನ್ನ ನಾಗರಿಕರೊಂದಿಗೆ ನಿಂತಿದೆ ಎಂಬ ಸ್ಪಷ್ಟ ಸಂದೇಶವನ್ನು ನೀಡಿತು. ಪ್ರಧಾನಿ ಮೋದಿ ಅವರೊಂದಿಗಿನ ಸಂವಾದದಲ್ಲಿ ಸ್ಥಳಾಂತರಿಸಲ್ಪಟ್ಟ ಅನೇಕ ವಿದ್ಯಾರ್ಥಿಗಳು ತಾವು ಮತ್ತು ತಮ್ಮ ಕುಟುಂಬ ಸದಸ್ಯರು ಭಾರತದ ಪ್ರಜೆಗಳಾಗಿರುವುದರಿಂದ ಮತ್ತು ಪ್ರಸ್ತುತ ನಾಯಕತ್ವವು ಸಮರ್ಥರ ಕೈಯಲ್ಲಿರುವುದರಿಂದ ಸುರಕ್ಷಿತವಾಗಿ ಹಿಂತಿರುಗುವುದಾಗಿ ಅವರಿಗೆ ಖಚಿತವಾಗಿ ಭರವಸೆ ನೀಡಿದರು. ಪ್ರತ್ಯೇಕ ಟ್ವಿಟರ್ ಹ್ಯಾಂಡಲ್ ಆರಂಭಿಸುವುದು, ಮನೆಗೆ ಹಿಂದಿರುಗಿದ ವಿದ್ಯಾರ್ಥಿಗಳ ಕುಟುಂಬಗಳನ್ನು ಭೇಟಿ ಮಾಡಲು ಸ್ಥಳೀಯ ಆಡಳಿತ ಅಧಿಕಾರಿಗಳನ್ನು ಕಳುಹಿಸುವುದು, ಪ್ರಯಾಣಕ್ಕೆ ಕೋವಿಡ್ ಪರೀಕ್ಷೆ ಮತ್ತು ಲಸಿಕೆ ಪ್ರಮಾಣಪತ್ರದಿಂದ ವಿನಾಯಿತಿ ಮತ್ತು ವಿಮಾನ ನಿಲ್ದಾಣದಿಂದ ಅವರ ಊರುಗಳಿಗೆ ಮುಂದಿನ ಪ್ರಯಾಣಕ್ಕೆ ಅನುಕೂಲವಾಗುವಂತೆ ರೈಲ್ವೆಯಿಂದ ವಿಶೇಷ ನೆರವು ಸೇರಿದಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಯಿತು.. ಉಕ್ರೇನ್ ಬಿಕ್ಕಟ್ಟಿನಿಂದಾಗಿ ರಷ್ಯಾದಲ್ಲಿ ಯುಎಸ್ ಪಾವತಿ ಕಂಪನಿಗಳ ಕಾರ್ಯಾಚರಣೆಗಳು ಬಳಲುತ್ತಿದ್ದವು. ಆದಾಗ್ಯೂ ಭಾರತವು ತನ್ನ ದೃಢವಾದ ಪಾವತಿ ವ್ಯವಸ್ಥೆಗಾಗಿ ಸಂಪೂರ್ಣ ಪ್ರಶಂಸೆಯನ್ನು ಗಳಿಸಿತು ಮತ್ತು ಉಕ್ರೇನ್ ಮೇಲಿನ ದಾಳಿಯನ್ನು ವಿರೋಧಿಸಿ ರಷ್ಯಾದ ಮೇಲೆ ಹೇರಲಾಗುತ್ತಿರುವ ನಿರ್ಬಂಧಗಳಿಂದಾಗಿ

## 46 ಭಾರತೀಯ ನರ್ಸ್‌ಗಳನ್ನು ಇರಾಕ್‌ನಿಂದ ಮರಳಿ ಕರೆತಂದಾಗ

**ಜೂನ್ 2014**

ಇರಾಕ್‌ನಲ್ಲಿ ಐಸಿಸ್ ದಾಳಿಯ ಸಂದರ್ಭದಲ್ಲಿ 46 ಭಾರತೀಯ ನರ್ಸ್‌ಗಳನ್ನು ಭಯೋತ್ಪಾದಕರು ಟಿಕ್ರಿತ್‌ನ ಆಸ್ಪತ್ರೆಯಲ್ಲಿ ಒತ್ತೆಯಾಳಾಗಿ ಇರಿಸಿಕೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಭೆ ನಡೆಸಿದರು. ಆಗಿನ ವಿದೇಶಾಂಗ ವ್ಯವಹಾರಗಳ ಸಚಿವೆ ಸುಷ್ಮಾ ಸ್ವರಾಜ್ ದಾದಿಯರ ಬಿಡುಗಡೆಗೆ ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಹುಡುಕಿದರು. ಜೂನ್ 25 ರಂದು ಎನ್ಎಸ್ಎ ಅಜಿತ್ ದೋವಲ್ ಸ್ವತಃ ಇರಾಕ್ ತಲುಪಿದರು. ಕೊನೆಗೆ ಬಸ್ ವ್ಯವಸ್ಥೆ ಮಾಡಿ ನರ್ಸ್ ಗಳನ್ನು ಇರ್ಬಿಲ್ ನಗರಕ್ಕೆ ಕರೆತರಲಾಯಿತು. ಈ ನರ್ಸ್‌ಗಳು ಜುಲೈ 5 ರಂದು ದೆಹಲಿ ತಲುಪಿದರು. ಸಂಕಷ್ಟದಲ್ಲಿದ್ದ ಕೇರಳದ ಅನೇಕ ಜನರನ್ನು ಸಹ ಯುದ್ಧ ಪೀಡಿತ ಇರಾಕ್‌ನಿಂದ ಸ್ಥಳಾಂತರಿಸಲಾಯಿತು.

## ಆಪರೇಷನ್ ಸಂಕಟಮೋಚನ ದಕ್ಷಿಣ ಸುಡಾನ್‌ನಿಂದ 156 ಜನರನ್ನು ಕರೆತಂದಿತು

**ಜುಲೈ 2016**

2016 ರಲ್ಲಿ, ಹಿಂಸಾಚಾರ ಸ್ಫೋಟಗೊಂಡಾಗ ಸುಮಾರು 600 ಭಾರತೀಯರು ದಕ್ಷಿಣ ಸುಡಾನ್‌ನಲ್ಲಿ ಸಿಲುಕಿಕೊಂಡಿದ್ದರು. ಅವರನ್ನು ಸ್ಥಳಾಂತರಿಸಲು ಭಾರತ ಸರ್ಕಾರವು ಆಪರೇಷನ್ ಸಂಕಟಮೋಚನ ಪ್ರಾರಂಭಿಸಿತು. ಆಗಿನ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ.ಕೆ.ಸಿಂಗ್ ಅವರು ಸಿ-17 ಗ್ಲೋಬ್‌ಮಾಸ್ಟರ್‌ನೊಂದಿಗೆ ರಾಜಧಾನಿ ಜುಬಾವನ್ನು ತಲುಪಿದರು. ಈ ಕಾರ್ಯಾಚರಣೆಯಲ್ಲಿ 156 ಜನರನ್ನು ವಿಮಾನದಲ್ಲಿ ಕರೆತರಲಾಯಿತು. ಅವರಲ್ಲಿ ಇಬ್ಬರು ನೇಪಾಳ ಪ್ರಜೆಗಳು ಇದ್ದರು. ಕೆಲವು ಜನರು ಭಾರತ ಸಲಹೆಯನ್ನು ನೀಡಿದ ತಕ್ಷಣ ಹಿಂತಿರುಗಿದ್ದರು, ಆದರೆ 300 ಜನರು ವ್ಯಾಪಾರ ಉದ್ದೇಶದಿಂದ ಅಲ್ಲಿಯೇ ಉಳಿದಿದ್ದರು.

## ಆಪರೇಷನ್ ದೇವಿ ಶಕ್ತಿ

### ಅಫ್ಘಾನಿಸ್ತಾನದ ಬಿಕ್ಕಟ್ಟಿನ ಮಧ್ಯೆ ತವರಿಗೆ ತಲುಪಿದ ಭಾರತೀಯರು



- ಕಳೆದ ವರ್ಷ, ಆಫ್ಘನ್ ಬಿಕ್ಕಟ್ಟಿನ ನಡುವೆ, ತಾಲಿಬಾನ್ ಅಧಿಕಾರವನ್ನು ವಶಪಡಿಸಿಕೊಂಡಾಗ, ಸಂಪೂರ್ಣ ಕೋಲಾಹಲಮಯವಾಗಿದ್ದ ಕಾಬೂಲ್ ವಿಮಾನ ನಿಲ್ದಾಣದ ದೃಶ್ಯಗಳನ್ನು ಇಡೀ ಜಗತ್ತು ನೋಡಿದೆ. ಅಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ, ಅಲ್ಲಿ ಸಿಲುಕಿದ್ದ ಭಾರತೀಯರನ್ನು ಮರಳಿ ಕರೆತರಲು ಆಪರೇಷನ್ ದೇವಿ ಶಕ್ತಿಯನ್ನು ಪ್ರಾರಂಭಿಸಲಾಯಿತು.
- ಆಗಸ್ಟ್ 17 ರಂದು, ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಭೆ ನಡೆಸಿದರು ಮತ್ತು ಎಲ್ಲಾ ಭಾರತೀಯರನ್ನು ಮರಳಿ ಕರೆತರುವಂತೆ ಸೂಚಿಸಿದರು, ಆಶ್ರಯ ಕೇಳಿದ ಹಿಂದೂಗಳನ್ನು ಮತ್ತು ಸಿಖ್ಖರನ್ನು ಸಹ ಅಫ್ಘಾನಿಸ್ತಾನದಿಂದ ಸ್ಥಳಾಂತರಿಸಲಾಯಿತು. 40 ವಿಮಾನಗಳ ಸಹಾಯದಿಂದ ಕಾರ್ಯಾಚರಣೆ ಆರಂಭಿಸಲಾಯಿತು.
- ಇದರ ಅಡಿಯಲ್ಲಿ ಒಟ್ಟು 669 ಜನರನ್ನು ಭಾರತಕ್ಕೆ ಕರೆತರಲಾಯಿತು. ಇವರಲ್ಲಿ 448 ಭಾರತೀಯರು ಮತ್ತು 206 ಆಫ್ಘನ್ ಪ್ರಜೆಗಳು ಸೇರಿದ್ದರು. ಆಗಸ್ಟ್ ಆರಂಭದಲ್ಲಿ 438 ಭಾರತೀಯರು ಸೇರಿದಂತೆ 565 ಜನರನ್ನು ಭಾರತಕ್ಕೆ ಕರೆತರಲಾಯಿತು. ಇವರಲ್ಲಿ ಹಲವರನ್ನು ಮೊದಲು ಕಾಬೂಲ್‌ನಿಂದ ತಜಕಿಸ್ತಾನದ ರಾಜಧಾನಿ ದುಶಾಂಬೆಗೆ ಕರೆದೊಯ್ಯಲಾಯಿತು. ಇದಾದ ನಂತರ ಏರ್ ಇಂಡಿಯಾ ಮತ್ತು ಏರ್ ಫೋರ್ಸ್ C-17 ಗ್ಲೋಬ್ ಮಾಸ್ಟರ್ ಅವರನ್ನು ಭಾರತಕ್ಕೆ ಕರೆತಂದವು.

ಗೂಗಲ್ ಪೇ, ಆಪಲ್ ಪೇ ಕೆಲಸ ಮಾಡುವುದನ್ನು ನಿಲ್ಲಿಸಿದಾಗಲೂ ಟ್ವಿಟರ್‌ನಲ್ಲಿ ರುಪೇ ಟ್ರೆಂಡಿಂಗ್ ಕಂಡುಬಂದಿತು.

### ಕೋವಿಡ್ ಸಮಯದಲ್ಲಿ ಭಾರತದ ಸ್ಥಳಾಂತರ ಪ್ರಯತ್ನಗಳು ಶ್ಲಾಘನೀಯ

ಮಾರ್ಚ್ 2020 ರಲ್ಲಿ ಕೋವಿಡ್ ಸಾಂಕ್ರಾಮಿಕವು ಜಗತ್ತನ್ನು ಅಪ್ಪಳಿಸಿದಾಗ, ಭಾರತ ಸರ್ಕಾರವು ತನ್ನ ನಾಗರಿಕರನ್ನು ಇತರ ದೇಶಗಳಿಂದ ಮರಳಿ ಕರೆತರಲು ಯಾವುದೇ ಅವಕಾಶವನ್ನೂ ಬಿಡಲಿಲ್ಲ. ವಿದೇಶಿ ಪ್ರಜೆಗಳು ತಮ್ಮ ದೇಶಗಳಿಗೆ ಮರಳಲು ಸಹಾಯ ಮಾಡುವಲ್ಲಿ ಅದರ ಪಾತ್ರವು ಜಾಗತಿಕ ಪ್ರಶಂಸೆಯನ್ನು ಪಡೆಯಿತು. ಅನೇಕ ದೇಶಗಳಲ್ಲಿ ಲಾಕ್‌ಡೌನ್ ಹೇರಿದಾಗ, ಭಾರತವು ತನ್ನ ಲಕ್ಷಾಂತರ ನಾಗರಿಕರನ್ನು ಸ್ಥಳಾಂತರಿಸಲು ಸಹಾಯ ಮಾಡಲು ಯಶಸ್ವಿ 'ವಂದೇ ಭಾರತ್ ಮಿಷನ್' ನಡೆಸಿತು. 19 ಸೆಪ್ಟೆಂಬರ್ 2021 ರವರೆಗೆ ಲಭ್ಯವಿರುವ ಮಾಹಿತಿಯ ಪ್ರಕಾರ 44 ಲಕ್ಷಕ್ಕೂ ಹೆಚ್ಚು ಭಾರತೀಯರನ್ನು 34 ಸಾವಿರಕ್ಕೂ ಹೆಚ್ಚು ವಿಮಾನಗಳ ಮೂಲಕ ದೇಶಕ್ಕೆ ಕರೆತರಲಾಯಿತು. ಈ ಕಾರ್ಯಾಚರಣೆಯ ಮೂಲಕ, ಚೀನಾ, ಇರಾನ್, ಇಟಲಿ ಮತ್ತು ಜಪಾನ್‌ನಂತಹ ದೇಶಗಳಿಂದ ಭಾರತೀಯರನ್ನು ಮಾತ್ರವಲ್ಲದೇ, 10 ಕ್ಕೂ ಹೆಚ್ಚು ದೇಶಗಳ ನಾಗರಿಕರನ್ನು ಸಹ ಭಾರತವು ಸ್ಥಳಾಂತರಿಸಿತು. ಕೋವಿಡ್ ಸಮಯದಲ್ಲಿ, ಅದು 150 ಕ್ಕೂ ಹೆಚ್ಚು ದೇಶಗಳಿಗೆ ಅಗತ್ಯ ಔಷಧಿಗಳನ್ನು ಕಳುಹಿಸಿದ್ದಾಗಲಿ ಅಥವಾ ಪ್ರಪಂಚದ ಇತರ ದೇಶಗಳಿಗೆ ಕೊರೋನಾ ಲಸಿಕೆಗಳನ್ನು ಒದಗಿಸುತ್ತಿರುವುದಾಗಲೀ, ಭಾರತ ಯಾವಾಗಲೂ ಮಾದರಿಯಾಗಿದೆ. ಇದೇ ಕಾರಣಕ್ಕೆ ಬ್ರೆಜಿಲ್ ಅಧ್ಯಕ್ಷರು ಭಾರತವನ್ನು ಹನುಮಾನ್ ಎಂದು ಕರೆದರೆ, ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಕೂಡ ಭಾರತವನ್ನು ಪ್ರಶಂಸಿಸಿವೆ.

ಮಾರ್ಚ್ 2015

# ಯೆಮನ್‌ನಲ್ಲಿ ಆಪರೇಷನ್ ರಾಹತ್

## ಪ್ರಧಾನಿ ನರೇಂದ್ರ ಮೋದಿಯವರ ಒಂದು ಕರೆ ಭಾರತೀಯರ ಮರಳುವಿಕೆಗೆ ದಾರಿ ಮಾಡಿಕೊಟ್ಟಾಗ



- 18 ವಿಶೇಷ ವಿಮಾನಗಳು ಮತ್ತು C-17 ಗ್ಲೋಬ್‌ಮಾಸ್ಟರ್ ಮೂಲಕ 2900 ಜನರನ್ನು ಸನಾ ವಿಮಾನ ನಿಲ್ದಾಣದಿಂದ ಕರೆತರಲಾಯಿತು. ಭಾರತೀಯ ನೌಕಾಪಡೆಯು ಅಡೆನ್ ಬಂದರಿನಿಂದ 1670 ಜನರನ್ನು, ಇತರ ಸ್ಥಳಗಳಿಂದ 349 ಜನರನ್ನು ಸ್ಥಳಾಂತರಿಸಲಾಯಿತು.
- ಈ ಕಾರ್ಯಾಚರಣೆಯಲ್ಲಿ ಒಟ್ಟು 5600 ಜನರನ್ನು ರಕ್ಷಿಸಲಾಯಿತು. ಇವರಲ್ಲಿ 41 ದೇಶಗಳ 960 ನಾಗರಿಕರು ಮತ್ತು 4640 ಭಾರತೀಯರು ಸೇರಿದ್ದಾರೆ.

ಮಾರ್ಚ್ 2015 ರಲ್ಲಿ, ಸೌದಿ ಅರೇಬಿಯಾ ಮತ್ತು ಅದರ ಮಿತ್ರರಾಷ್ಟ್ರಗಳು ಯೆಮೆನ್‌ನಲ್ಲಿ ಮಿಲಿಟರಿ ಕಾರ್ಯಾಚರಣೆ ಪ್ರಾರಂಭಿಸಿದವು. ಈ ಸಮಯದಲ್ಲಿ, ಭಾರತೀಯ ಸಶಸ್ತ್ರ ಪಡೆಗಳು 4 ಸಾವಿರಕ್ಕೂ ಹೆಚ್ಚು ಭಾರತೀಯರನ್ನು ಮತ್ತು ಸಿಲುಕಿರುವ ಅನೇಕ ವಿದೇಶಿ ಪ್ರಜೆಗಳನ್ನು ಸ್ಥಳಾಂತರಿಸಲು ಇಲ್ಲಿ ಆಪರೇಷನ್ ರಾಹತ್ ಅನ್ನು ಪ್ರಾರಂಭಿಸಿದವು. ಉನ್ನತ ಮಟ್ಟದ ಸಭೆಯ ನಂತರ, ಪ್ರಧಾನಿ ಮೋದಿ ಅವರ ಸೂಚನೆಯ ಮೇರೆಗೆ ಅಂದಿನ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಮತ್ತು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಜನರಲ್ ವಿ.ಕೆ. ಸಿಂಗ್ ರಕ್ಷಣಾ ಕಾರ್ಯಾಚರಣೆಯ ಉಸ್ತುವಾರಿ ವಹಿಸಿಕೊಂಡರು.
ತೆರೆಯ ಹಿಂದೆ, ಆಸಿಯಾನ್ ಶೃಂಗಸಭೆಯಲ್ಲಿ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರೇ ಕಾರ್ಯಾಚರಣೆಯ ಕ್ಷಣಗಳನ್ನು ವಿವರಿಸಿದರು. ತಾನು ಪ್ರಧಾನಿ ಮೋದಿಯವರ ಬಳಿಗೆ ಹೋಗಿ ಸೌದಿ ರಾಜನೊಂದಿಗಿನ ತಮ್ಮ ಸೌಹಾರ್ದಯುತ ಸಂಬಂಧವು ಸಹಾಯಕವಾಗಬಹುದು ಎಂದು ಅವರಿಗೆ ಸೂಚಿಸಿದೆ ಎಂದು ಅವರು ಹೇಳಿದರು. ಪ್ರಧಾನಿಯವರು ಶಾ ಅವರಿಗೆ ಕರೆಮಾಡಿ ಬಾಂಬ್ ದಾಳಿಯನ್ನು ಒಂದು ವಾರ ನಿಲ್ಲಿಸುವ ಮೂಲಕ ಭಾರತೀಯರನ್ನು ಸ್ಥಳಾಂತರಿಸಲು ಸಹಾಯ ಮಾಡುವಂತೆ ಮನವಿ ಮಾಡಿದರು. ಆದರೆ ಅವರು ಒಂದು ವಾರದವರೆಗೆ ಪ್ರತಿದಿನ ಬೆಳಗ್ಗೆ 9 ರಿಂದ 11 ಗಂಟೆಯವರೆಗೆ ಬಾಂಬ್ ಸ್ಫೋಟವನ್ನು ನಿಲ್ಲಿಸಲು ಒಪ್ಪಿಕೊಂಡರು. ಇದರ ನಂತರ, ಯೆಮೆನ್ ಸರ್ಕಾರವನ್ನು ಸಂಪರ್ಕಿಸಲಾಯಿತು. ನಾಗರಿಕರನ್ನು ಜಿಬೌಟಿಗೆ ಒಂದು ವಾರದವರೆಗೆ ಪ್ರತಿದಿನ 2 ಗಂಟೆಗಳ ಕಾಲ ತ್ವರಿತವಾಗಿ ಸಾಗಿಸಲು ಅಡೆನ್ ಬಂದರು ಮತ್ತು ಸನಾ ವಿಮಾನ ನಿಲ್ದಾಣವನ್ನು ತೆರೆಯುವಂತೆ ವಿನಂತಿಸಲಾಯಿತು.

### ಭಾರತವು ಜವಾಬ್ದಾರಿಯುತ ರಾಷ್ಟ್ರವಾಗಿದೆ

ಬಲವಾದ ಕೇಂದ್ರ ನಾಯಕತ್ವದ ಪ್ರಯತ್ನಗಳಿಂದಾಗಿ ಇಂದು ಭಾರತವು ಪರಿಗಣಿಸುವ ಶಕ್ತಿಯಾಗಿ ಮಾರ್ಪಟ್ಟಿದೆ. ಕಳೆದ ಕೆಲವು ವರ್ಷಗಳಲ್ಲಿ, ಭಾರತವು ತನ್ನ ನಾಗರಿಕರನ್ನು ಪ್ರಪಂಚದ ಯಾವುದೇ ಭಾಗದಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದರೂ ಸ್ಥಳಾಂತರಿಸಿದೆ. 2015 ರಲ್ಲಿ, ಯುದ್ಧ ಪೀಡಿತ ಯೆಮೆನ್‌ನಿಂದ ಭಾರತೀಯರನ್ನು ಸ್ಥಳಾಂತರಿಸಲು ಮಾರ್ಚ್-ಏಪ್ರಿಲ್ 2015 ರಲ್ಲಿ 'ಆಪರೇಷನ್ ರಾಹತ್' ನಡೆಸಲಾಯಿತು. ಇದರ ಅಡಿಯಲ್ಲಿ, ಭಾರತ ಸರ್ಕಾರವು 6710 ಜನರನ್ನು ಸ್ಥಳಾಂತರಿಸಿತು, ಅದರಲ್ಲಿ 4748 ಭಾರತೀಯರು ಮತ್ತು 1962 ವಿದೇಶಿ ಪ್ರಜೆಗಳು. ಆ ಸಮಯದಲ್ಲಿ, ಯೆಮನ್‌ನ ಹದಗೆಡುತ್ತಿರುವ ಆಂತರಿಕ ಪರಿಸ್ಥಿತಿಯ ದೃಷ್ಟಿಯಿಂದ, ಮಾರ್ಚ್ 19 ಮತ್ತು 25 ರಂದು ಯೆಮೆನ್ ತೊರೆಯುವಂತೆ ಸಲಹೆಗಳನ್ನು ನೀಡಲಾಯಿತು. ಪರಿಸ್ಥಿತಿ ಹದಗೆಟ್ಟ ನಂತರ, ಭಾರತವು ತನ್ನ ನಾಗರಿಕರನ್ನು ರಕ್ಷಿಸಲು ಕಾರ್ಯತಂತ್ರವನ್ನು ರೂಪಿಸಿತು ಮತ್ತು ಪ್ರಧಾನಿ ಮೋದಿ ಅವರು ಸೌದಿ ಅರೇಬಿಯಾ ರಾಜನ ಜೊತೆ ಮಾತುಕತೆ ನಡೆಸಿದರು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ನಿರ್ಣಾಯಕ ಪಾತ್ರವನ್ನು ವಹಿಸಿತು ಮತ್ತು ಸಹಾಯವಾಣಿ ಸಂಖ್ಯೆಯನ್ನು ಸ್ಥಾಪಿಸಿತು. ಸಂಕಷ್ಟದಲ್ಲಿದ್ದ ನಾಗರಿಕರಿಗೆ ಇತರ ಸಹಾಯವನ್ನು ನೀಡಿತು. ವಾಯುಪಡೆ, ಹಡಗುಗಳು ಮತ್ತು ವಾಣಿಜ್ಯ ವಿಮಾನಗಳು ಸಹ ಈ ಕಾರ್ಯಾಚರಣೆಯಲ್ಲಿ ತೊಡಗಿದ್ದವು. ತನ್ನ ನಾಗರಿಕರನ್ನು ಹೊರತುಪಡಿಸಿ, ಭಾರತವು ಇತರ 48 ದೇಶಗಳ ಜನರನ್ನು ಸ್ಥಳಾಂತರಿಸಲು ಸಹಾಯ ಮಾಡಿತು.

# ಇತರ ದೇಶಗಳಿಗೆ ಸಹಾಯ ಹಸ್ತ ಚಾಚಿದ ಭಾರತ

ಸೌದಿ ಅರೇಬಿಯಾದಿಂದ ಭಾರತ ತನ್ನ ಪ್ರಜೆಗಳನ್ನು ಕರೆತಂದಿದ್ದು ಕೂಡ ಒಂದು ಅಂತಹ ಪ್ರಕರಣವಾಗಿದೆ. ಜೂನ್ 19, 2019 ರಂದು, ಮೋದಿ ಸರ್ಕಾರವು ಸೌದಿ ಅರೇಬಿಯಾದಲ್ಲಿ ಸಿಲುಕಿರುವ ಭಾರತೀಯರನ್ನು ತಾಯ್ನಾಡಿಗೆ ಕರೆತಂದಿತು. ವಾಸ್ತವವಾಗಿ, ಎರಡು ಕಂಪನಿಗಳ ನಡುವಿನ ಘರ್ಷಣೆಯಿಂದಾಗಿ ನೂರಾರು ಭಾರತೀಯರು ಸೌದಿ ಅರೇಬಿಯಾದಲ್ಲಿ ಸಿಲುಕಿಕೊಂಡರು. ಮೋದಿ ಸರ್ಕಾರದ ಉಪಕ್ರಮದಿಂದ 1200 ಭಾರತೀಯರನ್ನು ತಾಯ್ನಾಡಿಗೆ ಕರೆತರಲಾಯಿತು. ಇವರಲ್ಲಿ ಸುಮಾರು 500 ಮಂದಿ ಪಂಜಾಬಿಗಳಾಗಿದ್ದರು. ತಾಯ್ನಾಡಿಗೆ ಮರಳಿದ ಪಂಜಾಬಿಗಳು ಸುರಕ್ಷಿತವಾಗಿ ಮರಳಿದ್ದಕ್ಕಾಗಿ ಪ್ರಧಾನಿ ಮೋದಿಯವರನ್ನು ಶ್ಲಾಘಿಸಿದರು. ವಸುಧೈವ ಕುಟುಂಬಕಮ್‌ನ ಮನೋಭಾವದಲ್ಲಿ, ಭಾರತವು ಸುನಾಮಿ ಮತ್ತು ಜ್ವಾಲಾಮುಖಿ ಸ್ಫೋಟಗಳಿಂದ ಪೀಡಿತವಾದ ಟೊಂಗಾಗೆ ತಕ್ಷಣದ ಪರಿಹಾರ, ಪುನರ್ವಸತಿ ಮತ್ತು ಪುನರ್ನಿರ್ಮಾಣಕ್ಕಾಗಿ $ 2 ಮಿಲಿಯನ್ ಆರ್ಥಿಕ ನೆರವು ನೀಡಿತು. 2018 ರಲ್ಲಿ ಗೀತಾ ಚಂಡಮಾರುತದಿಂದ ಉಂಟಾದ ವಿನಾಶದ ಸಮಯದಲ್ಲಿಯೂ ಭಾರತವು ಟೊಂಗಾದೊಂದಿಗೆ ದೃಢವಾಗಿ ನಿಂತಿತು. ಬಿಕ್ಕಟ್ಟಿನ ಸಮಯದಲ್ಲಿ ಭಾರತವು ಮಾಲ್ಡೀವ್ಸ್‌ಗೆ ಸಹಾಯ ಮಾಡಿತು. ಚೀನಾ ಮಾಲ್ಡೀವ್ಸ್ ಅನ್ನು ಸಾಲದ ಬಲೆಯಲ್ಲಿ ಸಿಲುಕಿಸಿದ ನಂತರ, ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಭಾರತವು 250 ಮಿಲಿಯನ್ ಡಾಲರ್ (1840 ಕೋಟಿ ರೂ.) ಆರ್ಥಿಕ ನೆರವು ನೀಡಿತು. ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೋಲಿಹ್ ಅವರು ಆರ್ಥಿಕ ಸಹಾಯಕ್ಕಾಗಿ ಭಾರತ ಮತ್ತು ಪ್ರಧಾನಿ ಮೋದಿಯವರಿಗೆ ಕೃತಜ್ಞತೆ ಸಲ್ಲಿಸಿದರು.

ಇಂತಹ ಮತ್ತೊಂದು ನಿದರ್ಶನದಲ್ಲಿ, 16 ವರ್ಷದೊಳಗಿನ ಫುಟ್‌ಬಾಲ್ ತಂಡದ ಹನ್ನೆರಡು ಮಕ್ಕಳು ಮತ್ತು ತರಬೇತುದಾರರು ಥಾಯ್ಲೆಂಡ್‌ನ ಥಾಮ್ ಲುವಾಂಗ್ ಗುಹೆಯಲ್ಲಿ ಸಿಕ್ಕಿಬಿದ್ದರು. ಇದು ವಿಶ್ವದಲ್ಲೇ ಅತ್ಯಂತ ಅಪಾಯಕಾರಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಒಂದಾಗಿತ್ತು. ಬ್ರಿಟನ್, ಫ್ರಾನ್ಸ್, ಜಪಾನ್, ಅಮೆರಿಕ ಸೇರಿದಂತೆ ಹಲವು ದೇಶಗಳು ತಮ್ಮ ತಜ್ಞರನ್ನು ಕಳುಹಿಸಿದವು, ಆದರೆ ಅವರು ಫುಟ್‌ಬಾಲ್ ತಂಡವನ್ನು ರಕ್ಷಿಸಲು ವಿಫಲರಾದರು. ಇದಾದ ನಂತರ ಥಾಯ್ಲೆಂಡ್ ಸರ್ಕಾರವು ಸಹಾಯಕ್ಕಾಗಿ ಮೋದಿ ಸರ್ಕಾರದ ಸಹಾಯವನ್ನು ಕೋರಿತು. ಸರ್ಕಾರ ಯಾವುದೇ ಸಮಯವನ್ನು ವ್ಯರ್ಥ ಮಾಡದೆ ಭಾರತೀಯ ಇಂಜಿನಿಯರ್‌ಗಳಿಗೆ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿತು. ಭಾರತ ಸರ್ಕಾರದ ಆದೇಶದ ಮೇರೆಗೆ, ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯಲ್ಲಿರುವ ಕಿರ್ಲೋಸ್ಕರ್ ಗ್ರೂಪ್‌ನಿಂದ ಭಾರೀ ಕೆಬಿಎಸ್ ಫ್ಲಡ್ ಪಂಪ್ ಅನ್ನು ಕಳುಹಿಸಲಾಯಿತು. ಭಾರತದಿಂದ ಕೆಬಿಎಸ್ ಫ್ಲಡ್ ಪಂಪ್‌ಗಳು ಥೈಲ್ಯಾಂಡ್ ತಲುಪಿದ ನಂತರ, ಗುಹೆಯಲ್ಲಿನ ನೀರಿನ ಮಟ್ಟವನ್ನು ಕಡಿಮೆ ಮಾಡಲಾಯಿತು. ನೀರಿನ ಮಟ್ಟ ಕಡಿಮೆಯಾದ ನಂತರ ರಕ್ಷಣಾ ಕಾರ್ಯಾಚರಣೆಯಲ್ಲಿ ಡೈವರ್‌ಗಳಿಗೆ ಸುಲಭವಾಯಿತು ಮತ್ತು ಮೂರು ದಿನಗಳ ಕಠಿಣ ಕಾರ್ಯಾಚರಣೆಯ ನಂತರ, ಎಲ್ಲಾ ಮಕ್ಕಳು ಮತ್ತು ಅವರ ಕೋಚ್ ಅನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಶ್ರೀಲಂಕಾದ ಚಹಾ ತೋಟಗಳಲ್ಲಿ ಕೆಲಸ ಮಾಡುವ ಭಾರತೀಯ ಮೂಲದ ಜನರಿಗೆ ಸುಮಾರು 350 ಮಿಲಿಯನ್ ಯುಎಸ್ ಡಾಲರ್ ವೆಚ್ಚದ 404 ಮನೆಗಳನ್ನು ಭಾರತವು ಇತ್ತೀಚೆಗೆ ಹಸ್ತಾಂತರಿಸಿದೆ. ಇದು ಯಾವುದೇ ದೇಶದಲ್ಲಿ ಭಾರತದ ಅತಿದೊಡ್ಡ ವಸತಿ ಯೋಜನೆಯಾಗಿದೆ. ಶ್ರೀಲಂಕಾದಲ್ಲಿ ವಾಸಿಸುವ ಭಾರತೀಯ ಮೂಲದ ತಮಿಳರು ಹೆಚ್ಚಾಗಿ ಚಹಾ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡುತ್ತಾರೆ.



ಹಾಗೆಯೇ, 25 ಏಪ್ರಿಲ್ 2015 ರಂದು ನೇಪಾಳದಲ್ಲಿ ಸಂಭವಿಸಿದ ತೀವ್ರ ಭೂಕಂಪದ ನಂತರ ಭಾರತವು ಎನ್ ಡಿ ಆರ್ ಎಫ್ ತಂಡಗಳನ್ನು ಕಳುಹಿಸಿತು, ಅದು ದುರಂತದ 6 ಗಂಟೆಯೊಳಗೆ ಅಲ್ಲಿಗೆ ತಲುಪಿತು. ಭಾರತವು ನೇಪಾಳಕ್ಕೆ ಸುಮಾರು 67 ಮಿಲಿಯನ್ ಯುಎಸ್ ಡಾಲರ್‌ಗಳ ನೆರವನ್ನು ನೀಡಿತು. ಈ ಭೂಕಂಪದಿಂದಾಗಿ ನೇಪಾಳದಲ್ಲಿ ಸಿಲುಕಿದ್ದ ಭಾರತೀಯರನ್ನು ರಕ್ಷಿಸಲು 'ಆಪರೇಷನ್ ಮೈತ್ರಿ' ನಡೆಸಲಾಗಿತ್ತು. 2016 ರಲ್ಲಿ, ದಕ್ಷಿಣ ಸುಡಾನ್ ಸಂಘರ್ಷದ ಸಮಯದಲ್ಲಿ, ಭಾರತವು ತನ್ನ ಜನರನ್ನು ಮರಳಿ ಕರೆತರಲು 'ಆಪರೇಷನ್ ಸಂಕಟಮೋಚನ್' ಅನ್ನು ಪ್ರಾರಂಭಿಸಿತು, ಇದರಲ್ಲಿ 153 ಭಾರತೀಯರು ಮತ್ತು ಇಬ್ಬರು ನೇಪಾಳದ ನಾಗರಿಕರನ್ನು ರಕ್ಷಿಸಲಾಯಿತು. ಮೊಜಾಂಬಿಕ್‌ನಲ್ಲಿ 2019 ರ ಚಂಡಮಾರುತದ ಸಮಯದಲ್ಲಿ ಭಾರತವು ಮಾನವೀಯ ನೆರವು ನೀಡಿತು ಮತ್ತು 192 ಕ್ಕೂ ಹೆಚ್ಚು ಜನರನ್ನು ರಕ್ಷಿಸಿತು. ಇಂಡೋನೇಷ್ಯಾದಲ್ಲಿ ಭೂಕಂಪ ಮತ್ತು ಸುನಾಮಿ ಸಂತ್ರಸ್ತರಿಗಾಗಿ ಭಾರತವು 'ಆಪರೇಷನ್ ಸಮುದ್ರ ಮೈತ್ರಿ'ಯನ್ನು ಪ್ರಾರಂಭಿಸಿತು. ಅಂತೆಯೇ, 2021 ರಲ್ಲಿ, ಅಫ್ಘಾನಿಸ್ತಾನದಲ್ಲಿ ಸಿಲುಕಿದ್ದ ಭಾರತೀಯರನ್ನು ರಕ್ಷಿಸಲು 'ಆಪರೇಷನ್ ದೇವಿ ಶಕ್ತಿ' ನಡೆಸಲಾಯಿತು. ಶ್ರೀಲಂಕಾದಲ್ಲಿ ಈಸ್ಟರ್ ಭಯೋತ್ಪಾದಕ ದಾಳಿಯ ನಂತರ ದೇಶಕ್ಕೆ ಭೇಟಿ ನೀಡಿದ ಮೊದಲ ವಿಶ್ವ ನಾಯಕ ಪ್ರಧಾನಿ ಮೋದಿ. ಶ್ರೀಲಂಕಾದಲ್ಲಿ ಭಾರತದ ತುರ್ತು ಆಂಬ್ಯುಲೆನ್ಸ್ ಸೇವೆಯು ಈಗಲೂ ದೇಶದ ಎಲ್ಲಾ ಒಂಬತ್ತು ಪ್ರಾಂತ್ಯಗಳಲ್ಲಿ ಲಭ್ಯವಿದೆ. ■

# ಬಜೆಟ್ ವೆಬಿನಾರ್ ರಾಷ್ಟ್ರದ ಪ್ರಗತಿಗೆ ನೂತನ ವೇದಿಕೆ



ಸಾಮಾನ್ಯ ಬಜೆಟ್ ದೇಶದ ಆರ್ಥಿಕ ಅಗತ್ಯಗಳನ್ನು ಪೂರೈಸುವ ದಸ್ತಾವೇಜಿಗಿಂತ ಮಿಗಿಲಾಗಿ, ಖಾಸಗಿ ವಲಯ ಮತ್ತು ಸುಧಾರಣೆಗಳು ಮತ್ತು ಅವಕಾಶಗಳ ನಡುವಿನ ಸೇತುವೆಯಾಗುತ್ತಿದೆ. ಇದಕ್ಕೆ ಕಾರಣ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿ, ಇದು ನವ ಭಾರತದ ನಿರ್ಮಾಣದ ಚಿಂತನೆಗೆ ಹೊಸ ದಿಕ್ಕು ನೀಡಲಿದೆ. ಒಂದು ಮಾರ್ಗವನ್ನು ಕಂಡುಹಿಡಿಯಲಾಗಿದೆ. ಬಜೆಟ್ ಅವಕಾಶಗಳ ಬಗ್ಗೆ ವಿವಿಧ ವಲಯಗಳೊಂದಿಗೆ ನೇರವಾಗಿ ಸಂವಹನ ನಡೆಸುವ ಮೂಲಕ ಪ್ರಧಾನಮಂತ್ರಿ ಮೋದಿ ಅವರು "ಸ್ವಾವಲಂಬಿ ಭಾರತ"ದ ಪರಿಕಲ್ಪನೆಗೆ ಚಾಲನೆ ನೀಡಿದ್ದಾರೆ.

ಫೆಬ್ರವರಿ 1 ರಂದು ದೇಶದ ಸಾಮಾನ್ಯ ಬಜೆಟ್ ಮಂಡನೆಯಾದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫೆಬ್ರವರಿಯಲ್ಲಿ ಅರ್ಧ ಡಜನ್ ವಲಯಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು ಮತ್ತು ಮಾರ್ಚ್ ಆರಂಭದಲ್ಲಿ, ಅವರು ಬಜೆಟ್ ವೆಬಿನಾರ್ ಮೂಲಕ ಉಳಿದ ವಲಯಗಳೊಂದಿಗೆ ವಿಚಾರ ವಿನಿಮಯ ಮುಂದುವರಿಸಿದರು. ಒಂದು ಕಾಲವಿತ್ತು, ಆಗ ಜನರು ದೇಶದ ಬಜೆಟ್ ಅನ್ನು ಸಿದ್ಧಪಡಿಸಿದ ಮತ್ತು ಮಂಡಿಸಿದ ನಂತರ ಮರೆತುಬಿಡುತ್ತಿದ್ದರು. ಆದರೆ, ಸಾಮಾನ್ಯ ಬಜೆಟ್ ಭಾರತದ ಶತಮಾನೋತ್ಸವದ ದಸ್ತಾವೇಜಿನಂತೆ (2047) ಹೊರಹೊಮ್ಮಿದೆ, ಇದರಲ್ಲಿ ದೇಶದ ಪ್ರತಿಯೊಬ್ಬ ಸಾಮಾನ್ಯ ನಾಗರಿಕನೂ ಭಾಗವಹಿಸುತ್ತಾನೆ, ಕೇವಲ ಸರ್ಕಾರವಲ್ಲ, ಪ್ರಸ್ತುತ ಸರ್ಕಾರದ ಈ ಹೊಸ ಚಿಂತನೆಯು ಸಂಸದೀಯ ಇತಿಹಾಸದಲ್ಲಿ ಅಂತಹ ಸಂದರ್ಭವಾಗಿದೆ. ಈ ದೃಷ್ಟಿಕೋನವನ್ನು ಸಾಕಾರಗೊಳಿಸುವ ಸಲುವಾಗಿ, ಉನ್ನತ ನಾಯಕತ್ವದ ಮಟ್ಟದಲ್ಲಿ, ಅಂದರೆ ಪ್ರಧಾನ ಮಂತ್ರಿಯವರು ವಿವಿಧ ವಲಯಗಳ ಬಾಧ್ಯಸ್ಥರೊಂದಿಗೆ ನೇರವಾಗಿ ಸಂವಹನ ನಡೆಸಲು ಒಂದು ಹೊಸಕ್ರಮ ಆರಂಭಿಸಿದರು. ನ್ಯೂ ಇಂಡಿಯಾ ಸಮಾಚಾರ್ ಹಿಂದಿನ ಸಂಚಿಕೆಯಲ್ಲಿ ಪ್ರಧಾನಮಂತ್ರಿಯವರ ಬಜೆಟ್ ವೆಬಿನಾರ್ ಸರಣಿಯ ಒಂದು ಭಾಗವನ್ನು ಪ್ರಕಟಿಸಲಾಗಿತ್ತು. ಆ ನಂತರ ಆರು ವಲಯಗಳೊಂದಿಗಿನ ಪ್ರಧಾನಮಂತ್ರಿಯವರ ಸಭೆಯ ಆಯ್ದ ಭಾಗಗಳನ್ನೂ ಓದಿ...

> ಬಜೆಟ್ ನ ಹಿನ್ನೆಲೆಯಲ್ಲಿ, ಖಾಸಗಿ, ಸಾರ್ವಜನಿಕ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಸೇರಿದಂತೆ ಎಲ್ಲ ಬಾಧ್ಯಸ್ಥರು ಸಾಧ್ಯವಾದಷ್ಟು ಬೇಗ ವಿಷಯಗಳನ್ನು ಹೇಗೆ ಪ್ರಾರಂಭಿಸಬೇಕೆಂದು ನಿರ್ಧರಿಸುವುದನ್ನು ಖಚಿತಪಡಿಸಿಕೊಳ್ಳಲು ನಾವು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದು ಸರ್ಕಾರಕ್ಕೆ ತನ್ನ ನೀತಿ ನಿರೂಪಣೆಯ ಪ್ರಕ್ರಿಯೆಯನ್ನು ಸರಳೀಕರಿಸಲು ಸುಲಭವಾಗುತ್ತದೆ. ಅನುಷ್ಠಾನ ಮಾರ್ಗಸೂಚಿಯೂ ಪರಿಣಾಮಕಾರಿಯಾಗಿರುತ್ತದೆ.
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**

## ತಂತ್ರಜ್ಞಾನ ಆಧಾರಿತ ಅಭಿವೃದ್ಧಿ



# ತಂತ್ರಜ್ಞಾನ ದೇಶದ ಸ್ವಾವಲಂಬನೆಯ ಅಡಿಪಾಯ

ತಂತ್ರಜ್ಞಾನವು ನಾಗರಿಕರನ್ನು ಸಶಕ್ತಗೊಳಿಸುವ ಮಾಧ್ಯಮವಾಗಿದೆ, ಮತ್ತು ಇದು ದೇಶದ ಸ್ವಾವಲಂಬನೆಗೆ ಅಡಿಪಾಯವಾಗಿದೆ. ಮಾರ್ಚ್ 2 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು "ತಂತ್ರಜ್ಞಾನ ಆಧಾರಿತ ಅಭಿವೃದ್ಧಿ" ವಿಷಯದ ಮೇಲೆ ಅದೇ ಸಂಕಲ್ಪವನ್ನು ಪುನರುಚ್ಚರಿಸಿದರು, "ಈ ವರ್ಷದ ಬಜೆಟ್ ನಲ್ಲಿ ಅದೇ ದೃಷ್ಟಿಕೋನವು ಪ್ರತಿಫಲಿಸಿದೆ" ಎಂದು ಹೇಳಿದರು.

- 5ಜಿ ಸ್ಪೆಕ್ಟ್ರಂ ಅನ್ನು ಹರಾಜು ಮಾಡಲು ಬಜೆಟ್ ಸ್ಪಷ್ಟ ನೀಲನಕ್ಷೆಯನ್ನು ಒದಗಿಸಿದ್ದು, ಬಲವಾದ 5ಜಿ ಪರಿಸರ ವ್ಯವಸ್ಥೆಗೆ ಸಂಬಂಧಿಸಿದ ವಿನ್ಯಾಸ ಆಧಾರಿತ ಉತ್ಪಾದನೆಗಾಗಿ ಉದ್ದೇಶಿತ ಪಿಎಲ್ಐ ಯೋಜನೆಗಳನ್ನೂ ನೀಡಿದೆ.
- ಇಂದು ದೇಶದ ಆದ್ಯತೆಗಳು ಗುಪ್ತಚರ, ಭೂ-ಪ್ರಾದೇಶಿಕ ವ್ಯವಸ್ಥೆಗಳು, ಡ್ರೋನ್ ಗಳು, ಅರೆ-ವಾಹಕಗಳು (ಸೆಮಿಕಂಡಕ್ಟರ್), ಬಾಹ್ಯಾಕಾಶ ತಂತ್ರಜ್ಞಾನ, ಜೀನೋಮಿಕ್ಸ್, ಔಷಧಗಳು ಮತ್ತು 5ಜಿ ಸಂಬಂಧಿತ ಶುದ್ಧ ತಂತ್ರಜ್ಞಾನದಂತಹ ಉದಯೋನ್ಮುಖ ವಲಯಗಳಾಗಿವೆ.
- ನಮ್ಮ ಜೀವನದ ಗುಣಮಟ್ಟವನ್ನು ಸುಧಾರಿಸಲು ನಾವು ತಂತ್ರಜ್ಞಾನವನ್ನು ಹೇಗೆ ಬಳಸುತ್ತೇವೆ ಎಂಬುದನ್ನು ನಾವು ಪ್ರತಿಪಾದಿಸಬೇಕು. ಕೋವಿಡ್ ಹರಡುವಿಕೆಯ ಸಮಯದಲ್ಲಿ, ಲಸಿಕೆ ಉತ್ಪಾದನೆಯಲ್ಲಿ ನಮ್ಮ ಸ್ವಾವಲಂಬನೆಯ ಮೂಲಕ ಜಗತ್ತು ನಮ್ಮ ವಿಶ್ವಾಸಾರ್ಹತೆಗೆ ಸಾಕ್ಷಿಯಾಯಿತು. ಈ ಯಶಸ್ಸನ್ನು ಪ್ರತಿಯೊಂದು ವಲಯದಲ್ಲೂ ಪುನರಾವರ್ತಿಸಬೇಕಿದೆ.

## ಮೇಕ್ ಇನ್ ಇಂಡಿಯಾ ಫಾರ್ ದಿ ವರ್ಲ್ಡ್




# ಉತ್ಪಾದನಾ ಶಕ್ತಿ ಕೇಂದ್ರವಾಗಲು ಉಪಕ್ರಮ

- ಒಂದು ಕಾಲದಲ್ಲಿ, ಭಾರತವು ವಿಶ್ವದ ಅತಿದೊಡ್ಡ ಮಾರುಕಟ್ಟೆ ಎಂದು ಮಾತ್ರ ಕರೆಸಿಕೊಂಡಿತ್ತು. ಆದಾಗ್ಯೂ, "ಮೇಕ್ ಇನ್ ಇಂಡಿಯಾ ಫಾರ್ ದಿ ವರ್ಲ್ಡ್" ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಷ್ಟಿಕೋನದ ಪರಿಣಾಮವಾಗಿ, ಭಾರತವು ಈಗ ವಿಶ್ವದ ಅಗ್ರ ರಫ್ತುದಾರ ರಾಷ್ಟ್ರವಾಗಿದೆ. ಮಾರ್ಚ್ 3 ರಂದು ನಡೆದ ಬಜೆಟ್ ವೆಬಿನಾರ್ ನಲ್ಲಿ ಪ್ರಧಾನಮಂತ್ರಿ ಮೋದಿ ಅವರು ಭಾರತವು ವಿಶ್ವದ ಉತ್ಪಾದನಾ ಶಕ್ತಿಕೇಂದ್ರವಾಗಬೇಕೆಂಬ ತಮ್ಮ ಕರೆಯನ್ನು ಪುನರುಚ್ಚರಿಸಿದರು.
- ಭಾರತದಂತಹ ದೇಶವು ಕೇವಲ ಮಾರುಕಟ್ಟೆಯಾಗಿ ಉಳಿಯುವುದು ಸ್ವೀಕಾರಾರ್ಹವಲ್ಲ. ಇದರ ಪರಿಣಾಮವಾಗಿ, "ಸ್ವಾವಲಂಬಿ ಭಾರತ" ಮತ್ತು "ಮೇಕ್ ಇನ್ ಇಂಡಿಯಾ" ಗೆ ಸಂಬಂಧಿಸಿದಂತೆ ಈ ಬಜೆಟ್ ನಲ್ಲಿ ಕೈಗೊಂಡ ನಿರ್ಧಾರಗಳು ನಮ್ಮ ಉದ್ಯಮ ಮತ್ತು ಆರ್ಥಿಕತೆ ಎರಡಕ್ಕೂ ನಿರ್ಣಾಯಕವಾಗಿವೆ. 21ನೇ ಶತಮಾನದ ಭಾರತದಲ್ಲಿ ಮೇಕ್ ಇನ್ ಇಂಡಿಯಾ ಅಭಿಯಾನವೂ ಅಗತ್ಯವಾಗಿದೆ.
- ಜನಸಂಖ್ಯೆಯ ಪ್ರಯೋಜನ, ಪ್ರಜಾಪ್ರಭುತ್ವ ವ್ಯವಸ್ಥೆ ಹಾಗು ಯುವ ಮತ್ತು ಪ್ರತಿಭಾವಂತ ಜನಸಂಖ್ಯೆಯ ನೈಸರ್ಗಿಕ ಸಂಪನ್ಮೂಲಗಳಂತಹ ಸಕಾರಾತ್ಮಕ ಅಂಶಗಳೊಂದಿಗೆ, ನಾವು "ಮೇಕ್ ಇನ್ ಇಂಡಿಯಾ" ವನ್ನು ಹುರುಪಿನಿಂದ ಮುಂದುವರಿಸಲು ಪ್ರೋತ್ಸಾಹಿಸಬೇಕು. ರಾಷ್ಟ್ರೀಯ ಭದ್ರತೆಯ ವಿಷಯಕ್ಕೆ ಬಂದಾಗ, ಸ್ವಾವಲಂಬನೆ ಹೆಚ್ಚು ಮುಖ್ಯ. ನಿಮ್ಮ ಕಂಪನಿಯ ಉತ್ಪನ್ನಗಳ ಬಗ್ಗೆ ಹೆಮ್ಮೆ ಪಡಬೇಕು ಮತ್ತು ನಿಮ್ಮ ಭಾರತೀಯ ಗ್ರಾಹಕರ ಬಗ್ಗೆ ಆ ಹೆಮ್ಮೆಯನ್ನು ತುಂಬಬೇಕು.
- ನೀವು ಜಾಗತಿಕ ಮಾನದಂಡಗಳನ್ನು ಎತ್ತಿಹಿಡಿಯಬೇಕು ಮತ್ತು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಬೇಕು.

## ಭವಿಷ್ಯದ ಆಕಾಂಕ್ಷೆಗಳು ಮತ್ತು ಅಗತ್ಯಗಳನ್ನು ಸಾಧಿಸುವ ಮಾರ್ಗ

- ಮಾರ್ಚ್ 4ರಂದು "ಸುಸ್ಥಿರ ಅಭಿವೃದ್ಧಿಗಾಗಿ ಇಂಧನ" ಕುರಿತ ಬಜೆಟ್ ವೆಬಿನಾರ್ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ಸುಸ್ಥಿರ ಇಂಧನದ ಮೂಲಗಳ ಮೂಲಕ ಮಾತ್ರ ಸುಸ್ಥಿರ ಅಭಿವೃದ್ಧಿ ಸಾಧ್ಯ" ಎಂದು ಹೇಳಿದರು, ಭವಿಷ್ಯದ ಆಕಾಂಕ್ಷೆಗಳು ಮತ್ತು ಅಗತ್ಯಗಳನ್ನು ಪೂರೈಸಲು ಬಾಧ್ಯಸ್ಥರೊಂದಿಗೆ ಸಂವಾದ ನಡೆಸಿದರು.
- ಪಳೆಯುಳಿಕೆಯೇತರ ಇಂಧನ ಮೂಲಗಳು 2030ರ ವೇಳೆಗೆ ನಮ್ಮ ಸ್ಥಾಪಿತ ಇಂಧನ ಸಾಮರ್ಥ್ಯದ ಶೇ.50ರಷ್ಟು ಆಗಲೇಬೇಕು. ಭಾರತ ತನ್ನಿಚ್ಛೆಯಂತೆ ತಾನೇ ಯಾವ ಗುರಿಗಳನ್ನು ಇಟ್ಟುಕೊಂಡಿದೆಯೋ ಅದನ್ನು ನಾನು ಸವಾಲಿಗಿಂತ ಒಂದು ಅವಕಾಶವಾಗಿ ನೋಡುತ್ತೇನೆ.

## ಇಂಧನ ಅಭಿವೃದ್ಧಿಗಾಗಿ ನಿರಂತರ ಪ್ರಯತ್ನಗಳು



- ಹೆಚ್ಚಿನ ದಕ್ಷತೆಯ ಸೌರ ಮಾಡ್ಯೂಲ್ ಗಳ ತಯಾರಿಕೆಗೆ 19.5 ಸಾವಿರ ಕೋಟಿ ರೂ.ಗಳ ಬಜೆಟ್ ಹಂಚಿಕೆಯು ಭಾರತವು ಸೌರ ಮಾಡ್ಯೂಲ್ ಗಳು ಮತ್ತು ಸಂಬಂಧಿತ ಉತ್ಪನ್ನಗಳ ಸಂಶೋಧನೆ ಮತ್ತು ಅಭಿವೃದ್ಧಿಯ, ಉತ್ಪಾದನೆಯ ಜಾಗತಿಕ ಕೇಂದ್ರವಾಗಲು ಸಹಾಯ ಮಾಡುತ್ತದೆ.
- ಈ ವರ್ಷದ ಬಜೆಟ್ ಬ್ಯಾಟರಿ ವಿನಿಮಯ ನೀತಿಗಳು ಮತ್ತು ಪರಸ್ಪರ ಕಾರ್ಯಾಚರಣೆ ಮಾನದಂಡಗಳ ನಿಬಂಧನೆಗಳನ್ನು ಸಹ ಒಳಗೊಂಡಿದೆ. ಇದು ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಸುಗಮಗೊಳಿಸಲು ಸಹಾಯ ಮಾಡುತ್ತದೆ.

## ಭಾರತದ ಆರ್ಥಿಕ ಪ್ರಗತಿಯ ಪುರಾವೆ



## ಬೆಳವಣಿಗೆ ಮತ್ತು ಮಹತ್ವಾಕಾಂಕ್ಷೆಯ ಆರ್ಥಿಕತೆಗೆ ಹಣಕಾಸಿನ ನೆರವು

ಶತಮಾನದ ಅತಿದೊಡ್ಡ ಸಾಂಕ್ರಾಮಿಕ ರೋಗದ ನಡುವೆಯೂ, ಸುಧಾರಣೆಗಳೊಂದಿಗೆ ಭಾರತೀಯ ಆರ್ಥಿಕತೆಯು ಪಡೆದ ವೇಗವು ಇನ್ನೂ ಮುಂದುವರಿಯುತ್ತಿದೆ. ಮಾರ್ಚ್ 8 ರಂದು ಬಾಧ್ಯಸ್ಥರೊಂದಿಗೆ ಸಂವಾದ ನಡೆಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತದ ಪ್ರಗತಿಯನ್ನು ಮತ್ತಷ್ಟು ವೇಗಗೊಳಿಸುವ ತಮ್ಮ ದೃಷ್ಟಿಕೋನವನ್ನು ಹಂಚಿಕೊಂಡರು.

- ಈ ಬಜೆಟ್ ನಲ್ಲಿ, ತ್ವರಿತ ಬೆಳವಣಿಗೆಯ ಈ ವೇಗವನ್ನು ಮುಂದುವರಿಸಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ವಿದೇಶಿ ಹೂಡಿಕೆ ಒಳಹರಿವು, ಮೂಲಸೌಕರ್ಯ ಹೂಡಿಕೆಯ ಮೇಲಿನ ತೆರಿಗೆ ಕಡಿತ, ಗಿಫ್ಟ್ (GIFT) ಸಿಟಿ, ಡಿಎಫ್.ಐಗಳಂತಹ ಹೊಸ ಸಂಸ್ಥೆಗಳು ಈ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿದೆ.
- ಗ್ರಾಮೀಣ ಆರ್ಥಿಕತೆಯನ್ನು ಉತ್ತೇಜಿಸುವುದರೊಂದಿಗೆ ಎಂಎಸ್ಎಂಇ ವಲಯವನ್ನು ಬಲಪಡಿಸಲು ನಾವು ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದೇವೆ. ಪರಿಸರ ಸ್ನೇಹಿ ಯೋಜನೆಗಳನ್ನು ಚುರುಕುಗೊಳಿಸಬೇಕಾಗಿದೆ. ಹಸಿರು ಹಣಕಾಸು ಮತ್ತು ಅಂತಹ ಹೊಸ ಅಂಶಗಳನ್ನು ಅಧ್ಯಯನ ಮಾಡುವುದು ಹಾಗು ಅನುಷ್ಠಾನಗೊಳಿಸುವುದು ಇಂದಿನ ಅಗತ್ಯವಾಗಿದೆ. ■

# ಕ್ರೀಡೆ -ರಕ್ಷಣೆಯಲ್ಲಿ ಭಾರತ ಮಣಿಯುವುದಿಲ್ಲ ಅಥವಾ ದಣಿಯುವುದಿಲ್ಲ



ಒಂದು ರಾಷ್ಟ್ರದ ಪ್ರಗತಿಗೆ, ದೇಶದ ಯುವಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸುದೃಢರಾಗಿರಬೇಕು ಎಂಬುದು ಬಹಳ ಮುಖ್ಯ. ದೇಶದ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಒತ್ತಡರಹಿತ ತರಬೇತಿ ಚಟುವಟಿಕೆಗಳು ಮತ್ತು ಸ್ವಾಸ್ಥ್ಯ ಈ ಸಮಯದ ಅಗತ್ಯವಾಗಿದೆ. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ದೇಶದ ಭದ್ರತೆಗೆ ಬದ್ಧವಾಗಿದ್ದು, ಒಂದೆಡೆ ಕ್ರೀಡಾ ಕ್ಷೇತ್ರದಲ್ಲಿ ಯುವ ಶಕ್ತಿಯನ್ನು ಪ್ರೋತ್ಸಾಹಿಸುವ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿದೆ. ಅಷ್ಟೇ ಅಲ್ಲ, ದೇಶದಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಭಾರತವು ಸಮಗ್ರ ವಿಧಾನದೊಂದಿಗೆ ಶ್ರಮಿಸುತ್ತಿದೆ.

ನವ ಭಾರತದ ಯುವಕರು ಇಂದು ಅಭಿಯಾನಗಳನ್ನು ಯಶಸ್ವಿಗೊಳಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಕೇಂದ್ರ ಸರ್ಕಾರ ಪ್ರತಿ ಹಂತದಲ್ಲೂ ಅವರನ್ನು ಬೆಂಬಲಿಸುತ್ತಿದೆ ಮತ್ತು ಅವರ ಸುಧಾರಣೆಗಾಗಿ ಪ್ರಯತ್ನಗಳನ್ನು ಮಾಡುತ್ತಿದೆ. 'ಯಶಸ್ಸಿಗೆ ಇರುವುದು ಒಂದೇ ಮಂತ್ರ - ದೀರ್ಘಾವಧಿ ಯೋಜನೆ ಮತ್ತು ನಿರಂತರ ಬದ್ಧತೆ' ಎಂದು ಕೇಂದ್ರ ಸರ್ಕಾರ ನಂಬಿದೆ. ಇಂದು ಸರ್ಕಾರವು ಯುವಜನರಿಗೆ ಎಲ್ಲ ಅವಕಾಶಗಳನ್ನು ಒದಗಿಸುತ್ತಿದೆ ಮತ್ತು ಮುಂಬರುವ ವರ್ಷಗಳಲ್ಲಿ ಬಲವಾದ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸುವಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಅವರನ್ನು ಪ್ರೋತ್ಸಾಹಿಸುತ್ತಿದೆ. "ಭಾರತದಂತಹ ಯುವ ದೇಶಕ್ಕೆ ನಿರ್ದೇಶನ ನೀಡುವಲ್ಲಿ ಯುವಕರ ಪಾತ್ರ ದೊಡ್ಡದಿದೆ. ಯುವಕರು ಮಾತ್ರ ನಾಳಿನ ಭವಿಷ್ಯವನ್ನು ರೂಪಿಸಬಲ್ಲರು, ಯಾರು ಅದಕ್ಕಾಗಿ ಒಂದು ಸಂಕಲ್ಪ ಮಾಡುವರೋ ಅವರು ಮಾತ್ರ ಅದನ್ನು ದೃಢನಿಶ್ಚಯ ಮತ್ತು ಸಮರ್ಪಣೆಯಿಂದ ಮಾಡಬಹುದು." ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಈ ಮಾತುಗಳು ನವ ಭಾರತವನ್ನು ರೂಪಿಸುವಲ್ಲಿ ಯುವ ಶಕ್ತಿಯ ಪಾತ್ರವನ್ನು ಎತ್ತಿ ತೋರಿಸುತ್ತದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇತ್ತೀಚೆಗೆ ತಮ್ಮ ಗುಜರಾತ್ ಭೇಟಿಯ ಸಂದರ್ಭದಲ್ಲಿ ರಾಷ್ಟ್ರೀಯ ರಕ್ಷಣಾ (ರಕ್ಷಾ) ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದರು ಮತ್ತು ಅದರ ಕಟ್ಟಡಗಳಲ್ಲಿ ಒಂದನ್ನು ದೇಶಕ್ಕೆ ಸಮರ್ಪಿಸಿದರು. ಇದೇ ವೇಳೆ ಅಹ್ಮದಾಬಾದ್ ನಲ್ಲಿ ನಡೆದ 11ನೇ ಖೇಲ್ ಮಹಾ ಕುಂಭವನ್ನು ಪ್ರಧಾನಮಂತ್ರಿ ಉದ್ಘಾಟಿಸಿದರು. ಈ ಕುರಿತು ಮಾತನಾಡಿದ ಅವರು, ಇದು ಖೇಲ್ ಮಹಾಕುಂಭ ಮಾತ್ರವಲ್ಲ, ಗುಜರಾತಿನ ಯುವ ಶಕ್ತಿಯ ಮಹಾಕುಂಭವೂ ಆಗಿದೆ ಎಂದು ಹೇಳಿದರು.

# ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯ: ರಾಷ್ಟ್ರೀಯ ಮಹತ್ವದ ಸಂಸ್ಥೆ

ಪೊಲೀಸ್, ಅಪರಾಧ ನ್ಯಾಯ ಮತ್ತು ಸರಿಪಡಿಸಬಹುದಾದ ಆಡಳಿತದ ವಿವಿಧ ಅಂಗಗಳಲ್ಲಿ ಉತ್ತಮ ಗುಣಮಟ್ಟದ ತರಬೇತಿ ಪಡೆದ ಮಾನವ ಸಂಪನ್ಮೂಲದ ಅಗತ್ಯವನ್ನು ಪೂರೈಸಲು ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯವನ್ನು (ಆರ್.ಆರ್.ಯು) ಸ್ಥಾಪಿಸಲಾಯಿತು. ಸರ್ಕಾರವು ರಕ್ಷಣಾ ಶಕ್ತಿ ವಿಶ್ವವಿದ್ಯಾಲಯವನ್ನು ಮೇಲ್ದರ್ಜೆಗೇರಿಸಿದ್ದು, ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯ ಎಂಬ ರಾಷ್ಟ್ರೀಯ ಪೊಲೀಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು, ಇದನ್ನು ಗುಜರಾತ್ ಸರ್ಕಾರವು 2010ರಲ್ಲಿ ಸ್ಥಾಪಿಸಿತು. ಈ ವಿಶ್ವವಿದ್ಯಾಲಯವು ರಾಷ್ಟ್ರೀಯ ಮಹತ್ವದ ಸಂಸ್ಥೆಯಾಗಿದೆ. ಇದು ಅಕ್ಟೋಬರ್ 2020ರಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ವಿಶ್ವವಿದ್ಯಾಲಯವು ಉದ್ಯಮದಿಂದ ಜ್ಞಾನ ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಖಾಸಗಿ ವಲಯದೊಂದಿಗೆ ಸಮನ್ವಯವನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಪೊಲೀಸ್ ಮತ್ತು ಭದ್ರತೆಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕೇಂದ್ರಗಳನ್ನು ಸ್ಥಾಪಿಸುತ್ತದೆ.

## ಆರ್.ಆರ್.ಯು. ವಿವಿಧ ಕ್ಷೇತ್ರಗಳಲ್ಲಿ ಡಿಪ್ಲೊಮಾದಿಂದ ಡಾಕ್ಟರೇಟ್ ವರೆಗೆ ಶೈಕ್ಷಣಿಕ ಕೋರ್ಸ್ ಗಳನ್ನು ನಡೆಸುತ್ತದೆ

ರಾಷ್ಟ್ರೀಯ ರಕ್ಷಣಾ (ರಕ್ಷಾ) ವಿಶ್ವವಿದ್ಯಾಲಯ (ಆರ್.ಆರ್.ಯು) ಪೊಲೀಸ್ ವಿಜ್ಞಾನ ಮತ್ತು ನಿರ್ವಹಣೆ, ಅಪರಾಧ ಕಾನೂನು ಮತ್ತು ನ್ಯಾಯ, ಸೈಬರ್ ಮನಃಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಸೈಬರ್ ಭದ್ರತೆ, ಅಪರಾಧ ತನಿಖೆ, ವ್ಯೂಹಾತ್ಮಕ ಭಾಷೆಗಳು, ಆಂತರಿಕ ರಕ್ಷಣೆ ಮತ್ತು ಕಾರ್ಯತಂತ್ರ, ದೈಹಿಕ ಶಿಕ್ಷಣ ಮತ್ತು ಕ್ರೀಡೆ, ಕರಾವಳಿ ಮತ್ತು ಸಾಗರ ಭದ್ರತೆ ಅಂದರೆ ಪೊಲೀಸ್ ನಿಂದ ಹಿಡಿದು ಆಂತರಿಕ ಭದ್ರತೆಯವರೆಗಿನ ಕ್ಷೇತ್ರಗಳಲ್ಲಿ ಡಿಪ್ಲೋಮಾದಿಂದ ಹಿಡಿದು ಡಾಕ್ಟರೇಟ್ ವರೆಗೆ ವೈವಿಧ್ಯಮಯ ಕೋರ್ಸ್ ಗಳನ್ನು ನೀಡುತ್ತದೆ. ಪ್ರಸ್ತುತ 18 ರಾಜ್ಯಗಳ 822 ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ದಾಖಲಾಗಿದ್ದಾರೆ. ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ, ರಕ್ಷಣಾ ವಿಶ್ವವಿದ್ಯಾಲಯ ಮತ್ತು ವಿಧಿ ವಿಜ್ಞಾನ ವಿಶ್ವವಿದ್ಯಾಲಯದಂತಹ ಹಲವಾರು ವಿಶ್ವವಿದ್ಯಾಲಯಗಳು ಗಾಂಧಿನಗರದಲ್ಲಿವೆ.

# ಕ್ರೀಡೆಯ ಉತ್ತೇಜನದಲ್ಲಿ ಕ್ರಾಂತಿಕಾರಿ ಬದಲಾವಣೆ

**ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2022ರ ಮಾರ್ಚ್ 12ರಂದು ಗುಜರಾತ್ ನ ಅಹ್ಮದಾಬಾದ್ ನಲ್ಲಿ 11ನೇ ಖೇಲ್ ಮಹಾಕುಂಭವನ್ನು ಉದ್ಘಾಟಿಸಿದರು. ಗುಜರಾತ್ ನ ಅಂದಿನ ಮುಖ್ಯಮಂತ್ರಿಯಾಗಿದ್ದಾಗ 2010ರಲ್ಲಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಪ್ರಾರಂಭವಾದ ಖೇಲ್ ಮಹಾಕುಂಭವು ಗುಜರಾತ್ ನ ಕ್ರೀಡಾ ಪರಿಸ್ಥಿತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿತು. ಇದರಲ್ಲಿ 36 ಸಾಮಾನ್ಯ ಕ್ರೀಡೆಗಳು ಮತ್ತು 26 ಪ್ಯಾರಾ-ಕ್ರೀಡೆಗಳನ್ನು ಸೇರಿಸಲಾಗಿದೆ. 45 ಲಕ್ಷಕ್ಕೂ ಹೆಚ್ಚು ಆಟಗಾರರು ನೋಂದಾಯಿಸಿಕೊಂಡಿದ್ದಾರೆ.**



## ಆಟದ ಮೈದಾನದಲ್ಲಿ ಭಾರತದ ಪ್ರಭಾವಶಾಲಿ ಪ್ರದರ್ಶನ

- ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತ ಮೊದಲ ಬಾರಿಗೆ 7 ಪದಕಗಳನ್ನು ಗೆದ್ದಿದೆ. ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲೂ ಭಾರತದ ಪುತ್ರರು ಮತ್ತು ಪುತ್ರಿಯರು 19ಪದಕಗಳನ್ನು ಗೆದ್ದಿದ್ದಾರೆ. ಕಳೆದ 7 ವರ್ಷಗಳಲ್ಲಿ ಕ್ರೀಡಾ ಬಜೆಟ್ ಅನ್ನು ಶೇಕಡಾ 70 ರಷ್ಟು ಹೆಚ್ಚಿಸಲಾಗಿದೆ.
- ಮಣಿಪುರ ಮತ್ತು ಮೀರಟ್ ನಲ್ಲಿ ಕ್ರೀಡಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ ಮತ್ತು ಅನೇಕ ಸಂಸ್ಥೆಗಳಲ್ಲಿ ಕ್ರೀಡಾ ಕೋರ್ಸ್ ಗಳನ್ನು ಪ್ರಾರಂಭಿಸಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಮೇಜರ್ ಧ್ಯಾನ್ ಚಂದ್ ಕ್ರೀಡಾ ವಿಶ್ವವಿದ್ಯಾಲಯದಲ್ಲಿ ಕ್ರೀಡೆಗಳಲ್ಲಿ ಉನ್ನತ ಶಿಕ್ಷಣವನ್ನು ಪ್ರಾರಂಭಿಸಲಿದೆ.
- ಕ್ರೀಡಾಪಟುಗಳು ಮತ್ತು ತರಬೇತುದಾರರಿಗೆ ನೀಡುವ ಪ್ರೋತ್ಸಾಹಕಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ತರಬೇತಿ, ನಿರ್ವಹಣೆ, ಆಹಾರ ತಜ್ಞರು, ಕ್ರೀಡಾ ಬರವಣಿಗೆ ಮುಂತಾದ ಅನೇಕ ವಿಭಾಗಗಳಿವೆ, ಅವುಗಳನ್ನು ಈ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಯುವಕರು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ■

> ಈ ಮೊದಲು ಭಾರತದಲ್ಲಿ ಕೇವಲ ಒಂದು ಅಥವಾ ಎರಡು ಕ್ರೀಡೆಗಳು ಮಾತ್ರ ಪ್ರಾಬಲ್ಯ ಹೊಂದಿದ್ದವು ಮತ್ತು ಸಾಂಪ್ರದಾಯಿಕ ಕ್ರೀಡೆಗಳನ್ನು ನಿರ್ಲಕ್ಷಿಸಲಾಗಿತ್ತು. ಸ್ವಜನ ಪಕ್ಷಪಾತವು ಕ್ರೀಡೆಯಲ್ಲಿ ನುಸುಳಿತ್ತು ಮತ್ತು ಆಟಗಾರರ ಆಯ್ಕೆಯಲ್ಲಿ ಪಾರದರ್ಶಕತೆಯ ತೀವ್ರ ಕೊರತೆ ಇತ್ತು. ನಮ್ಮ ಕ್ರೀಡಾಪಟುಗಳ ಶಕ್ತಿಯೆಲ್ಲ ಸಮಸ್ಯೆಗಳ ವಿರುದ್ಧ ಹೋರಾಡುವುದರಲ್ಲಿಯೇ ವ್ಯಯವಾಗಿ ಹೋಗುತ್ತಿತ್ತು. ಈ ಸನ್ನಿವೇಶದಿಂದ ಹೊರಬರುತ್ತಿರುವ ಭಾರತದ ಯುವಕರು ಇಂದು ಗಗನದೆತ್ತರಕ್ಕೆ ಏರುತ್ತಿದ್ದಾರೆ.
>
> - ನರೇಂದ್ರ ಮೋದಿ, ಪ್ರಧಾನಮಂತ್ರಿ



## ಫೇಮ್ ಇಂಡಿಯಾ ಯೋಜನೆ

# ಪರಿಸರ ಸಂರಕ್ಷಣೆಗೆ ನೆರವು

ಪರಿಸರವನ್ನು ಸ್ವಚ್ಛವಾಗಿಡಲು ಭಾರತ ಸರ್ಕಾರವು ಶುದ್ಧ ಇಂಧನದಿಂದ ಚಲಿಸುವ ವಾಹನಗಳ ಖರೀದಿಯನ್ನು ಉತ್ತೇಜಿಸಲು ಪ್ರಯತ್ನಿಸುತ್ತಿದೆ. ಪರಿಸರ ಸ್ನೇಹಿ ವಾಹನಗಳನ್ನು ಉತ್ತೇಜಿಸುವ ಗುರಿಯೊಂದಿಗೆ ಭಾರತ ಸರ್ಕಾರವು ಏಪ್ರಿಲ್ 1, 2015 ರಂದು ಮೊದಲ ಬಾರಿಗೆ ಎಲೆಕ್ಟ್ರಿಕ್ ಮೊಬಿಲಿಟಿ ಅಭಿಯಾನ ಅಡಿಯಲ್ಲಿ ಫೇಮ್ ಇಂಡಿಯಾ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯ ಯಶಸ್ಸಿನ ನಂತರ, ಸರ್ಕಾರವು ಫೇಮ್ ಯೋಜನೆಯ ಎರಡನೇ ಹಂತವನ್ನು ಘೋಷಿಸಿತು, ಇದರ ಪರಿಣಾಮವಾಗಿ ಅನೇಕ ಕಂಪನಿಗಳು ಈಗ ಎಲೆಕ್ಟ್ರಿಕ್ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ. ಫೇಮ್-2 ನೀತಿಯ ಪ್ರಯೋಜನಗಳಿಂದಾಗಿ, ಎಲೆಕ್ಟ್ರಿಕ್ ವಾಹನಗಳಾದ ಬಸ್ಸುಗಳು, ಟ್ರಕ್ ಗಳು ಮತ್ತು ಟ್ಯಾಕ್ಸಿಗಳನ್ನು ಇಂದು ವಾಣಿಜ್ಯ ವಲಯದಲ್ಲಿ ಉತ್ತೇಜಿಸಲಾಗುತ್ತಿದೆ.

ಮಹಾರಾಷ್ಟ್ರದ ಪುಣೆ ನಿವಾಸಿ ಸಾಕೇತ್, ಕಾರು ಖರೀದಿಸಲು ನಿರ್ಧರಿಸಿದಾಗ, ಪೆಟ್ರೋಲ್ ಕಾರು ಖರೀದಿಸಬೇಕೆ ಅಥವಾ ಡೀಸೆಲ್ ಮಾದರಿಯನ್ನು ಖರೀದಿಸಬೇಕೆ ಎಂದು ಯೋಚಿಸಿದರು. ಎಲೆಕ್ಟ್ರಿಕ್ ಕಾರು ದುಬಾರಿಯಾಗುತ್ತದೆ ಮತ್ತು ಹೀಗಾಗಿ ತನ್ನ ಬಜೆಟ್‌ನ ಆಚೆಗಿದೆ ಎಂದು ಅವರು ತರ್ಕಿಸಿದರು. ಆದಾಗ್ಯೂ, ಫೇಮ್ ಇಂಡಿಯಾ ಯೋಜನೆಯ ಸಹಾಯದಿಂದ, ಅವರು ಕಾರಿನ ವೆಚ್ಚದಲ್ಲಿ ಸುಮಾರು 1.2 ಲಕ್ಷ ರೂ.ಗಳನ್ನು ಉಳಿಸಲು ಸಾಧ್ಯವಾಯಿತು. ಈ ಯೋಜನೆಯ ಸಹಾಯದಿಂದ ಸಾಕೇತ್ ಪರಿಸರ ಸ್ನೇಹಿ ಎಲೆಕ್ಟ್ರಿಕ್ ವಾಹನವನ್ನು ಖರೀದಿಸಲು ಸಾಧ್ಯವಾಯಿತು. ಪರಿಸರವನ್ನು ಸ್ವಚ್ಛವಾಗಿ ಮತ್ತು ಸುರಕ್ಷಿತವಾಗಿಡುವುದು ಈ ಹೊತ್ತಿನ ಅಗತ್ಯವಾಗಿದೆ. ಏಕೆಂದರೆ ಸ್ವಚ್ಛ ಪರಿಸರವು ಆರೋಗ್ಯಕರ ಜೀವನಶೈಲಿಗೆ ಅಡಿಪಾಯವಾಗಿದೆ. ರಸ್ತೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳಿಂದ ಹೊರಬರುವ ಹೊಗೆಯಿಂದಾಗಿ ಸಾಕಷ್ಟು ಮಾಲಿನ್ಯವಾಗುತ್ತಿದೆ, ಇದು ನಮ್ಮ ಆರೋಗ್ಯಕ್ಕೆ ಹೆಚ್ಚಿನ ಹಾನಿ ಉಂಟುಮಾಡುತ್ತದೆ. ಅಷ್ಟೇ ಅಲ್ಲ, ಕಳೆದ ದಶಕದಲ್ಲಿ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ನಿಂದ ಚಲಿಸುವ ವಾಹನಗಳ ಸಂಖ್ಯೆ ತ್ವರಿತವಾಗಿ ಹೆಚ್ಚಾಗಿದೆ, ಮತ್ತು ದೇಶವು ತನ್ನ ತೈಲ ಅವಶ್ಯಕತೆಗಳಲ್ಲಿ ಸುಮಾರು 83 ಪ್ರತಿಶತವನ್ನು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ ಚಾಲಿತ ವಾಹನಗಳ ಸಂಖ್ಯೆ, ಹೆಚ್ಚುತ್ತಿರುವ ತೈಲ ಬಳಕೆ ಮತ್ತು ಅದರಿಂದ

# ಎಲೆಕ್ಟ್ರಿಕ್ ವಾಹನ ಹೆಚ್ಚಳಕ್ಕೆ ಕ್ರಮ

- ದೇಶದಲ್ಲಿ ಬ್ಯಾಟರಿ ಬೆಲೆಗಳನ್ನು ತಗ್ಗಿಸುವ ಸಲುವಾಗಿ ದೇಶೀಯವಾಗಿ ಉತ್ಪಾದಿಸುವ ಸುಧಾರಿತ ರಸಾಯನ ಶಾಸ್ತ್ರ ಕೋಶಗಳಿಗೆ (ಎಸಿಸಿ) ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹಕ (ಪಿಎಲ್ಐ) ಯೋಜನೆಗೆ ಮೇ 12, 2021 ರಂದು ಸರ್ಕಾರ ಅನುಮೋದನೆ ನೀಡಿತು. ಬ್ಯಾಟರಿ ಬೆಲೆ ಇಳಿಕೆಯಿಂದ ಎಲೆಕ್ಟ್ರಿಕ್ ವಾಹನಗಳ ವೆಚ್ಚ ಕಡಿಮೆಯಾಗಲಿದೆ.
- ಎಲೆಕ್ಟ್ರಿಕ್ ವಾಹನಗಳನ್ನು ವಾಹನಗಳು ಮತ್ತು ವಾಹನ ಘಟಕಗಳಿಗೆ ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹಕ (ಪಿಎಲ್ಐ) ಯೋಜನೆಯಡಿ ಸೆಪ್ಟೆಂಬರ್ 15, 2021 ರಂದು 25,938 ಕೋಟಿ ರೂ. ಬಜೆಟ್ ಬೆಂಬಲದೊಂದಿಗೆ ಐದು ವರ್ಷಗಳ ಅವಧಿಗೆ ಅನುಮೋದಿಸಲಾಗಿದೆ,
- ಎಲೆಕ್ಟ್ರಿಕ್ ವಾಹನಗಳ ಮೇಲಿನ ಜಿಎಸ್ಟಿ ದರವನ್ನು ಶೇ.12ರಿಂದ ಶೇ.5ಕ್ಕೆ ಇಳಿಸಲಾಗಿದ್ದು, ಎಲೆಕ್ಟ್ರಿಕ್ ವಾಹನಗಳ ಚಾರ್ಜರ್/ಚಾರ್ಜಿಂಗ್ ಕೇಂದ್ರಗಳ ದರವನ್ನು ಶೇ.18ರಿಂದ ಶೇ.5ಕ್ಕೆ ಇಳಿಸಲಾಗಿದೆ.
- ಬ್ಯಾಟರಿ ಚಾಲಿತ ವಾಹನಗಳಿಗೆ ಹಸಿರು ಪರವಾನಗಿ ಫಲಕಗಳನ್ನು ನೀಡಲಾಗುವುದು ಮತ್ತು ಪರವಾನಗಿ ಅವಶ್ಯಕತೆಗಳಿಂದ ವಿನಾಯಿತಿ ನೀಡಲಾಗುವುದು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.
- ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಅಧಿಸೂಚನೆಯನ್ನು ಹೊರಡಿಸಿ, ಎಲೆಕ್ಟ್ರಿಕ್ ವಾಹನಗಳಿಗೆ ರಸ್ತೆ ತೆರಿಗೆ ಪಾವತಿಸುವುದರಿಂದ ವಿನಾಯಿತಿ ನೀಡುವಂತೆ ರಾಜ್ಯಗಳಿಗೆ ಸಲಹೆ ನೀಡಿದೆ. ಇದು ಎಲೆಕ್ಟ್ರಿಕ್ ವಾಹನಗಳ ಆರಂಭಿಕ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಬಜೆಟ್**

- ಇ-ವಾಹನಗಳನ್ನು ಉತ್ತೇಜಿಸಲು ಬ್ಯಾಟರಿ ವಿನಿಮಯ ನೀತಿಯನ್ನು ಘೋಷಿಸಲಾಗಿದೆ.
- **ಫೇಮ್ ಇಂಡಿಯಾ-1 50 ದಶಲಕ್ಷ ಲೀಟರ್ ಇಂಧನವನ್ನು ಉಳಿಸಿದೆ.**

ಇಂದು ರಸ್ತೆಗಳಲ್ಲಿ ಸುಮಾರು

**9,66,363**

ಎಲೆಕ್ಟ್ರಿಕ್ ವಾಹನಗಳಿವೆ

ದೇಶಾದ್ಯಂತ ರಸ್ತೆಗಳಲ್ಲಿ ಪ್ರಸ್ತುತ **9,66,363** ಎಲೆಕ್ಟ್ರಿಕ್ ವಾಹನಗಳಿವೆ. ಈ ವಿವರಗಳು ಕೇಂದ್ರೀಕೃತ ವಾಹನ್-4 ಗೆ ಅನುಗುಣವಾದ ಡಿಜಿಟಲೀಕರಣಗೊಂಡ ವಾಹನ ದಾಖಲೆಗಳಾಗಿದ್ದು, ಆಂಧ್ರಪ್ರದೇಶ, ಮಧ್ಯಪ್ರದೇಶ, ತೆಲಂಗಾಣ ಮತ್ತು ಲಕ್ಷದ್ವೀಪದ ದತ್ತಾಂಶಗಳು ಅದರಲ್ಲಿಲ್ಲ, ಕಾರಣ ಇವು ಕೇಂದ್ರೀಕೃತ ವಾಹನ್ -4ರಲ್ಲಿಲ್ಲ. (31-01-2022 ರಲ್ಲಿದ್ದಂತೆ ವಿದ್ಯುತ್ ವಾಹನಗಳ ಸಂಖ್ಯೆ)

18,000ದಿಂದ 3ಲಕ್ಷ ರೂ.ವರೆಗೆ ಫೇಮ್ ಇಂಡಿಯಾ ಯೋಜನೆಯಡಿ ಇ-ವಾಹನಗಳ ಮೇಲೆ ಸಬ್ಸಿಡಿ ನೀಡಲಾಗುತ್ತಿದೆ.

## ಒಟ್ಟು 10,000 ಕೋಟಿ ರೂ. ಬಜೆಟ್ ಬೆಂಬಲ ಪಡೆದ ಫೇಮ್-2

- ಫೇಮ್ ಇಂಡಿಯಾ ಯೋಜನೆಯ ಎರಡನೇ ಹಂತವನ್ನು ಪ್ರಸ್ತುತ ಏಪ್ರಿಲ್ 1, 2019 ರಿಂದ ಐದು ವರ್ಷಗಳ ಅವಧಿಗೆ ಒಟ್ಟು ಬಜೆಟ್ ಬೆಂಬಲ 10,000 ಕೋಟಿ ರೂ.ಗಳೊಂದಿಗೆ ಜಾರಿಗೆ ತರಲಾಗುತ್ತಿದೆ.
- ಬೃಹತ್ ಕೈಗಾರಿಕಾ ಸಚಿವಾಲಯವು ಫೆಬ್ರವರಿ 1, 2022 ರವರೆಗೆ ಫೇಮ್ ಇಂಡಿಯಾ ಯೋಜನೆಯ 2ನೇ ಹಂತದ ಅಡಿಯಲ್ಲಿ ಸುಮಾರು 827 ಕೋಟಿ ರೂ.ಗಳ ಬೇಡಿಕೆ ಪ್ರೋತ್ಸಾಹಕಗಳ ಮೂಲಕ 2,31,257 ಎಲೆಕ್ಟ್ರಿಕ್ ವಾಹನಗಳನ್ನು ಬೆಂಬಲಿಸಿದೆ.
- ಫೇಮ್ ಇಂಡಿಯಾ ಯೋಜನೆಯ 2ನೇ ಹಂತದ ಅಡಿಯಲ್ಲಿ, ಸಚಿವಾಲಯವು 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 68 ನಗರಗಳಲ್ಲಿ 2877 ಚಾರ್ಜಿಂಗ್ ಕೇಂದ್ರಗಳಿಗೆ ಅನುಮೋದನೆ ನೀಡಿದೆ.
- 2ನೇ ಹಂತದ 7090 ಇ-ಬಸ್ ಗಳು, 5 ಲಕ್ಷ ಇ- ತ್ರಿಚಕ್ರ ವಾಹನಗಳು, 55,000 ಇ-ನಾಲ್ಕು ಚಕ್ರದ ಪ್ರಯಾಣಿಕರ ಕಾರುಗಳು ಮತ್ತು 10 ಲಕ್ಷ ಇ-ದ್ವಿಚಕ್ರ ವಾಹನಗಳಿಗೆ ಬೇಡಿಕೆಯನ್ನು ಉತ್ತೇಜಿಸುವ ಮೂಲಕ ನೆರವು ನೀಡುವ ಗುರಿಯನ್ನು ಹೊಂದಿದೆ. ಇದಲ್ಲದೆ, ಚಾರ್ಜಿಂಗ್ ಮೂಲಸೌಕರ್ಯದ ಅಭಿವೃದ್ಧಿಗೆ ಈ ಯೋಜನೆಯಿಂದ ಬೆಂಬಲ ನೀಡಲಾಗುವುದು.
- ಫೇಮ್ ಇಂಡಿಯಾ ಯೋಜನೆಯ (ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ವೇಗದ ಅಳವಡಿಕೆ ಮತ್ತು ಉತ್ಪಾದನೆ) ಎರಡನೇ ಹಂತವು ಸಾರ್ವಜನಿಕ ಮತ್ತು ಹಂಚಿಕೆಯ ಸಾರಿಗೆ ವಿಧಾನಗಳನ್ನು ವಿದ್ಯುದ್ದೀಕರಿಸುವ ಬಗ್ಗೆ ಕೇಂದ್ರೀಕರಿಸುತ್ತದೆ.
- ಸುಮಾರು 158 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಪರೀಕ್ಷಾ ಮೂಲಸೌಕರ್ಯ ಸ್ಥಾಪನೆ, ವಿದ್ಯುದ್ದೀಕರಣಗೊಂಡ ಸಾರಿಗೆ, ಬ್ಯಾಟರಿ ಎಂಜಿನಿಯರಿಂಗ್, ಇತ್ಯಾದಿಗಳಲ್ಲಿ ಸುಧಾರಿತ ಸಂಶೋಧನೆಗಾಗಿ 'ಉತ್ಕೃಷ್ಟತೆಯ ಕೇಂದ್ರ' ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ.

ಉಂಟಾಗುವ ಮಾಲಿನ್ಯ ಮತ್ತು ಹಾನಿಯನ್ನು ತಗ್ಗಿಸುವ ಸಲುವಾಗಿ ಕೇಂದ್ರ ಸರ್ಕಾರವು ಫೇಮ್ ಇಂಡಿಯಾ ಯೋಜನೆಯನ್ನು 1 ಏಪ್ರಿಲ್ 2015 ರಂದು ಪ್ರಾರಂಭಿಸಿತು. ಈ ಯೋಜನೆಯ ಯಶಸ್ಸಿನ ಹಿನ್ನೆಲೆಯಲ್ಲಿ, ಫೇಮ್ ಎರಡನೇ ಹಂತವನ್ನು 1 ಏಪ್ರಿಲ್ 2019 ರಂದು ಪ್ರಾರಂಭಿಸಲಾಯಿತು. ಆರಂಭದಲ್ಲಿ, ಎರಡನೇ ಹಂತದ ಕಾಲಾವಧಿಯನ್ನು ಮೂರು ವರ್ಷಗಳು ಎಂದು ನಿಗದಿಪಡಿಸಲಾಗಿತ್ತು, ಇದು ಮಾರ್ಚ್ 31, 2022 ರಂದು ಕೊನೆಗೊಂಡಿತು, ಆದರೆ ನಂತರ ಯೋಜನೆಯ ಎರಡನೇ ಹಂತವನ್ನು ಮಾರ್ಚ್ 31, 2024 ರವರೆಗೆ ಎರಡು ವರ್ಷಗಳಿಗೆ ವಿಸ್ತರಿಸಲು ನಿರ್ಧರಿಸಲಾಯಿತು. ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ಮತ್ತು ಬಳಕೆಯನ್ನು ಉತ್ತೇಜಿಸಲು ಫೇಮ್ ಇಂಡಿಯಾ ಯೋಜನೆಯ ಎರಡನೇ ಹಂತವು (ಎಲೆಕ್ಟ್ರಿಕ್ ವಾಹನಗಳ ತ್ವರಿತ ಉತ್ಪಾದನೆ ಮತ್ತು ಬಳಕೆ) ಸಾರ್ವಜನಿಕ ಮತ್ತು ಹಂಚಿಕೆಯ ಸಾರಿಗೆ ವಿಧಾನಗಳನ್ನು ವಿದ್ಯುದ್ದೀಕರಿಸುವತ್ತ ಗಮನ ಹರಿಸುತ್ತದೆ. ಇದಲ್ಲದೆ, ಈ ಯೋಜನೆಯಡಿ ಸಾರ್ವಜನಿಕ ಸಾರಿಗೆಗಾಗಿ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸುವವರು ಮತ್ತು ಖರೀದಿಸುವವರಿಗೆ ಪ್ರೋತ್ಸಾಹಕಗಳನ್ನು ಒದಗಿಸಲಾಗುತ್ತದೆ. ಫೇಮ್ ಇಂಡಿಯಾ ಯೋಜನೆಯಡಿ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸುವುದರಿಂದ ದೇಶದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ, ಏಕೆಂದರೆ ವಾಹನ ಉದ್ಯಮವು ಪ್ರತಿ ಟ್ರಕ್ ಗೆ 13 ಜನರನ್ನು, ಪ್ರತಿ ಕಾರಿಗೆ 6 ಜನರನ್ನು, ಪ್ರತಿ ತ್ರಿಚಕ್ರ ವಾಹನಕ್ಕೆ ನಾಲ್ಕು ಜನರನ್ನು ಮತ್ತು ಪ್ರತಿ ದ್ವಿಚಕ್ರ ವಾಹನಕ್ಕೆ ಒಬ್ಬ ವ್ಯಕ್ತಿಯನ್ನು ನೇಮಿಸಿಕೊಂಡಿದೆ ಎಂದು ಭಾರತೀಯ ಆಟೋಮೊಬೈಲ್ ತಯಾರಕರ ಸೊಸೈಟಿ (ಸೊಸೈಟಿ ಆಫ್ ಆಟೋಮೊಬೈಲ್ ಮ್ಯಾನುಫ್ಯಾಕ್ಚರರ್ಸ್ ಆಫ್ ಇಂಡಿಯಾ - ಎಸ್ಐಎಎಂ) ವರದಿ ಮಾಡಿದೆ. ■

# ಇ-ನಾಮ್: ಒಂದು ರಾಷ್ಟ್ರ ಒಂದು ಮಾರುಕಟ್ಟೆ ಪರಿಕಲ್ಪನೆಗೆ ಉತ್ತೇಜನ

ಎಲ್ಲಾ ರೈತರಿಗೆ ಆನ್ ಲೈನ್ ವ್ಯಾಪಾರದ ಪ್ರಯೋಜನವನ್ನು ಒದಗಿಸುವ ಮತ್ತು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ವಿಧಾನವನ್ನು ಬದಲಾಯಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಇ-ನಾಮ್ ವೇದಿಕೆ ರೈತರಲ್ಲಿ ಬಹಳ ಜನಪ್ರಿಯವಾಗುತ್ತಿದೆ. ಕೃಷಿ ಉತ್ಪನ್ನಗಳ ಈ ಆನ್ ಲೈನ್ ವ್ಯಾಪಾರ ವೇದಿಕೆ ರೈತರಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಪಾರದರ್ಶಕ ರೀತಿಯಲ್ಲಿ ಸ್ಪರ್ಧಾತ್ಮಕ ಮತ್ತು ಲಾಭದಾಯಕ ಬೆಲೆಗಳನ್ನು ಪಡೆಯಲು ಅನುವು ಮಾಡಿಕೊಟ್ಟಿದೆ, ಆ ಮೂಲಕ ಅವರ ಆದಾಯವನ್ನು ಹೆಚ್ಚಿಸಿದೆ ಮತ್ತು ಅವರಿಗೆ ಅಪಾರ ಪ್ರಯೋಜನಗಳನ್ನು ಒದಗಿಸಿದೆ. ಅದರೊಂದಿಗೆ, ಗುಣಮಟ್ಟಕ್ಕೆ ಅನುಗುಣವಾದ ಬೆಲೆಯ ಸಾಕಾರಕ್ಕೆ ಮತ್ತು ಕೃಷಿ ಉತ್ಪನ್ನಗಳಿಗೆ "ಒಂದು ರಾಷ್ಟ್ರ ಒಂದು ಮಾರುಕಟ್ಟೆ" ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ಒತ್ತು ನೀಡಲಾಗಿದೆ.

ತೆಲಂಗಾಣದ ನಿಜಾಮಾಬಾದ್ ಜಿಲ್ಲೆಯ ಗ್ರಾಮವೊಂದರಲ್ಲಿ ವಾಸಿಸುತ್ತಿರುವ 45 ವರ್ಷದ ಮುಕ್ಕು ವಿದ್ಯಾಸಾಗರ್ ಅವರು 7 ಎಕರೆ ಭೂಮಿಯನ್ನು ಹೊಂದಿದ್ದಾರೆ ಮತ್ತು ಕೃಷಿ ಮತ್ತು ಕೃಷಿ ವ್ಯವಹಾರದಲ್ಲಿ 20 ವರ್ಷಗಳ ಅನುಭವ ಹೊಂದಿದ್ದಾರೆ. ಅವರು ಭತ್ತ, ಮೆಕ್ಕೆಜೋಳ ಮತ್ತು ಸೋಯಾಬೀನ್ ಬೆಳೆಯುತ್ತಾರೆ ಈಗ ಅವರು ಇ-ನಾಮ್ ಪೋರ್ಟಲ್ ಗೆ ಸೇರಿದ್ದಾರೆ. ಅವರು ನೇರ ಖರೀದಿ ಮತ್ತು ಮಾರಾಟದಿಂದ ಉತ್ತಮ ಲಾಭವನ್ನು ಗಳಿಸುತ್ತಿದ್ದು, 24 ಗಂಟೆಗಳಲ್ಲಿ ತಮ್ಮ ಉತ್ಪನ್ನಗಳಿಗೆ ಪಾವತಿಯನ್ನು ಪಡೆಯುತ್ತಾರೆ.

ವಿದ್ಯಾಸಾಗರ್ ಸಂತೋಷದಿಂದ ಹೀಗೆ ಹೇಳುತ್ತಾರೆ, "ಬೆಳೆ ಮಾರಾಟವಾದ ದಿನವೇ ಹಣವನ್ನು ಸ್ವೀಕರಿಸಲಾಗುತ್ತದೆ, ಈ ಅನುಭವ ಎಂದಿಗೂ ಇರಲಿಲ್ಲ." ಇದಕ್ಕಾಗಿ ಅವರು ಇ-ನಾಮ್ ಮತ್ತು ಜಿಲ್ಲಾಡಳಿತಕ್ಕೆ ಧನ್ಯವಾದ ಅರ್ಪಿಸುತ್ತಾರೆ. ಅದೇ ರೀತಿ, ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ದುಗ್ಗೀರಲಾ ಗ್ರಾಮ ಸಹ ಮೇ 2017 ರಲ್ಲಿ ಇ-ನಾಮ್ ವೇದಿಕೆಗೆ ಸೇರಿತು. ಕಾರ್ಯಕ್ರಮದ ಎರಡನೇ ಹಂತದಲ್ಲಿ ಇ-ನಾಮ್ ಅಡಿಯಲ್ಲಿ ಒಳಗೊಳ್ಳಬೇಕಾದ ಆಂಧ್ರಪ್ರದೇಶದ 10 ಮಂಡಿಗಳಲ್ಲಿ ಇದು ಒಂದಾಗಿತ್ತು. ಈ ಮಂಡಿಯಲ್ಲಿ ಆನ್ ಲೈನ್ ಹರಾಜನ್ನು ಪ್ರತಿದಿನ ಬೆಳಗ್ಗೆ 9.30 ರಿಂದ 11.00 ಗಂಟೆ ವರೆಗೆ ಮಾಡಲಾಗುತ್ತದೆ.

ಇ-ನ್ಯಾಮ್ ಸೇರಿದ ನಂತರ ಈ ಮಂಡಿ ಸಂಪೂರ್ಣವಾಗಿ ಬದಲಾಗಿದ್ದು, ಇದು ರೈತರಿಗೆ ಪ್ರಯೋಜನಕಾರಿಯಾಗಿದೆ. ಇಂದು, ದೇಶದಲ್ಲಿ ರೈತರ ಆದಾಯವು ಹೆಚ್ಚುತ್ತಿದ್ದರೆ, ಅವರು ಯಾವುದೇ ತೊಂದರೆ ಮತ್ತು ತೊಡಕಿಲ್ಲದೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರೆ, ಅದು ಆರಂಭದಲ್ಲಿ 8 ರಾಜ್ಯಗಳಲ್ಲಿ 21 ಮಂಡಿಗಳನ್ನು ಸಂಯೋಜಿಸುವ ಮೂಲಕ 14 ಏಪ್ರಿಲ್ 2016 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಪ್ರಾರಂಭಿಸಲಾದ ಇ-ನಾಮ್ ನಿಂದಾಗಿ ಸಾಧ್ಯವಾಗಿದೆ. ಇ-ನಾಮ್ ನ ಪ್ರಮುಖ ಗುರಿಗಳಲ್ಲಿ ಒಂದೆಂದರೆ ರೈತರನ್ನು ಮಧ್ಯವರ್ತಿಗಳಿಂದ ರಕ್ಷಿಸುವುದಾಗಿದೆ ಮತ್ತು ನೇರ ಖರೀದಿ ಮತ್ತು ಮಾರಾಟ ಸೌಲಭ್ಯಗಳನ್ನು ಸುಗಮಗೊಳಿಸಲು



ಒಟ್ಟು ಮಂಡಿಗಳು
**1,000**

ಒಳಗೊಂಡ ರಾಜ್ಯಗಳು
**21**

ನೋಂದಾಯಿತ ರೈತರು
**1,72,89,499**

ನೋಂದಾಯಿತ ವ್ಯಾಪಾರಿಗಳು
**2,19,639**

ಎಫ್‌ಪಿಒಗಳು
**2,083**

ಸಮಗ್ರ ಪರವಾನಗಿಗಳು
**1,03,134**

ಮಾರ್ಚ್ 8, 2022 ರ ಅಂಕಿ-ಅಂಶಗಳು

## ಇ-ನಾಮ್ ಅನ್ನು 14 ನೇ ಏಪ್ರಿಲ್ 2016 ರಂದು ಪ್ರಾರಂಭಿಸಲಾಯಿತು

### ನೋಂದಣಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2016ರ ಏಪ್ರಿಲ್ 14ರಂದು 8 ರಾಜ್ಯಗಳಲ್ಲಿ 21 ಮಂಡಿಗಳನ್ನು ಸಂಯೋಜಿಸುವ ಮೂಲಕ ಇ-ನಾಮ್ ಗೆ ಚಾಲನೆ ನೀಡಿದರು.
- ಇ-ನಾಮ್ ಪೋರ್ಟಲ್ ನಲ್ಲಿ ನೋಂದಣಿ ರೈತರಿಗೆ ಉಚಿತವಾಗಿದೆ.

### ಆನ್ ಲೈನ್ ಮಾರಾಟ

- ರೈತರು ತಮ್ಮ ಉತ್ಪನ್ನಗಳ ವಿವರಗಳನ್ನು ಆನ್ ಲೈನ್ ನಲ್ಲಿ ಎಲ್ಲಾ ಇ-ನಾಮ್ ಮಂಡಿಗಳ ವ್ಯಾಪಾರಿಗಳಿಗಾಗಿ ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಬಹುದು ಮತ್ತು ವ್ಯಾಪಾರಿಗಳು ಯಾವುದೇ ಸ್ಥಳದಿಂದ ಇ-ನಾಮ್ ನಲ್ಲಿ ಖರೀದಿಸಲು ಲಭ್ಯವಿರುವ ಲಾಟ್ ಗಳನ್ನು ಬಿಡ್ ಮಾಡಬಹುದು.

### ಎಲೆಕ್ಟ್ರಾನಿಕ್ ಮಾಪಕಗಳು

- ತೂಕದಲ್ಲಿ ಪಾರದರ್ಶಕತೆಯನ್ನು ತರಲು ಇ-ನಾಮ್ ವೇದಿಕೆಯಲ್ಲಿ ಬಿಡ್ ಮಾಡಿದ ನಂತರ ರೈತರ ಸರಕುಗಳನ್ನು ನಿಖರವಾಗಿ ತೂಕ ಮಾಡಲು ಎಲೆಕ್ಟ್ರಾನಿಕ್ ತೂಕದ ಮಾಪಕಗಳನ್ನು ಒದಗಿಸಲಾಗಿದೆ, ಈಗ ವ್ಯಾಪಾರಿಗಳು ರೈತರಿಗೆ ಪಾವತಿಯನ್ನು ಭೀಮ್ ಪಾವತಿ ಸೌಲಭ್ಯವನ್ನು ಬಳಸಿಕೊಂಡು ಮೊಬೈಲ್ ಫೋನ್ ಮೂಲಕ ಮಾಡಬಹುದು.

### ಇ-ನಾಮ್ ನಿಂದ ರೈತರಿಗಾಗುವ ಪ್ರಯೋಜನಗಳು

- ರೈತರು ಮತ್ತು ಖರೀದಿದಾರರ ನಡುವೆ ಮಧ್ಯವರ್ತಿ ಇರುವುದಿಲ್ಲ. ರೈತರಷ್ಟೇ ಅಲ್ಲದೆ, ಇದು ಗ್ರಾಹಕರಿಗೂ ಪ್ರಯೋಜನಕಾರಿಯಾಗಲಿದೆ.
- ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯುತ್ತಾರೆ. ಇದು ಅವರ ಉತ್ಪನ್ನಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಹೋಗುವ ಸಮಯವನ್ನು ಉಳಿಸುತ್ತದೆ.
- ರೈತರು ತಮ್ಮ ಲಾಟ್ ಗಾಗಿ ಬಿಡ್ ಗಳ ಪ್ರಗತಿಯನ್ನು ಮೊಬೈಲ್ ಮೂಲಕ ನೋಡಬಹುದು ಮತ್ತು ರೈತರು ಹತ್ತಿರದ ಮಂಡಿಗಳಲ್ಲಿ ಬೆಲೆಗಳ ಬಗ್ಗೆ ಸಕಾಲಿಕ ಮಾಹಿತಿಯನ್ನು ಸಹ ಪಡೆಯಬಹುದು.
- ರೈತರಿಗೆ ಪ್ರತಿ ಮಂಡಿಯ ಸಂಪೂರ್ಣ ಮಾಹಿತಿ ಸಕಾಲದಲ್ಲಿ ಸಿಗುತ್ತದೆ. ಉತ್ಪನ್ನಗಳ ಸರಿಯಾದ ಮಾರಾಟಕ್ಕೆ ಸೌಲಭ್ಯ ಒದಗಿಸುತ್ತದೆ.

> “ ಇ-ನಾಮ್ ಎಲ್ಲಾ ರೈತರಿಗೆ ಪ್ರಯೋಜನವನ್ನು ನೀಡುವ ಮತ್ತು ಅವರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ವಿಧಾನವನ್ನು ಬದಲಾಯಿಸುವ ಗುರಿಯನ್ನು ಹೊಂದಿದೆ. ಇ-ನಾಮ್ ನೊಂದಿಗೆ, ನಮ್ಮ ರೈತರು ಯಾವುದೇ ಹೆಚ್ಚುವರಿ ವೆಚ್ಚವನ್ನು ಭರಿಸದೆ ಪಾರದರ್ಶಕ ರೀತಿಯಲ್ಲಿ ಸ್ಪರ್ಧಾತ್ಮಕ ಬೆಲೆಗಳನ್ನು ಪಡೆಯುತ್ತಾರೆ.
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**

ಅವರಿಗೆ ವೇದಿಕೆಯನ್ನು ಒದಗಿಸುವುದಾಗಿದೆ, ಇದರಿಂದ ಅವರು ಗರಿಷ್ಠ ಲಾಭವನ್ನು ಗಳಿಸಬಹುದಾಗಿರುತ್ತದೆ.

ಅದೇ ಸಮಯದಲ್ಲಿ, ಅವರು ತಮ್ಮ ಬೆಳೆಗಳ ಮಾರಾಟಕ್ಕಾಗಿ ಯಾರನ್ನೂ ಅವಲಂಬಿಸಬೇಕಾಗಿರುವುದಿಲ್ಲ ಮತ್ತು ಖರೀದಿದಾರನು ದೇಶದ ಯಾವುದೇ ಭಾಗದಿಂದ ವ್ಯಾಪಾರ ಮಾಡಬಹುದು. ಇ-ನಾಮ್ ಭಾರತದಲ್ಲಿ ಕೃಷಿ ಸರಕುಗಳ ಆನ್ ಲೈನ್ ವ್ಯಾಪಾರ ವೇದಿಕೆಯಾಗಿದೆ. ಇ-ನಾಮ್ ಪೋರ್ಟಲ್ ನ ಮುಖ್ಯ ಉದ್ದೇಶವೆಂದರೆ ಭಾರತದಾದ್ಯಂತ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಒಂದೇ ಜಾಲಕ್ಕೆ ಜೋಡಿಸುವುದು ಮತ್ತು ವ್ಯಾಪಾರ ವಹಿವಾಟುಗಳಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರೀಯ ಮಟ್ಟದಲ್ಲಿ ಕೃಷಿ ಉತ್ಪಾದಕರಿಗೆ ಒಂದು ಮಾರುಕಟ್ಟೆಯನ್ನು ಒದಗಿಸುವುದಾಗಿದೆ. ರೈತರು ಗುಣಮಟ್ಟಕ್ಕೆ ಅನುಗುಣವಾಗಿ ಬೆಲೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಕೃಷಿ ಉತ್ಪನ್ನಗಳಿಗೆ “ಒಂದು ರಾಷ್ಟ್ರ, ಒಂದು ಮಾರುಕಟ್ಟೆ” ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವುದಾಗಿದೆ. ಪ್ರಸ್ತುತ ದೇಶದ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 1,000 ಮಂಡಿಗಳನ್ನು ಇ-ನಾಮ್ ನೊಂದಿಗೆ ಜೋಡಿಸಲಾಗಿದೆ. ಇ-ನಾಮ್ ನಂತಹ ನವೀನ ಉಪಕ್ರಮಗಳ ಮೂಲಕ ರೈತರ ಜೀವನ ಗುಣಮಟ್ಟವನ್ನು ಸುಧಾರಿಸಲು ಮತ್ತು ಅವರಿಗೆ ಸಮೃದ್ಧಿಯನ್ನು ತರಲು ಭಾರತ ಸರ್ಕಾರ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದೆ. ■




### 22 ತಿಂಗಳ ನಂತರ ಅತ್ಯಂತ ಕಡಿಮೆ ದೈನಂದಿನ ಪ್ರಕರಣಗಳು

# 12 ವರ್ಷ ಮತ್ತು ಮೇಲ್ಪಟ್ಟ ಮಕ್ಕಳು ಕೋವಿಡ್ ಲಸಿಕೆ ಪಡೆಯಲಿದ್ದಾರೆ

**ಜಾಗತಿಕ ಸಾಂಕ್ರಾಮಿಕ ಕೋವಿಡ್-19ರ ಮೂರನೇ ಅಲೆಯು ಭಾರತದಲ್ಲಿ ಮಸುಕಾಗುತ್ತಿದೆ, ಆದರೂ ಸರ್ಕಾರವು ಸಂಪೂರ್ಣವಾಗಿ ಸಿದ್ಧವಾಗಿದೆ ಮತ್ತು ದೇಶಾದ್ಯಂತ ಲಸಿಕೆ ವ್ಯಾಪ್ತಿಯನ್ನು ಹೆಚ್ಚಿಸಲು ಶ್ರಮಿಸುತ್ತಿದೆ. ಭಾರತವು ಸಾರ್ವತ್ರಿಕ ಲಸಿಕೆ ನೀಡಿಕೆಯ ಗುರಿಯನ್ನು ತ್ವರಿತವಾಗಿ ಸಮೀಪಿಸುತ್ತಿದೆ ಮತ್ತು ಮಕ್ಕಳಿಗೂ ಲಸಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ರಾಷ್ಟ್ರವ್ಯಾಪಿ ಲಸಿಕೆ ಅಭಿಯಾನದ ಭಾಗವಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸರ್ಕಾರ ಉಚಿತ ಕೋವಿಡ್ ಲಸಿಕೆಗಳನ್ನು ನೀಡುವುದನ್ನು ಮುಂದುವರಿಸಿದೆ, ಆದರೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪರಿಸ್ಥಿತಿಯ ಮೇಲ್ವಿಚಾರಣೆ ಮಾಡಲು ಪರಿಶೀಲನಾ ಸಭೆ ನಡೆಸುವುದನ್ನು ಮುಂದುವರಿಸಿದ್ದಾರೆ.**

ರಾಜಸ್ಥಾನದ ಜೋಧಪುರದ ಮರುಭೂಮಿ ಪ್ರದೇಶ- ಈ ಪ್ರದೇಶದ ಮಹಿಳಾ ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆಗಳನ್ನು ನೀಡಲು ತಮ್ಮ ಮನೆಗಳಿಂದ ನಡೆದು ಹೋಗಿ, ತಮ್ಮ ಗಮ್ಯಸ್ಥಾನವನ್ನು ತಲುಪುತ್ತಿದ್ದಾರೆ. ಗುರಿ ಎಷ್ಟೇ ಕಷ್ಟಕರವಾಗಿದ್ದರೂ, ಇಂದು ಭಾರತವು ಅದನ್ನು ಸಾಧಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಈ ಮನೋಭಾವವು ತೋರಿಸುತ್ತದೆ. ಕೋವಿಡ್ ಅವಧಿಯಲ್ಲಿ, ಈ ಆರೋಗ್ಯ ಕಾರ್ಯಕರ್ತರು ನದಿಗಳು, ಹಿಮ, ಪರ್ವತಗಳು ಅಥವಾ ಸುಡುವ ಮರುಭೂಮಿಗಳು ಅವರನ್ನು ತಡೆಯಲು ಸಾಧ್ಯವಿಲ್ಲ ಎಂದು ತೋರಿಸಿದ್ದಾರೆ. ಅವರ ಸಮರ್ಪಣಾ ಭಾವದಿಂದಾಗಿಯೇ ದೇಶವು ಈಗ 180 ಕೋಟಿ ಲಸಿಕೆಗಳ ಡೋಸ್ ಗಳನ್ನು ನೀಡಿದೆ. ಇದಲ್ಲದೆ, ಮಾರ್ಚ್ 16 ರಿಂದ, 12 ರಿಂದ 14 ವರ್ಷ ವಯಸ್ಸಿನ ಮಕ್ಕಳು ಕೋವಿಡ್ ಲಸಿಕೆಗೆ ಅರ್ಹರಾಗುತ್ತಾರೆ. ಇದಲ್ಲದೆ, 60 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಜನರೂ ಈಗ ಮುನ್ನೆಚ್ಚರಿಕೆ ಡೋಸ್ ಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಮಕ್ಕಳು ಸುರಕ್ಷಿತವಾಗಿದ್ದರೆ, ದೇಶ ಸುರಕ್ಷಿತವಾಗಿರುತ್ತದೆ ಎಂದು ಸರ್ಕಾರ ನಂಬಿದೆ. ಇದಕ್ಕಾಗಿಯೇ; ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಮಕ್ಕಳು ಮತ್ತು 60 ವರ್ಷಕ್ಕಿಂತ ಮೇಲ್ಪಟ್ಟ ಜನರನ್ನು ಹೊಂದಿರುವ ಕುಟುಂಬಗಳಿಗೆ ಲಸಿಕೆ ಪಡೆಯಲು ಪ್ರೋತ್ಸಾಹಿಸಿದ್ದಾರೆ. ಮತ್ತೊಂದೆಡೆ, ದೇಶದಲ್ಲಿ ಲಸಿಕೆ ನೀಡಿಕೆಯು ತನ್ನದೇ ಆದ ವೇಗದಲ್ಲಿ ನಡೆಯುತ್ತಿದೆ ಮತ್ತು ಮಾರ್ಚ್ 14, 2022 ರವರೆಗೆ, 15 ರಿಂದ 17 ವರ್ಷ ವಯಸ್ಸಿನ 5,58,92,605 ಹದಿಹರೆಯದವರಿಗೆ ಮೊದಲ ಡೋಸ್ ನೀಡಲಾಗಿದೆ, ಆದರೆ 3,38,83,880 ಹದಿಹರೆಯದವರಿಗೆ ಎರಡನೇ ಡೋಸ್ ನೀಡಲಾಗಿದೆ. ಮಾರ್ಚ್ 14ರವರೆಗೆ ಭಾರತದಲ್ಲಿ ಸಕ್ರಿಯ ಕೋವಿಡ್ ರೋಗಿಗಳ ಸಂಖ್ಯೆ 36,168 ಎಂದು ದಾಖಲಿಸಲಾಗಿದೆ, ಇದು 675 ದಿನಗಳ ನಂತರ ಭಾರತದಲ್ಲಿ ಕೋವಿಡ್ ನ ಅತ್ಯಂತ ಕಡಿಮೆ ಸಕ್ರಿಯ ಪ್ರಕರಣವಾಗಿದೆ. ಅದೇ ವೇಳೆ, 24 ಗಂಟೆಗಳಲ್ಲಿ 2,503 ಹೊಸ ಪ್ರಕರಣಗಳು ವರದಿಯಾಗಿವೆ, ಇದು ಕಳೆದ 680 ದಿನಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಾಗಿದೆ. ಚೇತರಿಕೆ ದರ ಶೇ.98.72 ಆಗಿದೆ.

> “ಲಸಿಕೆಯ ಬಗ್ಗೆ ತಪ್ಪು ಮಾಹಿತಿಯನ್ನು ಹರಡುವ ಯಾವುದೇ ಪ್ರಯತ್ನವನ್ನು ನಾವು ತಿರಸ್ಕರಿಸಬೇಕು. ಲಸಿಕೆಯ ಹೊರತಾಗಿಯೂ ಸೋಂಕು ಸಂಭವಿಸುತ್ತದೆ ಎಂದು ನಾವು ಅನೇಕ ಬಾರಿ ಕೇಳುತ್ತೇವೆ, ಹೀಗಾಗಿ ಅದರಿಂದ ಏನು ಪ್ರಯೋಜನ? ಮಾಸ್ಕ್ ಪರಿಣಾಮಕಾರಿಯಲ್ಲ ಎಂಬ ವದಂತಿಗಳೂ ಇವೆ. ಇಂತಹ ವದಂತಿಗಳನ್ನು ಹೋಗಲಾಡಿಸುವ ತುರ್ತು ಅಗತ್ಯವಿದೆ.
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**”

## ಮರಳಿದ ಮಾಮೂಲಿ ದಿನಗಳು: ಹೊದಿಕೆಗಳು ಮತ್ತು ರೈಲಿನೊಳಗಿನ ಪರದೆಗಳ ಬಳಕೆ ಮೇಲಿನ ನಿಷೇಧ ತೆಗೆದುಹಾಕಿದ ರೈಲ್ವೆ



ದೇಶಾದ್ಯಂತ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಪರಿಸ್ಥಿತಿಯಲ್ಲಿನ ನಿರಂತರ ಸುಧಾರಣೆಯಿಂದಾಗಿ, ವಸ್ತ್ರಗಳು, ಕಂಬಳಿಗಳು ಮತ್ತು ಒಳಾಂಗಣ ಪರದೆಗಳ ಮೇಲಿನ ನಿಷೇಧವನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಲು ರೈಲ್ವೆ ನಿರ್ಧರಿಸಿದೆ. ಈ ವಸ್ತುಗಳು ಈಗ ಕೋವಿಡ್ ಪೂರ್ವ ಅವಧಿಯಲ್ಲಿದ್ದಂತೆಯೇ ಲಭ್ಯವಾಗಲಿವೆ. ವಾಸ್ತವವಾಗಿ, ಕೋವಿಡ್-19 ರ ಪರಿಣಾಮವಾಗಿ ಸಾಂಕ್ರಾಮಿಕ ರೋಗ ಮತ್ತು ಕೋವಿಡ್ ಶಿಷ್ಟಾಚಾರದ ಹಿನ್ನೆಲೆಯಲ್ಲಿ, ರೈಲಿನಲ್ಲಿ ಪ್ರಯಾಣಿಕರ ಸಂಚಾರಕ್ಕೆ ಎಸ್‌ಒಪಿ (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಟೋಕಾಲ್) ಅನ್ನು ಹೊರಡಿಸಲಾಗಿತ್ತು, ಇದು ವಸ್ತ್ರಗಳು, ಹೊದಿಕೆಗಳು ಮತ್ತು ರೈಲಿನೊಳಗೆ ಪರದೆಗಳ ಬಳಕೆಯನ್ನು ನಿಷೇಧಿಸಿತ್ತು.

## ಎರಡು ವರ್ಷಗಳ ನಂತರ ಅಂತಾರಾಷ್ಟ್ರೀಯ ವಿಮಾನಗಳ ಮೇಲಿನ ನಿಷೇಧ ತೆಗೆದುಹಾಕಲಿರುವ ಭಾರತ

ಕೋವಿಡ್ ಪ್ರಕರಣಗಳ ಕುಸಿತದಿಂದಾಗಿ, ಎರಡು ವರ್ಷಗಳ ವಿರಾಮದ ನಂತರ ಮಾರ್ಚ್ 27, 2022 ರಿಂದ ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳ ಮರು ಕಾರ್ಯಾಚರಣೆಗೆ ಸರ್ಕಾರ ನಿರ್ಧರಿಸಿದೆ. ಜಾಗತಿಕ ಕೋವಿಡ್ ತಡೆಗಟ್ಟುವ ಲಸಿಕೆ ಅಭಿಯಾನಕ್ಕೆ ಮಾನ್ಯತೆ ನೀಡಿದ ನಂತರ ಮತ್ತು ಉದ್ಯಮ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ ತರುವಾಯ, ಸರ್ಕಾರ ಈ ನಿರ್ಧಾರ ಕೈಗೊಂಡಿತ್ತು. ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಮಾರ್ಚ್ 23, 2020 ರಂದು ಭಾರತಕ್ಕೆ ನಿಗದಿತ ಅಂತಾರಾಷ್ಟ್ರೀಯ ವಿಮಾನಗಳನ್ನು ಸ್ಥಗಿತಗೊಳಿಸಲು ಸರ್ಕಾರ ನಿರ್ಧರಿಸಿತು. ಆದಾಗ್ಯೂ, ವಿಶೇಷ ಅಂತಾರಾಷ್ಟ್ರೀಯ ವಿಮಾನಗಳು ಜುಲೈ 2020 ರಿಂದ, ಭಾರತ ಮತ್ತು 37 ದೇಶಗಳ ನಡುವೆ ಏರ್ ಬಬಲ್ ವ್ಯವಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಉದ್ಯಮದ ಬಾಧ್ಯಸ್ಥರೊಂದಿಗಿನ ಚರ್ಚೆ ಮತ್ತು ಹೊಸ ಕೋವಿಡ್ ವೈರಾಣು ಪ್ರಕರಣಗಳ ಇಳಿಕೆಯ ಆಧಾರದ ಮೇಲೆ, ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಮಾರ್ಚ್ 27, 2022ರಿಂದ ಅಂತಾರಾಷ್ಟ್ರೀಯ ವಿಮಾನ ಸೇವೆಗಳನ್ನು ಪುನರಾರಂಭಿಸಲು ನಿರ್ಧರಿಸಿದ್ದಾರೆ. ಈ ನಿರ್ಧಾರದ ಪರಿಣಾಮವಾಗಿ ಏರ್ ಬಬಲ್ ವ್ಯವಸ್ಥೆಯನ್ನು ಸಹ ತೆಗೆದುಹಾಕಲಾಗುತ್ತದೆ. ಆದಾಗ್ಯೂ, ಅಂತಾರಾಷ್ಟ್ರೀಯ ಪ್ರಯಾಣದ ವೇಳೆ ಕೋವಿಡ್ ತಡೆಗಟ್ಟಲು ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

## ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದ ಪ್ರಧಾನಮಂತ್ರಿ

ಮಾರ್ಚ್ 9 ರಂದು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕೋವಿಡ್-19 ಸಾಂಕ್ರಾಮಿಕ ರೋಗದ ಸ್ಥಿತಿಗತಿ, ವಿಶೇಷವಾಗಿ ಒಮಿಕ್ರಾನ್ ರೂಪಾಂತರ ಮತ್ತು ದೇಶದ ಲಸಿಕೆ ಅಭಿಯಾನದ ಪರಾಮರ್ಶೆಗಾಗಿ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಜಾಗತಿಕ ಸನ್ನಿವೇಶ ಮತ್ತು ಭಾರತದ ಕೋವಿಡ್-19 ಪರಿಸ್ಥಿತಿಯ ಬಗ್ಗೆ ವಿವರವಾದ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ಕೊರೊನಾದ ಹೊಸ ರೂಪಾಂತರಿಗಳ ಸಮಯದಲ್ಲಿ ಆಸ್ಪತ್ರೆ ಪ್ರಕರಣಗಳ ತೀವ್ರತೆ ಮತ್ತು ಮರಣವನ್ನು ತಗ್ಗಿಸಲು ವಿಷಯದಲ್ಲಿ ಭಾರತದ ಪ್ರಸ್ತುತ ಲಸಿಕೆ ಅಭಿಯಾನ ಮತ್ತು ಲಸಿಕೆ ಪರಿಣಾಮಕಾರಿತ್ವ ವಿಶ್ಲೇಷಣೆಗೆ ಒತ್ತು ನೀಡಲಾಯಿತು. ಸಭೆಯಲ್ಲಿ, ಕೇಂದ್ರ ಸರ್ಕಾರದ ಪೂರ್ವಭಾವಿ ಮತ್ತು ಸಹಯೋಗದ ಪ್ರಯತ್ನಗಳು ಸೋಂಕಿನ ಹರಡುವಿಕೆಯನ್ನು ನಿಯಂತ್ರಿಸಲು ಪರಿಣಾಮಕಾರಿ ನಿರ್ವಹಣೆಗೆ ಸಹಾಯ ಮಾಡಿದೆ ಎಂಬುದು ತಿಳಿದುಬಂತು. ವಿಶ್ವ ಆರೋಗ್ಯ ಸಂಸ್ಥೆ, ವಿಶ್ವಸಂಸ್ಥೆ, ಅಂತಾರಾಷ್ಟ್ರೀಯ ವಿತ್ತ ನಿಧಿ, ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ಮತ್ತು ಸ್ಪರ್ಧಾತ್ಮಕತೆಯ ಸಂಸ್ಥೆ ವರದಿಗಳಲ್ಲಿ ಭಾರತದ ಸಾಂಕ್ರಾಮಿಕ ಸ್ಪಂದನೆ ಮತ್ತು ಲಸಿಕೆ ಪ್ರಯತ್ನಗಳನ್ನು ಜಾಗತಿಕವಾಗಿ ಶ್ಲಾಘಿಸಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸಲಾಯಿತು. ಕೋವಿಡ್ ಶಿಷ್ಟಾಚಾರಗಳು ಮತ್ತು ಕೋವಿಡ್ ಸೂಕ್ತ ನಡವಳಿಕೆಗಳನ್ನು ಅನುಸರಿಸುವಂತೆ ಮತ್ತು ಸಮುದಾಯಕ್ಕೆ ಲಸಿಕೆ ಹಾಕುವಲ್ಲಿ ತಮ್ಮ ಬೆಂಬಲ ಮತ್ತು ವೈಯಕ್ತಿಕ ಪಾಲ್ಗೊಳ್ಳುವಿಕೆಯನ್ನು ಮುಂದುವರಿಸುವಂತೆ ಪ್ರಧಾನಮಂತ್ರಿಯವರು ಜನರನ್ನು ಆಗ್ರಹಿಸಿದರು.

### 12 ರಿಂದ 17 ವರ್ಷ ವಯಸ್ಸಿನ ಮಕ್ಕಳಿಗಾಗಿ ಕೋವೊವಾಕ್ಸ್ ಅನುಮೋದನೆ

ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಅಭಿವೃದ್ಧಿಪಡಿಸಿರುವ ಕೋವಿಡ್-19 ನಿಗ್ರಹ ಲಸಿಕೆಯಾದ ಕೊವೊವಾಕ್ಸ್ ಅನ್ನು ಭಾರತದ ಔಷಧ ಮಹಾ ನಿಯಂತ್ರಕರು ಸೀಮಿತ ತುರ್ತು ಬಳಕೆಗೆ ಅನುಮೋದಿಸಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ, ಈ ಲಸಿಕೆಯನ್ನು 12 ರಿಂದ 17 ವರ್ಷ ವಯಸ್ಸಿನ ಮಕ್ಕಳಿಗಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಇದು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಜನರಿಗೆ ಲಭ್ಯವಿರುವ ದೇಶದ ನಾಲ್ಕನೇ ಕೋವಿಡ್ ನಿಗ್ರಹ ಲಸಿಕೆಯಾಗಿದೆ. ಕೋವಿಡ್-19 ಕುರಿತ ತಜ್ಞರ ಸಮಿತಿಯ ಶಿಫಾರಸಿನ ಆಧಾರದ ಮೇಲೆ ತುರ್ತು ಪರಿಸ್ಥಿತಿಯಲ್ಲಿ ಕೊವಾಕ್ಸ್ ಬಳಕೆಗೆ ಭಾರತದ ಔಷಧ ಮಹಾ ನಿಯಂತ್ರಕರು (ಡಿಸಿಜಿಐ) ಅನುಮೋದನೆ ನೀಡಿದ್ದಾರೆ, ಆದರೆ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಲಸಿಕೆ ಹಾಕುವ ಬಗ್ಗೆ ಸರ್ಕಾರ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಏತನ್ಮಧ್ಯೆ, ಕೋವಿಡ್ ವಿರುದ್ಧ ರಕ್ಷಣೆಗಾಗಿ ಮೂಗಿನ ಮೂಲಕ ಹಾಕುವ ಲಸಿಕೆಯ ಬೂಸ್ಟರ್ ಡೋಸ್ ನ ಪ್ರಯೋಗವೂ ಫೆಬ್ರವರಿ 11ರಂದು ಏಮ್ಸ್ ನಲ್ಲಿ ಪ್ರಾರಂಭವಾಗಿದೆ. ಈ ಪ್ರಯೋಗವನ್ನು ಏಮ್ಸ್‌ನ ದೆಹಲಿ ಸೇರಿದಂತೆ ದೇಶಾದ್ಯಂತ ಒಂಬತ್ತು ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ. ಸುಮಾರು 100 ಜನರನ್ನು ಒಳಗೊಂಡಿರುವ ಪ್ರಯೋಗದಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಜನರನ್ನು ಮಾತ್ರ ಸೇರಿಸಲಾಗಿದೆ. ಇದಲ್ಲದೆ, ಎರಡೂ ಡೋಸ್ ಗಳನ್ನು ತೆಗೆದುಕೊಂಡ ಜನರು ಪ್ರಯೋಗದ ಭಾಗವಾಗುತ್ತಾರೆ. ■

Azadi Ka Amrit Mahotsav

# ಭಾರತದ ಸ್ವಾತಂತ್ರ್ಯದ ಯಾತ್ರಾಸ್ಥಳ

# ದಾಂಡಿ




**ಗುಜರಾತಿನ ನವಸಾರಿ ಜಿಲ್ಲೆಯಿಂದ 16 ಕಿಲೋ ಮೀಟರ್ ದೂರದಲ್ಲಿರುವ ದಾಂಡಿ ಭಾರತದ ಮನೆಮಾತಾದ ಗ್ರಾಮವಷ್ಟೇ ಅಲ್ಲ, 92 ವರ್ಷಗಳಷ್ಟು ಹಳೆಯದಾದ, ಎಂದಿಗೂ ಮಸುಕಾಗದ ಜಾಗತಿಕ ಹೆಗ್ಗುರುತನ್ನೂ ಹೊಂದಿದೆ. ಇದು ಭಾರತದ ಸ್ವಾತಂತ್ರ್ಯ ಚಳವಳಿಯ "ಯಾತ್ರಾಸ್ಥಳ", ಅಲ್ಲಿ ಬಾಪು ಕೇವಲ ಒಂದು ಹಿಡಿ ಉಪ್ಪನ್ನು ಕೈಯಲ್ಲಿ ಹಿಡಿದ ನಂತರ ಹೇಳಿದ್ದರು, "ಈ ಒಂದು ಹಿಡಿ ಉಪ್ಪಿನೊಂದಿಗೆ, ನಾನು ಬ್ರಿಟಿಷ್ ಆಡಳಿತದ ಬೇರುಗಳನ್ನು ಅಲುಗಾಡಿಸಲು ಆರಂಭಿಸಿದ್ದೇನೆ."**

ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ವಿಧಿಸುವ ಶಾಸನವನ್ನು ಜಾರಿಗೆ ತಂದಾಗ, ಬಾಪು ಅವರು ಅಹಿಂಸೆಯ ಮಾರ್ಗವನ್ನು ಅನುಸರಿಸಿ, ರಾಷ್ಟ್ರವ್ಯಾಪಿ ಉಪ್ಪಿನ ಸತ್ಯಾಗ್ರಹವನ್ನು ನಡೆಸಿದರು. ಅದನ್ನು ನಾವು ದಾಂಡಿ ಯಾತ್ರೆ ಅಥವಾ ನಾಗರಿಕ ಅಸಹಕಾರ ಚಳವಳಿ ಎಂದು ಕರೆಯುತ್ತೇವೆ. ಮಹಾತ್ಮಾ ಗಾಂಧಿ ಬ್ರಿಟಿಷ್ ಸರ್ಕಾರ ಹೇರಿದ ಉಪ್ಪಿನ ತೆರಿಗೆಯನ್ನು "ವಿಶ್ವದ ಅತ್ಯಂತ ಭಯಾನಕ ತೆರಿಗೆ" ಎಂದು ಉಲ್ಲೇಖಿಸಿದರು ಮತ್ತು ಅವರು ಕಾನೂನನ್ನು ಧಿಕ್ಕರಿಸಲು ನಿರ್ಧರಿಸಿದರು.

ಆ ಸಮಯದಲ್ಲಿ ಉಪ್ಪಿನ ಮೇಲಿನ ಬ್ರಿಟಿಷ್ ತೆರಿಗೆ ಅತ್ಯಂತ ಹೆಚ್ಚಾಗಿತ್ತು ಮತ್ತು ಅಸಮಂಜಸವಾಗಿತ್ತು. 1930ರ ಮಾರ್ಚ್ 11ರಂದು ಅಹ್ಮದಾಬಾದ್‌ನ ಸಾಬರಮತಿಯಲ್ಲಿ ಮರಳಿನ ಮೇಲೆ ಒಂದು ಸಂಜೆ ಪ್ರಾರ್ಥನೆಗಾಗಿ 10,000ಕ್ಕೂ ಹೆಚ್ಚು ಜನರ ಸಭೆ ಸೇರಿತ್ತು, ಅಲ್ಲಿ ಮಹಾತ್ಮಾ ಗಾಂಧಿ ಅವರು ತಮ್ಮ ಚಾರಿತ್ರಿಕ ಯಾತ್ರೆಯ ಮುನ್ನಾದಿನದಂದು ಐತಿಹಾಸಿಕ ಭಾಷಣ ಮಾಡಿದರು.




ಉಪ್ಪಿನ ಕಾನೂನು ಉಲ್ಲಂಘಿಸುವ ಮೂಲಕ ಬಾಪು ಬ್ರಿಟಿಷ್ ಆಡಳಿತವನ್ನು ಧಿಕ್ಕರಿಸಿದರು. ಈ ಯಾತ್ರೆಗಾಗಿ ಮಹಾತ್ಮಾ ಗಾಂಧಿಗೆ ಕುದುರೆಯನ್ನು ಸಹ ವ್ಯವಸ್ಥೆ ಮಾಡಲಾಗಿತ್ತು. ಈ ಯಾತ್ರೆಯುದ್ದಕ್ಕೂ ಗಾಂಧಿಯವರ ಕಾಲುಗಳಲ್ಲಿ ಬೊಬ್ಬೆಗಳು ಎದ್ದಿದ್ದವು, ಆದರೂ ಅವರು ಪಲ್ಲಕ್ಕಿಯನ್ನಾಗಲೀ ಕುದುರೆಯನ್ನಾಗಲೀ ಬಳಸಲಿಲ್ಲ.

ಈ ಯಾತ್ರೆಯಲ್ಲಿ ತಮ್ಮೊಂದಿಗೆ ಬರುವ ಕಾರ್ಯಕರ್ತರನ್ನು ಅವರು ಆಯ್ಕೆ ಮಾಡಿದ್ದರು, ಮತ್ತು ಅವರು ಪ್ರತಿಯೊಬ್ಬರನ್ನೂ ಸ್ವತಃ ಸಂದರ್ಶಿಸಿದ್ದರು. ಈ ವ್ಯಕ್ತಿಗಳಲ್ಲಿ ಅತ್ಯಂತ ಹಿರಿಯವರಾದವರು ಮಹಾತ್ಮಾ ಗಾಂಧಿ, ಆ ಸಮಯದಲ್ಲಿ ಅವರಿಗೆ 61 ವರ್ಷ ವಯಸ್ಸಾಗಿತ್ತು. ಆ ಸಮಯದಲ್ಲಿ 16 ವರ್ಷ ವಯಸ್ಸಿನ ವಿಠ್ಠಲ್ ಲೀಲಾಧರ್ ಠಕ್ಕರ್ ಯಾತ್ರೆಯ ಅತ್ಯಂತ ಕಿರಿಯ ಸದಸ್ಯರಾಗಿದ್ದರು. ಮಹಾತ್ಮಾ ಗಾಂಧಿ ದಾಂಡಿಗೆ ಬರುವ ಹೊತ್ತಿಗೆ, 50 ಸಾವಿರಕ್ಕೂ ಹೆಚ್ಚು ಜನರು ಈ ಅಹಿಂಸಾತ್ಮಕ ಉಪ್ಪಿನ ಸತ್ಯಾಗ್ರಹದಲ್ಲಿ ಸೇರಿದ್ದರು ಮತ್ತು ಯಾತ್ರೆಯ ಸಮಯದಲ್ಲಿ ಅವರು ಪ್ರತಿ ಸೋಮವಾರ ಮೌನವ್ರತ ಉಪವಾಸ ಆಚರಿಸುತ್ತಿದ್ದರು ಎಂದು ಹೇಳಲಾಗುತ್ತದೆ.

ಭಾರತದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ಮಹಾನ್ ಚೇತನಗಳಿಗೆ ಗೌರವ ಸಲ್ಲಿಸುವ ಸಲುವಾಗಿ 2021ರ ಮಾರ್ಚ್ 12ರಂದು ಬಾಪು ಅವರ ದಾಂಡಿ ಯಾತ್ರೆಯ 91ನೇ ವಾರ್ಷಿಕೋತ್ಸವದಂದು ದಾಂಡಿ ಯಾತ್ರೆಗೆ 80 ಜನರನ್ನು ಕಳುಹಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಐತಿಹಾಸಿಕ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂಚಿಕೆಯಲ್ಲಿ, ದಾಂಡಿ ಯಾತ್ರೆ ಮತ್ತು ಉಪ್ಪಿನ ಸತ್ಯಾಗ್ರಹಕ್ಕೆ ಸಂಬಂಧಿಸಿದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ನೀವೂ ಓದಿ.

## ‘ಹಿರಿಯ ಗಾಂಧಿ’ ಎಂದು ಪ್ರೀತಿಯಿಂದ ಕರೆಯಲಾದ ಮಾತಂಗಿನಿ ಹಾಜರಾ

**ಜನನ: 19 ಅಕ್ಟೋಬರ್ 1870, ನಿಧನ: 29 ಸೆಪ್ಟೆಂಬರ್ 1942**

ಮಾತಂಗಿನಿ ಹಾಜರಾ ನೈಜ ಗಾಂಧಿವಾದಿಯಾಗಿದ್ದರು. ಅವರು ನೂಲುವ ಚಕ್ರವನ್ನು ತೆಗೆದುಕೊಂಡು ನೂಲು ತೆಗೆಯಲು, ಖಾದಿ ಧರಿಸಲು ಪ್ರಾರಂಭಿಸಿದರು ಮತ್ತು ಹೃದಯಪೂರ್ವಕವಾಗಿ ಜನರ ಸೇವೆಯಲ್ಲಿ ತೊಡಗಿಸಿಕೊಂಡರು. ಮಹಿಳೆಯರ ಸ್ವಾಭಿಮಾನವನ್ನು ಜಾಗೃತಗೊಳಿಸಿದ ಮಾತಂಗಿನಿ ಸಾಮಾನ್ಯ ಜನರಲ್ಲಿ ಎಷ್ಟು ಜನಪ್ರಿಯರಾಗಿದ್ದರೆಂದರೆ ಅವರನ್ನು “ಹಿರಿಯ ಗಾಂಧಿ” ಎಂದು ಕರೆಯಲಾಗುತ್ತಿತ್ತು. ದೇಶಕ್ಕಾಗಿ ಮಡಿಯಲು ಯಾವುದೇ ವಯಸ್ಸು ಎಂಬುದಿಲ್ಲ ಎಂಬುದನ್ನು ಅವರು ಸಾಬೀತುಪಡಿಸಿದರು.

ಅದು 1930, ಮತ್ತು ಅವರ ಹಳ್ಳಿಯ ಕೆಲವು ಯುವಕರು ಚಳವಳಿಯಲ್ಲಿ ಭಾಗಿಯಾಗಿದ್ದರು. ಮಾತಂಗಿನಿ ಸ್ವಾತಂತ್ರ್ಯದ ಬಗ್ಗೆ ಕೇಳಿದ್ದು ಅದೇ ಮೊದಲು ಮತ್ತು ಬ್ರಿಟಿಷರು ತನ್ನ ದೇಶವನ್ನು ಹೇಗೆ ಆಳುತ್ತಿದ್ದಾರೆ ಎಂಬುದನ್ನು ನೋಡಿದರು. ಮಾತಂಗಿನಿ ಹಾಜರಾ ತಮ್ಮ 60ನೇ ವಯಸ್ಸಿನಲ್ಲಿ ಶಂಖುವಿನೊಂದಿಗೆ ಗುಡಿಸಿಲಿನಿಂದ ಹೊರಬಂದು, ನಾಗರಿಕ ಅಸಹಕಾರ ಚಳವಳಿಯ ಮೆರವಣಿಗೆಯನ್ನು ಸ್ವಾಗತಿಸಿದರು. ಸ್ವಾತಂತ್ರ್ಯ ಚಳವಳಿಯೊಂದಿಗೆ ಸೇರಿದರು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು.



ಅಷ್ಟೇ ಅಲ್ಲ, ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿ, ನಾಗರಿಕ ಅಸಹಕಾರ ಚಳವಳಿ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಗಳಲ್ಲಿ ಅವರು ಪ್ರಮುಖ ವ್ಯಕ್ತಿಯಾಗಿದ್ದರು. ಮಾತಂಗಿನಿ ಹಾಜರಾ ಅವರು ಅಕ್ಟೋಬರ್ 19, 1870 ರಂದು ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ರೈತರಾಗಿದ್ದರು, ಮತ್ತು ಅವರು ಎಂದಿಗೂ ಶಾಲೆಗೆ ಹೋಗಲಿಲ್ಲ. ಬಡತನದ ಕಾರಣದಿಂದಾಗಿ, ಅವರು ತಮ್ಮ 12 ನೇ ವಯಸ್ಸಿನಲ್ಲಿ ಮದುವೆಯಾದರು, ಮತ್ತು ಅವರ ಪತಿ ಬಹಳ ಬೇಗ ನಿಧನಹೊಂದಿದರು. 1942ರಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ, ಮಾತಂಗಿನಿ ಅವರು ತಾಮುಲಕ್‌ನಲ್ಲಿ ಹೆಚ್ಚಾಗಿ ಮಹಿಳೆಯರೇ ಇದ್ದ 6,000 ಬೆಂಬಲಿಗರ ನೇತೃತ್ವ ವಹಿಸಿದರು. ದೊಡ್ಡ ಮೆರವಣಿಗೆಯಲ್ಲಿ ಭಾಗವಹಿಸಲು ನಿರ್ಧರಿಸಿದ ಅವರು, ಸೆಪ್ಟೆಂಬರ್ 29 ರಂದು, ಪೊಲೀಸ್ ಠಾಣೆಯ ಕಡೆಗೆ ಮೆರವಣಿಗೆಯಲ್ಲಿ ಸಾಗಿದರು. ಬ್ರಿಟಿಷ್ ಆಡಳಿತವು ಇಡೀ ಪ್ರದೇಶದಲ್ಲಿ ಸೆಕ್ಷನ್ 144 ನ್ನು ಹೇರಿತು. ಆದರೆ ಮಾತಂಗಿನಿ ತ್ರಿವರ್ಣ ಧ್ವಜವನ್ನು ಹಿಡಿದು ವಂದೇ ಮಾತರಂ ಘೋಷಣೆ ಕೂಗುತ್ತಾ ಮುಂದೆ ಸಾಗುತ್ತಿದ್ದರು. ಇದ್ದಕ್ಕಿದ್ದಂತೆ, ಒಂದು ಗುಂಡು ಮಾತಂಗಿನಿಯವರ ಬಲಗೈಯನ್ನು ಭೇದಿಸಿತು. ಗಾಯಗೊಂಡರೂ ಮಾತಂಗಿನಿ ಮುಂದೆ ನಡೆಯಲಾರಂಭಿಸಿದರು. ಎರಡನೇ ಗುಂಡು ಅವರ ಹಣೆಗೆ ಹೊಡೆಯಿತು. ಆದರೂ ಅವರು ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದು ಕೊನೆಯ ಉಸಿರು ಇರುವವರೆಗೂ ವಂದೇ ಮಾತರಂ ಗೀತೆ ಹಾಡಿದರು. ಮಾತಂಗಿನಿ ಹಾಜರಾ ಅವರ ಈ ಅನೂಹ್ಯ ಧೈರ್ಯ, ಸ್ಫೂರ್ತಿ ಮತ್ತು ಸ್ವಾತಂತ್ರ್ಯದ ಬಯಕೆ ಇಡೀ ದೇಶಕ್ಕೆ ಮಾದರಿಯಾಗಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಆಗಸ್ಟ್ 15, 2021 ರಂದು ಕೆಂಪು ಕೋಟೆಯ ಮೇಲಿಂದ ಮಾತಂಗಿನಿ ಹಾಜರಾ ಅವರನ್ನು ಸ್ಮರಿಸಿದ್ದರು.

## ಕಮಲಾದೇವಿ: ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳುವಂತೆ ಮಹಾತ್ಮಾ ಗಾಂಧಿಯವರ ಮನವೊಲಿಸಿದ ಧೀಮಂತೆ



**ಜನನ: 3 ಏಪ್ರಿಲ್ 1903, ನಿಧನ: 29 ಅಕ್ಟೋಬರ್ 1988**

ಉಪ್ಪಿನ ಕಾನೂನನ್ನು ಪ್ರತಿಭಟಿಸಲು ಮಹಾತ್ಮಾ ಗಾಂಧಿ ದಾಂಡಿ ಯಾತ್ರೆ ನಡೆಸಲು ನಿರ್ಧರಿಸಿದಾಗ, ಅವರು ಮಹಿಳೆಯರನ್ನು ಯಾತ್ರೆಯಲ್ಲಿ ಸೇರಿಸಿಕೊಳ್ಳದಿರಲು ನಿರ್ಧರಿಸಿದ್ದರು. ಚರಕದಿಂದ ನೂಲುವ ಮೂಲಕ ಮತ್ತು ಮದ್ಯದಂಗಡಿಗಳಿಗೆ ಮುತ್ತಿಗೆ ಹಾಕುವ ಮೂಲಕ ಮಹಿಳೆಯರು ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಮಹಾತ್ಮಾ ಗಾಂಧಿ ನಿರ್ಧರಿಸಿದ್ದರು. ಈ ಮಾಹಿತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ತಲುಪಿದಾಗ, ಅವರು ಅದನ್ನು ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ ಮತ್ತು ಗಾಂಧೀಜಿ ಮನವೊಲಿಸಲು ಅವರನ್ನು ಭೇಟಿಯಾಗಲು ನಿರ್ಧರಿಸಿದರು. “ಉಪ್ಪಿನ ಸತ್ಯಾಗ್ರಹ”ದಲ್ಲಿ ಮಹಿಳೆಯರು ಭಾಗವಹಿಸಲೇಬೇಕು ಎಂದು ಅವರು ಭಾವಿಸಿದ್ದರು.

**ದೇಶದ ಸ್ವಾತಂತ್ರ್ಯಕ್ಕಾಗಿ 1936ರಲ್ಲಿ ಭಾರತದ ಹೊರಗೆ ರಾಜಕೀಯ ಸಂಪರ್ಕ ಗಳನ್ನು ಬೆಳೆಸುತ್ತಿದ್ದ ಕಮಲಾ ದೇವಿ ಚಟ್ಟೋಪಾಧ್ಯಾಯ ಅವರು ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷರಾಗಿಯೂ ಆಯ್ಕೆಯಾದರು.**

ಸಭೆಯಲ್ಲಿ ಕಮಲಾದೇವಿ ಅವರು ಮಹಾತ್ಮಾ ಗಾಂಧಿ ಅವರಿಗೆ ಮಹಿಳೆಯರನ್ನು ಈ ಆಂದೋಲನದಲ್ಲಿ ಸೇರಿಸಿಕೊಳ್ಳಬೇಕು ಎಂದು ಮನವರಿಕೆ ಮಾಡಲು ಸಾಧ್ಯವಾಯಿತು, ಇದು ಐತಿಹಾಸಿಕ ನಿರ್ಧಾರವೆಂದು ಸಾಬೀತಾಯಿತು. ಮಹಾತ್ಮಾ ಗಾಂಧಿಯವರು ಮಹಿಳೆಯರಿಗೆ ಯಾತ್ರೆಯಲ್ಲಿ ಭಾಗವಹಿಸಲು ಅನುಮತಿ ನೀಡಲು ಒಪ್ಪಿದ ನಂತರ, ಬಾಂಬೆಯಲ್ಲಿ ಉಪ್ಪಿನ ಸತ್ಯಾಗ್ರಹದ ನೇತೃತ್ವ ವಹಿಸಲು ಕಮಲಾ ದೇವಿ ಮತ್ತು ಅವಂತಿಕಾ ಬಾಯಿ ಗೋಖಲೆ ಸೇರಿದಂತೆ ಏಳು ಜನರ ತಂಡವನ್ನು ರಚಿಸಲಾಯಿತು. ಈ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಪರಿಣಾಮವಾಗಿ ಉಪ್ಪಿನ ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ ಅವರನ್ನು ಬಂಧಿಸಲಾಯಿತು. ಕಮಲಾ ದೇವಿ ಚಟ್ಟೋಪಾಧ್ಯಾಯ ಅವರು ಏಪ್ರಿಲ್ 3, 1903 ರಂದು ಕರ್ನಾಟಕದ ಮಂಗಳೂರಿನಲ್ಲಿ ಜನಿಸಿದರು. ಅವರು ಭಾರತಕ್ಕೆ ಹಿಂದಿರುಗುವ ಮೊದಲು ಲಂಡನ್ ವಿಶ್ವವಿದ್ಯಾಲಯದಿಂದ ಸಮಾಜ ವಿಜ್ಞಾನದಲ್ಲಿ ಡಿಪ್ಲೊಮಾ ಪಡೆದರು. ಭಾರತಕ್ಕೆ ಬಂದ ನಂತರ, ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು, ಗಾಂಧಿವಾದಿ ಸಂಘಟನೆ “ಸೇವಾದಳ”ಕ್ಕೆ ಸೇರಿದರು. 1936ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಅವರು ಅದ್ಭುತ ಬರಹಗಾರರೂ ಆಗಿದ್ದರು, ಭಾರತದಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಿದರು. ಅವರ ಕೊನೆಯ ಪುಸ್ತಕ “ಸ್ವಾತಂತ್ರ್ಯಕ್ಕಾಗಿ ಭಾರತೀಯ ಮಹಿಳಾ ಸಮರ” 1982ರಲ್ಲಿ ಪ್ರಕಟವಾಯಿತು. ಅಷ್ಟೇ ಅಲ್ಲ, ಅವರನ್ನು ಕೈಮಗ್ಗದ “ತಾಯಿ” ಎಂದೂ ಕರೆಯಲಾಗುತ್ತದೆ. ಕಮಲಾದೇವಿ ಭಾರತೀಯ ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳನ್ನು ಪುನಶ್ಚೇತನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಕಾರಣದಿಂದಲೇ ಆಕೆಗೆ ಆ ಶ್ರೇಯ ಸಲ್ಲುತ್ತದೆ. ಅವರು ಕರಕುಶಲ ಮತ್ತು ಸಹಕಾರಿ ಚಳವಳಿಗಳಲ್ಲಿ ಸಕ್ರಿಯರಾಗಿದ್ದರು, ಜೊತೆಗೆ ನಾಟಕ, ಕಲೆ, ರಂಗಭೂಮಿ, ಸಂಗೀತ ಮತ್ತು ಬೊಂಬೆಯಾಟವನ್ನು ಉತ್ತೇಜಿಸಲು ಹಲವಾರು ರಾಷ್ಟ್ರೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ, ಈಗ ರಾಷ್ಟ್ರೀಯ ನಾಟಕ ಶಾಲೆ ಎಂದು ಕರೆಯಲಾಗುವ ಭಾರತೀಯ ರಾಷ್ಟ್ರೀಯ ಥಿಯೇಟರ್ ಅನ್ನು 1944 ರಲ್ಲಿ ಸ್ಥಾಪಿಸಲಾಯಿತು. 1955ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದ ಅವರು 1987ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗೂ ಭಾಜನರಾದರು.

## ಗಿರಿವರಧಾರಿ ಚೌಧರಿ: ದಾಂಡಿ ಯಾತ್ರೆಯಲ್ಲಿ ಪಾಲ್ಗೊಂಡ ಬಿಹಾರದ ಏಕೈಕ ಸತ್ಯಾಗ್ರಹಿ

**ಜನನ: 11 ಜನವರಿ 1911 ನಿಧನ: 18 ಆಗಸ್ಟ್ 1990**

ಭಾರತೀಯ ಸ್ವಾತಂತ್ರ್ಯ ಹೋರಾಟದ ಅಪ್ರತಿಮ ಯೋಧ ಗಿರಿವರಧಾರಿ ಚೌಧರಿ ಅವರು ಚಿಕ್ಕ ವಯಸ್ಸಿನಲ್ಲಿಯೇ ಮಹಾತ್ಮಾ ಗಾಂಧಿ ಅವರನ್ನು ಭೇಟಿ ಮಾಡಿ, ಜೀವನದುದ್ದಕ್ಕೂ ಅವರು ತೋರಿದ ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸಿದರು. ನಾಗರಿಕ ಅಸಹಕಾರ ಚಳವಳಿಯ ಸಮಯದಲ್ಲಿ ಬ್ರಿಟಿಷ್ ಕಾನೂನುಗಳನ್ನು ಮುರಿಯಲು ಮಹಾತ್ಮಾ ಗಾಂಧಿ ಆಯ್ಕೆ ಮಾಡಿದ ಸತ್ಯಾಗ್ರಹಿಗಳಲ್ಲಿ ಗಿರಿವರಧಾರಿ ಚೌಧರಿ ಅವರೂ ಒಬ್ಬರು. ದಾಂಡಿ ಯಾತ್ರೆಯಲ್ಲಿ ಪಾಲ್ಗೊಂಡ ಬಿಹಾರದ ಏಕೈಕ ವ್ಯಕ್ತಿ ಗಿರಿವರಧಾರಿ. ಒಂದು ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರು, ‘ನೀವು ಬಿಹಾರದ ಘನತೆಯನ್ನು ಹೊಂದಿದ್ದೀರಿ’ ಎಂದು ಹೇಳಿದ್ದರು. ಈ ಯಾತ್ರೆಯಲ್ಲಿ ಸೇರಿದಾಗ ಅವರಿಗೆ ಕೇವಲ 20 ವರ್ಷ. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಅವರು ಮಹಾತ್ಮಾ ಗಾಂಧಿ ಅವರೊಂದಿಗೆ ದೃಢವಾಗಿ ನಿಂತರು. ಅಷ್ಟೇ ಅಲ್ಲ, ಚಳವಳಿಯ ಅಹಿಂಸಾ ತತ್ವ ಮತ್ತು ಗಾಂಧಿ ತತ್ವಗಳಿಗೆ ಬದ್ಧರಾಗಿದ್ದರು ಮತ್ತು ದಾಂಡಿ ಯಾತ್ರೆಯನ್ನು ಯಶಸ್ವಿಗೊಳಿಸಲು ತಮ್ಮ ಸಂಪೂರ್ಣ ಸಹಕಾರ ನೀಡಿದರು. ಮಹಾತ್ಮಾ ಗಾಂಧಿಯವರ ದಾಂಡಿ ಯಾತ್ರೆಯ ಪರಿಣಾಮವಾಗಿ, ಚಳವಳಿಯು ಬಿಹಾರದ ಅನೇಕ ಭಾಗಗಳಿಗೆ ತ್ವರಿತವಾಗಿ ಹಬ್ಬಿತು, ಮತ್ತು ಜನರು ಸಾಂಕೇತಿಕವಾಗಿ ಉಪ್ಪಿನ ಕಾನೂನನ್ನು ಮುರಿದರು ಮತ್ತು ಬಂಧಿತರಾದರು. ಗಿರಿವರಧಾರಿ ಚೌಧರಿಯವರನ್ನು ಕರಿಬಾಬು ಎಂದು ಕರೆಯಲಾಗುತ್ತಿತ್ತು. ಬಾಪು ಅವರೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದ ಅವರ ಹಿರಿಯ ಸಹೋದರ ಹರಿಗೋವಿಂದ ಚೌಧರಿ ಅವರ ಪ್ರಯತ್ನದಿಂದಾಗಿ ಅವರು ಸಾಬರಮತಿ ಆಶ್ರಮವನ್ನು ತಲುಪಲು ಸಾಧ್ಯವಾಯಿತು ಎಂದು ನಂಬಲಾಗಿದೆ. ಗಿರಿವರಧಾರಿ ಅವರ ಮನಸ್ಸಿನ ಮೇಲೆ ಗಾಂಧೀಜಿ ಅಪಾರ ಪ್ರಭಾವ ಬೀರಿದ್ದರು. ದಾಂಡಿ ಯಾತ್ರೆಯ ವೇಳೆ ಸಂಕಲ್ಪ ಮಾಡಿದ ನಂತರ, ಅವರು ಅಹಿಂಸೆ ಮತ್ತು ಬಾಪುವಿನ ಭಕ್ತರಾದರು. ಅಲ್ಲಿಂದ ಅವರು, ಬೇರೆ ಯಾವುದೇ ವಸ್ತ್ರ, ಚಪ್ಪಲಿ ಧರಿಸದೆ ಕೇವಲ ಖಾದಿ ಧೋತಿ ಮಾತ್ರ ಧರಿಸಿ ವಾಪಸ್ ಬಂದರು. ಅಷ್ಟೇ ಅಲ್ಲ, ದೇವಾನುದೇವತೆಗಳ ಜೊತೆಯಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅವರ ಮನೆಯಲ್ಲಿ ಇಟ್ಟಿದ್ದರು. ಅವರನ್ನು ಈ ಪ್ರದೇಶದಲ್ಲಿ ‘ಮೈಥಿಲ್ ಗಾಂಧಿ ಕಾರೋ ಬಾಬು’ ಎಂದು ಕರೆಯುತ್ತಿದ್ದರು.

## ದಾಂಡಿ ಯಾತ್ರೆಯಲ್ಲಿ ಭಾಗಿಯಾಗಿದ್ದ ಮಹಾತ್ಮಾ ಗಾಂಧಿಯವರ ಆಪ್ತ ಕಾರ್ಯದರ್ಶಿ ಪ್ಯಾರೆ ಲಾಲ್ ನಯ್ಯರ್

ಮಹಾತ್ಮಾ ಗಾಂಧಿಯವರ ದಾಂಡಿ ಯಾತ್ರೆಯಲ್ಲಿ ಭಾಗವಹಿಸಿದವರಲ್ಲಿ ಜೀವನ ಪರ್ಯಂತ ಗಾಂಧಿವಾದಿಯಾಗಿದ್ದ ಪ್ಯಾರೆ ಲಾಲ್ ನಯ್ಯರ್ ಕೂಡ ಇದ್ದರು. ಮಹಾತ್ಮಾ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಜೀವನದುದ್ದಕ್ಕೂ ಮಹಾತ್ಮಾ ಗಾಂಧಿಯವರ ಮಾರ್ಗವನ್ನು ಅನುಸರಿಸಿದರು. 1899 ರಲ್ಲಿ ದೆಹಲಿಯಲ್ಲಿ ಜನಿಸಿದ ನಯ್ಯರ್, ಮೊದಲು ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಬಿಎ ಪದವಿ ಪೂರ್ಣಗೊಳಿಸಿದರು. ಅಸಹಕಾರ ಚಳವಳಿಗೆ ಸೇರಲು 1920ರಲ್ಲಿ ತಮ್ಮ ಎಂಎ ಶಿಕ್ಷಣವನ್ನು ತ್ಯಜಿಸಿದರು. 1931ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಳ್ಳಲು ಪ್ಯಾರೆಲಾಲ್ ಅವರು ಮಹಾತ್ಮಾ ಗಾಂಧಿ ಅವರೊಂದಿಗೆ ಬಂದಿದ್ದರು. ಮಹಾತ್ಮಾ ಗಾಂಧಿಯವರೊಂದಿಗೆ ಬರ್ಮಾ ಮತ್ತು ಸಿಲೋನ್ ಗೂ ಭೇಟಿ ನೀಡಿದರು. 1946ರಲ್ಲಿ ಭಾರತದಲ್ಲಿ ಕೋಮು ಗಲಭೆಗಳು ಭುಗಿಲೆದ್ದಾಗ, ಅವರು ಮಹಾತ್ಮಾ ಗಾಂಧಿ ಅವರೊಂದಿಗೆ ಬಂಗಾಳ ಮತ್ತು ಇತರ ಸ್ಥಳಗಳಿಗೆ ಭೇಟಿ ನೀಡಿದರು. ಅವರು ನೌಖಾಲಿಯಲ್ಲಿ ಕೋಮು ಸೌಹಾರ್ದವನ್ನು ಮರುಸ್ಥಾಪಿಸುವ ಪ್ರಶಂಸನೀಯ ಕಾರ್ಯ ಮಾಡಿದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಏಳೆಂಟು ಬಾರಿ ಅವರನ್ನು ಬಂಧಿಸಲಾಯಿತು. ಇದಲ್ಲದೆ, ಅವರು ಮಹಾತ್ಮಾ ಗಾಂಧಿಯವರ ಚಿಂತನೆಗಳು ಮತ್ತು ಜೀವನದ ಬಗ್ಗೆ ಸಂಶೋಧನೆ ಮತ್ತು ಬರವಣಿಗೆಯಲ್ಲಿ ಗಮನಾರ್ಹ ಸಮಯವನ್ನು ಕಳೆದರು. ಅವರು ಹರಿಜನ (ಮಹಾತ್ಮಾ ಗಾಂಧಿ ಪ್ರಾರಂಭಿಸಿದ ಸಾಪ್ತಾಹಿಕ) ವನ್ನು ಸಂಪಾದಿಸುತ್ತಿದ್ದರು. ಅವರು ನಿಜವಾದ ಇತಿಹಾಸಕಾರ ಮತ್ತು ಮಹಾತ್ಮಾ ಗಾಂಧಿ ಅವರ ಜೀವನ ಮತ್ತು ತತ್ವಗಳ ವ್ಯಾಖ್ಯಾನಕಾರರಾಗಿದ್ದರು. 1982ರ ಅಕ್ಟೋಬರ್ 27ರಂದು ಪ್ಯಾರೆಲಾಲ್ ನಯ್ಯರ್ ನಿಧನಹೊಂದಿದರು.

## ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಬೋಧನಾ ವೃತ್ತಿಯನ್ನು ತ್ಯಜಿಸಿದ: ವಾಲ್ಜಿಭಾಯಿ ಗೋವಿಂದ ಜೀ ದೇಸಾಯಿ

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ದಾಂಡಿ ಯಾತ್ರೆ ಪ್ರಾರಂಭವಾದಾಗ, ಗುಜರಾತ್ ನಲ್ಲಿ ಅತಿ ಹೆಚ್ಚು ಸತ್ಯಾಗ್ರಹಿಗಳು (32) ಇದ್ದರು. ವಾಲ್ಜಿಭಾಯಿ ಗೋವಿಂದಜಿ ದೇಸಾಯಿಯವರು ಈ ಸತ್ಯಾಗ್ರಹಿಗಳಲ್ಲಿ ಒಬ್ಬರಾಗಿದ್ದರು. ಈ ಯಾತ್ರೆಯಲ್ಲಿ, ಅವರು ಬೌದ್ಧಿಕ ಪ್ರತಿಭೆಗೆ ಹೆಸರುವಾಸಿಯಾದ ಆಯ್ದ ಕೆಲವರಲ್ಲಿ ಒಬ್ಬರಾಗಿದ್ದರು. ವಾಸ್ತವವಾಗಿ, ಗುಜರಾತ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಬೋಧಿಸುತ್ತಿದ್ದ ಅವರು, ಇಂಗ್ಲಿಷ್ ನಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. 1916ರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಅನುಮತಿ ನಿರಾಕರಿಸಿದ ನಂತರ ಅವರು ವೃತ್ತಿಯನ್ನು ತ್ಯಜಿಸಿದರು. ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದಾಗ, ಅವರು ಸಾಬರಮತಿ ಆಶ್ರಮದಲ್ಲಿಯೇ ತಂಗಿದ್ದರು. ಇಲ್ಲಿಯೇ ವಾಲ್ಜಿಭಾಯಿ ಅವರು, ಗಾಂಧೀಜಿ ಅವರನ್ನು ಭೇಟಿ ಮಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದರು. 1921ರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಅವರನ್ನು ಬಂಧಿಸಲಾಯಿತು. ವಲ್ಜಿಭಾಯ್ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದರು, ಮತ್ತು ಅವರು 1920ರಲ್ಲಿ, ಗುಜರಾತ್ ವಿದ್ಯಾಪೀಠವನ್ನು ಅಹಮದಾಬಾದ್ ನಲ್ಲಿ ಸ್ಥಾಪಿಸಿದ ನಂತರ ಅದನ್ನು ಮುಂದುವರಿಸಿದರು. ಅಷ್ಟೇ ಅಲ್ಲ, ಗಾಂಧಿಯ ವಿಚಾರಗಳಿಂದ ಪ್ರೇರಿತವಾದ ಕೃತಿಗಳು ಮತ್ತು ಇತರ ಪುಸ್ತಕಗಳನ್ನು ಅವರು ಅನುವಾದಿಸಿದರು. ವಾಲ್ಜಿಭಾಯಿಯವರು 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಇತಿಹಾಸ' ಅನುವಾದಕ್ಕೂ ಕೊಡುಗೆ ನೀಡಿದರು. ಅವರು ಸಾಬರಮತಿಯಲ್ಲಿರುವ ಗಾಂಧಿಯವರ ಆಶ್ರಮದಲ್ಲಿಯೂ ತೊಡಗಿಕೊಂಡಿದ್ದರು, ಅಲ್ಲಿ ಅವರು ಮಹಾತ್ಮಾ ಗಾಂಧಿ ಅವರ ಯಂಗ್ ಇಂಡಿಯಾ ನಿಯತಕಾಲಿಕದ ಸಂಪಾದನೆಗೆ ಸಹಾಯ ಮಾಡುತ್ತಿದ್ದರು.

## ಬಾಪು ಪ್ರೀತಿಯಿಂದ "ಬಾ" ಎಂದು ಕರೆಯುತ್ತಿದ್ದ ಕಸ್ತೂರಿ ಬಾ ಗಾಂಧಿ

**ಜನನ: 11 ಏಪ್ರಿಲ್ 1869, ನಿಧನ: 22 ಫೆಬ್ರವರಿ 1944**



ರಾಷ್ಟ್ರಪಿತ ಮೋಹನದಾಸ್ ಕರಮ್ ಚಂದ್ ಗಾಂಧಿ ಅವರ ಧರ್ಮಪತ್ನಿಯಾಗಿ ಅಷ್ಟೇ ಅಲ್ಲದೆ, ಸ್ವಾತಂತ್ರ್ಯ ಹೋರಾಟದ ಪ್ರಮುಖ ಮಹಿಳಾ ನಾಯಕಿಯಾಗಿ ತಮ್ಮನ್ನು ಗುರುತಿಸಿಕೊಂಡವರು ಕಸ್ತೂರ ಬಾ ಗಾಂಧೀ. ಸ್ವತಃ ಬಾಪು ಅವರು ಕಸ್ತೂರಬಾ ಗಾಂಧಿಯಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ, ಅವರು ಅವರನ್ನು "ಬಾ" ಎಂದು ಕರೆಯುತ್ತಿದ್ದರು. ಸದಾ ತಮ್ಮ ಗಂಡನಿಗೆ ಹೆಂಡತಿಯಾಗಿ ಬೆಂಬಲಿಸುತ್ತಿದ್ದ ಕಸ್ತೂರಬಾ ಅವರು ದಾಂಡಿ ಯಾತ್ರೆ ಸಂದರ್ಭದಲ್ಲಿಯೂ ಸಹ, ಮಹಾತ್ಮಾ ಗಾಂಧಿಯನ್ನು ಸಂಪೂರ್ಣವಾಗಿ ಬೆಂಬಲಿಸಿದರು. ಈ ಕಾರಣದಿಂದಲೇ ಬಾಪು ಅವರು ಹಗಲಿರುಳು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ತಮ್ಮನ್ನು ಸಮರ್ಪಿಸಿಕೊಳ್ಳಲು ಸಾಧ್ಯವಾಯಿತು. 1932ರಲ್ಲಿ ಬಂಧನಕ್ಕೆ ಒಳಪಡುವ ಮೊದಲು 1930ರಲ್ಲಿ ಬಾರ್ಡೋಲಿಯಲ್ಲಿ ನಡೆದ "ಕರ ನಿರಾಕರಣೆ" ಅಭಿಯಾನ ಮತ್ತು ಉಪ್ಪಿನ ಸತ್ಯಾಗ್ರಹದಲ್ಲಿ ಕಸ್ತೂರ ಬಾ ಭಾಗವಹಿಸಿದ್ದರು. ದಾಂಡಿ ಮೆರವಣಿಗೆಯ ನಂತರ ಮಹಾತ್ಮಾ ಗಾಂಧಿಯವರನ್ನು ಬಂಧಿಸಿದಾಗ, ಕಸ್ತೂರಿ ಬಾ ಗಾಂಧಿಯವರೇ ಜನರನ್ನು ಪ್ರೇರೇಪಿಸಿದರು. ಆದರೆ ಆಯ್ದ ದಾಂಡಿ ಸತ್ಯಾಗ್ರಹಿಗಳಲ್ಲಿ ಅವರು ಇರಲಿಲ್ಲ. ಈ ಸಮಯದುದ್ದಕ್ಕೂ ಅವರು ಚಳವಳಿಗಾರರನ್ನು ನಿರಂತರವಾಗಿ ಬೆಂಬಲಿಸಿದರು, ಮಹಾತ್ಮಾ ಗಾಂಧಿಯವರಿಗೆ ಶಕ್ತಿ ತುಂಬಲು ತಮ್ಮ ಕೈಲಾದಷ್ಟು ಪ್ರಯತ್ನಿಸಿದರು. ಬಾಪು ಅವರು ಬಾ ಅವರನ್ನು ಸ್ಫೂರ್ತಿದಾಯಕ ವಿಮರ್ಶಕಿ ಎಂದು ಪರಿಗಣಿಸಿದ್ದರು ಎಂಬುದು ಗಮನಿಸಬೇಕಾದ ಅಂಶವಾಗಿದೆ. ಮಹಾತ್ಮಾ ಗಾಂಧಿಯವರ ಮುಂದೆ ಸತ್ಯಾಗ್ರಹ ಪ್ರಯೋಗದಲ್ಲಿ ಕಸ್ತೂರಬಾ ಯಶಸ್ವಿಯಾಗಿದ್ದರು ಎಂದು ಭಾವಿಸಲಾಗಿದೆ. ವಾಸ್ತವವಾಗಿ, ಮಹಾತ್ಮಾ ಗಾಂಧಿ ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಕಸ್ತೂರಬಾ ಗಾಂಧಿ ದೇಶದ ವೈವಾಹಿಕ ಕಾನೂನಿನ ವಿರುದ್ಧ ಸತ್ಯಾಗ್ರಹ ನಡೆಸಿದರು. ಈ ಸತ್ಯಾಗ್ರಹದಲ್ಲಿಯೂ ಆಕೆ ಯಶಸ್ವಿಯಾದರು, ಮತ್ತು ಅವರ ಸತ್ಯಾಗ್ರಹವು ಮಹಿಳೆಯರನ್ನು ಮನೆಯಿಂದ ಹೊರಬರಲು ಪ್ರೇರೇಪಿಸಿತು. ಇಷ್ಟೇ ಅಲ್ಲ, ಕಸ್ತೂರಬಾ ಗಾಂಧಿ ಪತ್ನಿಯಾಗಿ ತಮ್ಮ ಗಂಡನನ್ನು ಕೌಟುಂಬಿಕ ಜವಾಬ್ದಾರಿಗಳಿಂದ ಮುಕ್ತರನ್ನಾಗಿ ಮಾಡಿದರು ಮತ್ತು ಅವರು ಆಗಾಗ್ಗೆ ಶಾಂತಿಯುತವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಇದರಿಂದ ಪ್ರಭಾವಿತರಾದ ಮಹಾತ್ಮಾ ಗಾಂಧಿ, "ನಾನು ಕಸ್ತೂರಿ ಬಾ ಅವರಿಂದ ಅಹಿಂಸೆಯ ಪಾಠವನ್ನು ಕಲಿತಿದ್ದೇನೆ" ಎಂದು ಹೇಳುತ್ತಿದ್ದರು. ಕಸ್ತೂರಬಾ ಗಾಂಧಿ ಅವರು ಏಪ್ರಿಲ್ 11, 1869ರಂದು ಗುಜರಾತಿನ ಪೋರ್ ಬಂದರ್ ನಲ್ಲಿ ಉದ್ಯಮಿ ಗೋಕುಲದಾಸ್ ಕಪಾಡಿಯಾ ಅವರ ಪುತ್ರಿಯಾಗಿ ಜನಿಸಿದರು ಮತ್ತು ಮಹಾತ್ಮಾ ಗಾಂಧಿ ಅವರನ್ನು 14 ವರ್ಷದವಳಾಗಿದ್ದಾಗ ವಿವಾಹವಾದರು. ಕಸ್ತೂರಬಾ ಗಾಂಧಿ ತಮ್ಮ 74ನೇ ವಯಸ್ಸಿನಲ್ಲಿ 1944ರ ಫೆಬ್ರವರಿ 22ರಂದು ನಿಧನ ಹೊಂದಿದರು. ■

## ಜನೌಷಧಿ ಕೇಂದ್ರ

# ಸಾಮಾನ್ಯ ಜನತೆಗೆ ಪ್ರಯೋಜನಕಾರಿ




ಭವಿಷ್ಯದ ಸವಾಲುಗಳನ್ನು ಎದುರಿಸಲು, ಕೇಂದ್ರ ಸರ್ಕಾರವು ಆರೋಗ್ಯ ಮೂಲಸೌಕರ್ಯವನ್ನು ನಿರಂತರವಾಗಿ ಬಲಪಡಿಸುತ್ತಿದೆ. ಈ ಕಾರ್ಯಾಚರಣೆಯ ಭಾಗವಾಗಿ, ದೇಶಾದ್ಯಂತ 8.5 ಸಾವಿರಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ, ಅಲ್ಲಿ ಜನರು ಮಾರುಕಟ್ಟೆ ಬೆಲೆಗಿಂತ ಶೇ. 50-90 ಕಡಿಮೆ ದರಕ್ಕೆ ಔಷಧಗಳನ್ನು ಖರೀದಿಸಬಹುದು.

ಔಷಧೋಪಚಾರಕ್ಕಾಗಿ ಒಂದು ವೈದ್ಯರ ಚೀಟಿ ಪಡೆದ ನಂತರ, ಜನರು ಅದಕ್ಕಾಗಿ ಹೆಚ್ಚಿನ ಪ್ರಮಾಣದ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎಂಬ ಕಳವಳಕ್ಕೆ ಒಳಗಾಗುತ್ತಾರೆ. ಆದರೆ, ಜನೌಷಧಿ ಕೇಂದ್ರಗಳು, ಆ ಕಳವಳ ತಗ್ಗಿಸಿವೆ. ಜನೌಷಧಿ ಕೇಂದ್ರವು ದೇಹಕ್ಕೆ ಮದ್ದು ನೀಡುವುದರ ಜೊತೆಗೆ, ಮನಸ್ಸನ್ನೂ ಸಹ ನೋಡಿಕೊಳ್ಳುತ್ತದೆ. ಈ ಎಲ್ಲದರ ಅತ್ಯಂತ ಪ್ರಮುಖ ಅಂಶವೆಂದರೆ ಹಣವನ್ನು ಉಳಿಸುವುದು, ಜನರ ಆತಂಕವನ್ನು ನಿವಾರಿಸುವುದಾಗಿದೆ ಮತ್ತು ಇತರ ಬಳಕೆಗಳಿಗಾಗಿ ಆರ್ಥಿಕ ಸಂಪನ್ಮೂಲಗಳನ್ನು ಮುಕ್ತಗೊಳಿಸುವುದಾಗಿದೆ. ಈ ಆರ್ಥಿಕ ವರ್ಷದ ಅಂಕಿಅಂಶಗಳ ಪ್ರಕಾರ, 800 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಔಷಧಿಗಳನ್ನು ಜನೌಷಧಿ ಕೇಂದ್ರಗಳ ಮೂಲಕ ಮಾರಾಟ ಮಾಡಲಾಗಿದ್ದು, ಬಡ ಮತ್ತು ಮಧ್ಯಮ ವರ್ಗದ ಜನರು ಜನೌಷಧಿ ಕೇಂದ್ರಗಳ ಮೂಲಕ ಸುಮಾರು 5000 ಕೋಟಿ ರೂಪಾಯಿಗಳನ್ನು ಉಳಿಸಿದ್ದಾರೆ. ಯೋಜನೆಯು ಪ್ರಾರಂಭವಾದಾಗಿನಿಂದ ಎಲ್ಲಾ ಉಳಿತಾಯಗಳನ್ನು ಒಗ್ಗೂಡಿಸಿದರೆ, ಒಟ್ಟು ಉಳಿತಾಯದ ಮೊತ್ತವು 13,000 ಕೋಟಿ ರೂ.ಗಳಾಗುತ್ತವೆ.

ಈ ಕೇಂದ್ರಗಳಲ್ಲಿ ಮಹಿಳೆಯರಿಗೆ 1 ರೂ.ಗೆ ಸ್ಯಾನಿಟರಿ ನ್ಯಾಪ್ಕಿನ್ ಗಳು ಸಹ ಲಭ್ಯವಿದೆ. ಈ ಕೇಂದ್ರಗಳಿಂದ ಈವರೆಗೆ 21 ಕೋಟಿಗೂ ಹೆಚ್ಚು ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ಮಾರಾಟ ಮಾಡಲಾಗಿದೆ. ಮಾರ್ಚ್ 7 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜನೌಷಧಿ ಕೇಂದ್ರದ ಮಾಲೀಕರು ಮತ್ತು ಯೋಜನೆಯ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು. ಜನೌಷಧಿಗಳ ಬಳಕೆ ಮತ್ತು ಜನೌಷಧಿ ಯೋಜನೆಯ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಲು ಮಾರ್ಚ್ 1 ರಿಂದ ಜನೌಷಧಿ ಸಪ್ತಾಹವನ್ನು ಆಚರಿಸಲಾಗುತ್ತಿದೆ. "ಜನೌಷಧಿ- ಜನ ಉಪಯೋಗಿ" ಎಂಬುದು ಕಾರ್ಯಕ್ರಮದ ವಿಷಯವಾಗಿದೆ. ■

### ಯಶೋಗಾಥೆ ಹೇಳುವ ಅಂಕಿ-ಅಂಶಗಳು

**1451** ಜನೌಷಧಿಗಳು

**240** ಶಸ್ತ್ರಚಿಕಿತ್ಸೆ (ಸರ್ಜಿಕಲ್) ಮತ್ತು ಅದಕ್ಕೆ ಸಂಬಂಧಿತ ಸಲಕರಣೆಗಳು

**8,675** ಪಿಎಂಬಿಜೆಪಿಯ ಜನವರಿ 1, 2022 ರವರೆಗಿನ ಸಾಧನೆ

2024-2025 ರ ಹೊತ್ತಿಗೆ ದೇಶದಲ್ಲಿ **10,500** ಕೇಂದ್ರ ತೆರೆಯುವ ಗುರಿ

### ಬಲಗೊಳ್ಳುತ್ತಲೇ ಇದೆ ಆರೋಗ್ಯ ಮೂಲಸೌಕರ್ಯ

- ಕ್ಯಾನ್ಸರ್, ಕ್ಷಯ, ಮಧುಮೇಹ ಮತ್ತು ಹೃದ್ರೋಗದಂತಹ ರೋಗಗಳಿಗೆ ಚಿಕಿತ್ಸೆ ನೀಡಲು ಬಳಸುವ 800ಕ್ಕೂ ಹೆಚ್ಚು ಔಷಧಿಗಳ ಬೆಲೆಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರ ನಿಯಂತ್ರಣದಲ್ಲಿರಿಸಿದೆ.
- ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅರ್ಧದಷ್ಟು ಸೀಟುಗಳಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸರಿಸಮನಾಗಿ ಶುಲ್ಕ ವಿಧಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.
- ಆಯುಷ್ಮಾನ್ ಭಾರತ ಯೋಜನೆಯು ಈಗ 50 ಕೋಟಿಗೂ ಹೆಚ್ಚು ಜನರನ್ನು ಒಳಗೊಂಡಿದೆ. ಈ ಯೋಜನೆ ಆರಂಭವಾದಾಗಿನಿಂದ 3 ಕೋಟಿಗೂ ಹೆಚ್ಚು ಜನರು ಇದರ ಪ್ರಯೋಜನ ಪಡೆದಿದ್ದಾರೆ.

"

**ಜನೌಷಧಿ ಕೇಂದ್ರಗಳು ದೇಹಕ್ಕೆ ಮದ್ದು ನೀಡುವುದಲ್ಲದೆ ಮನಸ್ಸಿನ ಕಾಳಜಿಗೂ ಪರಿಹಾರವಾಗಿದೆ. ಇದಲ್ಲದೆ, ಅವರು ಹಣವನ್ನು ಉಳಿಸುವುದರಿಂದ ಜನರಿಗೆ ಪರಿಹಾರವನ್ನು ಸಹ ನೀಡುತ್ತಿದೆ. ವೈದ್ಯರ ಚೀಟಿಯಲ್ಲಿ ಬರೆಯಲಾದ ಔಷಧಿಗಳ ವೆಚ್ಚದ ಬಗ್ಗೆ ಆತಂಕವೂ ಕಡಿಮೆಯಾಗಿದೆ.**

ನರೇಂದ್ರ ಮೋದಿ, ಪ್ರಧಾನಮಂತ್ರಿ



**PMO India** @PMOIndia ·
मेरी आप सब युवाओं के लिए भी सलाह है- सफलता के लिए कभी कोई शॉर्टकट मत खोजिएगा!

सफलता का केवल एक ही मंत्र है- 'Long term planning, और continuous commitment'.

न एक जीत कभी हमारा आखिरी पड़ाव हो सकती है, न एक हार: PM @narendramodi



**Rajnath Singh** @rajna...
हम भारत को शक्तिमान, धनवान बनाने के साथ-साथ ज्ञानवान भी बनाना चाहते है और हर भारतीय को संस्कारवान भी बनाना चाहते है।

हमारी शक्ति दुनिया को डराने के लिए नही बल्कि जगत कल्याण के भाव से प्रेरित होगी।



**Amit Shah** @AmitShah
प्रधानमंत्री बनने के बाद @narendramodi जी ने अपने दूरगामी दृष्टिकोण से पुरानी धारणाओं को तोड़कर आज की जरूरतों के अनुसार चाहे अर्थतंत्र हो, इन्फ्रास्ट्रक्चर हो,आंतरिक सुरक्षा हो हर क्षेत्र में बदलाव लाने का काम किया।

RRU व NFSU मोदी जी के इसी दृष्टिकोण का उत्कृष्ट उदाहरण है।



**Nitin Gadkari** @nitin_gadkari
Striving for the fast paced development of our country, under the dynamic leadership of PM Shri @narendramodi ji, @MORTHIndia has created many world records in construction of roads.

Adding one more jewel to the crown of records, India Book of Records have awarded certificates in respect of creation of record for:
Highest Quantity of Bituminous Mix laid for road construction in 100 Hrs.



**Dr Mansukh Mandaviya** @ma...
180 करोड़ वैक्सीन डोज का आँकड़ा पार!

Powered by spirit of Jan-Bhagidari, the world's largest vaccination drive is touching new heights under PM @NarendraModi Ji's leadership.

Keep following COVID appropriate behaviour even after getting vaccinated.



**General Vijay Kumar...**
This extraordinary team went the extra mile to ensure that #IndianStudents coming from a hostile war zone were taken care of. So proud of each one of you!
Let us ensure that they are not unsung heroes of #OperationGanga
Let's make them famous
@IndiaInPoland #NoIndianLeftBehind

## Modi asks ministers to compile lists of central welfare schemes' achievements

Saubhadra Chatterji



Narendra Modi

## PM calls for police reforms: Be soft on society, strict on those instigating it

VAIBHAV JHA & AVINASH NAIR



PM Narendra Modi in Ahmedabad on Saturday.

## Modi rues lack of reforms in security apparatus post-1947

HT Correspondent



PM Narendra Modi presents a degree to a student at the first convocation of the Rashtriya Raksha University on Saturday. PTI

# PM reviews India's security readiness amid Ukraine war

Shishir Gupta
letters@hindustantimes.com

**NEW DELHI:** Prime Minister Narendra Modi chaired a high-level meeting on Sunday to review India's security preparedness amid the ongoing conflict in Ukraine.

The prime minister was fully briefed on the situation in Ukraine and its global fallout, the position of the Russian and Ukrainian forces. He was also informed of the assessment whether the situation would escalate.

Those who attended the meeting included defence minister Rajnath Singh, finance minister Nirmala Sitharaman, external affairs minister S Jaishankar, national security adviser Ajit Doval, cabinet secretary Rajiv Gauba, foreign secretary Harsh Shringla and defence secretary Dr Ajay Kumar.



Prime Minister Narendra Modi chairs a high-level meeting in New Delhi on Sunday amid the Russia-Ukraine crisis. PTI

In the wake of the missile attacks on the US consulate in Iraq's Kurdistan, the prime minister was briefed on India's security preparedness on the northern and western borders along with maritime and air defence, an official statement said.

"The Prime Minister was briefed on latest developments and different aspects of India's security preparedness in the border areas as well as in the maritime and air domain. The Prime Minister was also briefed on the latest developments in Ukraine, including the details of Operation Ganga to evacuate Indian nationals, along with some citizens of India's neighbouring countries, from Ukraine," the statement added.

So far, India has been able to rescue around 20,000 stranded citizens in more than 80 special evacuation flights. Meanwhile, external affairs minister S Jaishankar will issue a statement on Operation Ganga in the second leg of the budget session.

"Prime Minister Modi directed that all possible efforts should be made to bring back the mortal remains of Naveen Shekharappa, who died in Kharkiv," the statement said.

He will also speak on India's stand vis-a-vis the conflict between Russia and Ukraine. The prime minister directed that all possible efforts should be made to bring back the mortal remains of 21-year-old medical student Naveen Shekharappa, who died in Kharkiv.

## Officials involved in bullet train project to take course in Japanese

Neha LM Tripathi
neha.tripathi@htlive.com

**NEW DELHI:** Officials involved in the bullet train initiative in India will take a crash course in Japanese language and culture to be able to better interact with Japanese colleagues, according to an internal communication of the National High Speed Rail Corporation on Friday.

"These classes will be conducted both online and offline. It will be conducted thrice a week and will involve employees of all grades," an official said, requesting anonymity.

"A total of around 30 employees will be nominated by their respective head of departments for the language course. These nominations will be finalized by Tuesday."

The induction course began briefly before the coronavirus pandemic in 2019.

The state-owned firm building the bullet trains and railway tracks employs around 700 people, out of which 150 are permanent staff.



India has enlisted help of Japan to assist construction of first line, a 508km link between Mumbai and Ahmedabad. AP

The foundation stone for the Mumbai to Ahmedabad bullet train project was laid by Prime Minister Narendra Modi and his Japanese counterpart Shinzo Abe in 2017.

"Knowledge of the Japanese language is needed because one has to learn from the Japanese. It is difficult to learn if one is not able to communicate," said the official. India has enlisted the help of Japanese technology, engineers and finance to assist in the construction of its first line, a 508km link between Mumbai and Ahmedabad.

The corporation, an arm of the Indian Railways tasked with building and managing bullet train projects, has also submitted detailed reports for a Delhi to Varanasi link last year, and a Mumbai to Nagpur link in February.

RNI No. :
DELKAN/2020/78828
April: 1-15, 2022

ನ್ಯೂ ಇಂಡಿಯಾ
ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 26-30 advance Fortnightly (Publishing Date March 19, 2022, Pages - 48)

# 14 ಏಪ್ರಿಲ್
# ಡಾ. ಭೀಮ್ ರಾವ್ ಅಂಬೇಡ್ಕರ್ ಜಯಂತಿ




"40ರ ದಶಕದಲ್ಲಿ, ಹೆಚ್ಚಿನ ಚರ್ಚೆಗಳು ಎರಡನೇ ಮಹಾಯುದ್ಧ, ಶೀತಲ ಸಮರ ಮತ್ತು ವಿಭಜನೆಯ ಸುತ್ತ ಕೇಂದ್ರೀಕೃತವಾಗಿದ್ದರೂ, ಆ ಸಮಯದಲ್ಲಿ ಡಾ. ಅಂಬೇಡ್ಕರ್ ಅವರು ಒಂದು ರೀತಿಯಲ್ಲಿ ಟೀಮ್ ಇಂಡಿಯಾದ ಸ್ಫೂರ್ತಿಗೆ ಅಡಿಪಾಯ ಹಾಕಿದ್ದರು. ಅವರು ಒಕ್ಕೂಟ ತತ್ವ, ಒಕ್ಕೂಟ ವ್ಯವಸ್ಥೆಯ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದ್ದರು ಮತ್ತು ದೇಶದ ಉನ್ನತಿಗಾಗಿ ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಶ್ರಮಿಸುವ ಬಗ್ಗೆ ಒತ್ತಿ ಹೇಳಿದ್ದರು. ಇಂದು ನಾವು ಆಡಳಿತದ ಎಲ್ಲ ಆಯಾಮಗಳಲ್ಲಿ ಸಹಕಾರ ಒಕ್ಕೂಟ ವ್ಯವಸ್ಥೆಯ ಮಂತ್ರವನ್ನು ಅಳವಡಿಸಿಕೊಂಡಿದ್ದೇವೆ ಮತ್ತು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದೇವೆ, ನಾವು ಸ್ಪರ್ಧಾತ್ಮಕ ಸಹಕಾರ ಒಕ್ಕೂಟ ವ್ಯವಸ್ಥೆ ಅಳವಡಿಸಿಕೊಂಡಿದ್ದೇವೆ ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಿಂದುಳಿದ ವರ್ಗಗಳಿಗೆ ಸೇರಿದ ನನ್ನಂತಹ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದಾರೆ.

- ನರೇಂದ್ರ ಮೋದಿ
ಪ್ರಧಾನಮಂತ್ರಿ

ಸಂಪಾದಕರು
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪಿಐಬಿ ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
**ಸತ್ಯೇಂದ್ರ ಪ್ರಕಾಶ್**
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್ ಪರವಾಗಿ

ಪ್ರಕಾಶಕರು
**ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್**
ಕೊಠಡಿ ಸಂ. 278, 2ನೇ ಮಹಡಿ, ಸೂಚನಾ ಭವನ,
ನವದೆಹಲಿ - 110003

ಮುದ್ರಣ:
**ಇನ್‌ಫಿನಿಟಿ ಅಡ್ವಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್**
ಎಫ್‌ಬಿಡಿ-ಒನ್ ಕಾರ್ಪೊರೇಟ್ ಪಾರ್ಕ್, 10ನೇ ಮಹಡಿ
ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003

Kannada Vol. 2
Issue 19